ನಿದರ್ಶನ 16.

A, B ಮತ್ತು C ರವರ ಪಾಲುದಾರರಾಗಿದ್ದು, 2:3:5ರ ಅನುಪಾತದಲ್ಲಿ ಲಾಭ ನಷ್ಟಗಳನ್ನು ಹಂಚಿಕೊಳ್ಳುವರು. ದಿನಾಂಕ 31–3–2014 ರಂದು ಅವರ ಅಢಾವೆ ಪತ್ರಿಕೆಯು ಕೆಳಕಂಡಂತಿದೆ.

ದಿನಾಂಕ 31–03–2014 ರಂದು ಅಢಾವೆ ಪತ್ರಿಕೆ

ಜವಾಬ್ದಾರಿಗಳು	₹	₹	ಆಸ್ತಿಗಳು	₹	₹
ಧಣಿಗಳು		38,000	ಬ್ಯಾಂಕು		45,000
ಕೊಡತಕ್ಕ ಹುಂಡಿಗಳು		35,000	ಋಣಿಗಳು	40,000	
ಮೀಸಲು ನಿಧಿ		30,000	–ಕಾಯ್ದಿರಿಸಿದ ನಿಧಿಗಳು	5,000	35,000
ಬಂಡವಾಳ			ದಾಸ್ತಾನು		25,000
A	80,000		ಪೀಠೋಪಕರಣಗಳು		28,000
B	70,000		ಮೋಟಾರು ಕಾರು		20,000
C	60,000	2,10,000	ಯಂತ್ರೋಪಕರಣಗಳು		55,000
			ಕಟ್ಟಡಗಳು		80,000
			ಲಾಭ ನಷ್ಟಗಳ ಖಾತೆ		25,000
		3,13,000			**3,13,000**

ಮೇಲ್ಕಂಡ ದಿನಾಂಕದಂದು 'A' ರವರು ಈ ಕೆಳಕಂಡ ಷರತ್ತುಗಳ ಅನುಸಾರ ನಿವೃತ್ತರಾಗಿದ್ದಾರೆ :

a) ಯಂತ್ರೋಪಕರಣಗಳು, ಪೀಠೋಪಕರಗಳು ಹಾಗೂ ಮೋಟಾರು ಕಾರುಗಳ ಮೇಲೆ ಶೇ 10% ರ ಸವಕಳಿಯನ್ನು ಮಾಡಿ.

b) ದಾಸ್ತಾನು ಹಾಗೂ ಕಟ್ಟಡಗಳ ಮೌಲ್ಯವನ್ನು ಪ್ರತಿಯೊಂದನ್ನು ಶೇ 5% ಹೆಚ್ಚಿಸಿ.

c) ಕರಡು ಸಾಲಗಳ ಕಾಯ್ದಿಟ್ಟ ನಿಧಿಯನ್ನು ಶೇ 20% ಕಾಪಾಡಿ.

d) ಬಾಕಿ ಇರುವ ವೇತನ ₹ 3,000.

e) ಸಂಸ್ಥೆಯ ಕೀರ್ತಿ ಮೌಲ್ಯವನ್ನು ₹ 40,000, ಗೆ ನಿಗದಿಪಡಿಸಿದೆ. A ಪಾಲುದಾರನ ಪಾಲಿನ ಕೀರ್ತಿ ಮೌಲ್ಯವನ್ನು ಸೃಷ್ಟಿಸಿ ತಕ್ಷಣ ತೊಡೆದು ಹಾಕಿ.

f) A ಪಾಲುದಾರನಿಗೆ ಬಾಕಿ ಇರುವ ಹಣವನ್ನು ಬ್ಯಾಂಕಿನ ಮೀರೆಳೆತದ ಮೂಲಕ ಚುಕ್ತಾ ಗೊಳಿಸಲು ಉಳಿಕೆ ಪಾಲುದಾರರು ನಿರ್ಧರಿಸಿದ್ದಾರೆ.

ಈ ಕೆಳಗಿನವುಗಳನ್ನು ತಯಾರಿಸಿ.

1) ಮರು ಮೌಲ್ಯ ಮಾಪನದ ಖಾತೆ

2) ಎಲ್ಲಾ ಪಾಲುದಾರ ಬಂಡವಾಳ ಖಾತೆಗಳು

3) ಹೊಸ ಸಂಸ್ಥೆಯ ಅಢಾವೆ ಪತ್ರಿಕೆ.

ನಿರೂಪಣೆ :

ಖರ್ಚು **ಮರು ಮೌಲ್ಯ ಮಾಪನದ ಖಾತೆ** ಜಮಾ

ವಿವರಗಳು	₹	ವಿವರಗಳು	₹	₹
ಗೆ, ಯಂತ್ರೋಪಕರಣಗಳ ಖಾತೆ (55,000x10/100)	5,500	ಯಿಂದ, ದಾಸ್ತಾನು ಖಾತೆ (25,000x5/100)		1,250
ಗೆ, ಪೀಠೋಪಕರಣಗಳ ಖಾತೆ (28,000x10/100)	2,800	ಯಿಂದ, ಕಟ್ಟಡಗಳ ಖಾತೆ (80,00x5/100)		4,000
ಗೆ, ಮೋಟಾರು ಕಾರುಗಳ ಖಾತೆ (20,000x10/100)	2,000	ಯಿಂದ, ಪಾಲುದಾರರ ಬಂಡವಾಳ ಖಾತೆಗಳು		
ಗೆ, ಕರಡು ಸಾಲಗಳ ಕಾಯ್ದಿಟ್ಟ ನಿಧಿ ಖಾತೆ (40,000x20/100 -5,000)	3,000	A(11,050X2/10)	2,210	
		B(11,050X3/10)	3,315	
ಗೆ, ಬಾಕಿ ಇರುವ ವೇತನ ಖಾತೆ	3,000	C(11,050X5/10)	5,525	11,050
	16,300			**16,300**

ಖರ್ಚು **ಪಾಲುದಾರರ ಬಂಡವಾಳ ಖಾತೆಗಳು** ಜಮಾ

ವಿವರಗಳು	A ₹	B ₹	C ₹	ವಿವರಗಳು	A ₹	B ₹	C ₹
ಗೆ, ಮರು ಮೌಲ್ಯ ಮಾಪನ ಖಾತೆ	2,210	3,315	5,525	ಯಿಂದ, ಪ್ರಾರಂಬದ ಶಿಲ್ಕು	80,000	70,000	60,000
ಗೆ, ಲಾಭ & ನಷ್ಟಗಳ ಖಾತೆ	5,000	7,500	12,500	ಯಿಂದ, ಮೀಸಲು ನಿಧಿ	6,000	9,000	15,000
				ಯಿಂದ, ಕೀರ್ತಿ ಮೌಲ್ಯ ಖಾತೆ	8,000		
ಗೆ, ಕೀರ್ತಿ ಮೌಲ್ಯದ ಖಾತೆ		3,000	5,000				
ಗೆ, ಬ್ಯಾಂಕಿನ ಖಾತೆ (ಮೀರಳು)	86,790						
ಗೆ, ಅಂತಿಮ ಶಿಲ್ಕು		65,185	51,975				
	94,000	**79,000**	**75,000**		**94,000**	**79,000**	**75,000**
				ಯಿಂದ ಪ್ರಾರಂಭಿಕ ಶಿಲ್ಕು		65,185	51,975

ಖರ್ಚು **ಬ್ಯಾಂಕ್ ಖಾತೆ** ಜಮಾ

ವಿವರಗಳು	₹	ವಿವರಗಳು	₹
ಗೆ, ಪ್ರಾರಂಭಿಕ ಶಿಲ್ಕು	45,000	ಯಿಂದ, 'A' ನ ಬಂಡವಾಳ ಖಾತೆ	86,700
ಗೆ, ಅಂತಿಮ ಶಿಲ್ಕು	41,790		
	86,700		**86,700**
		ಯಿಂದ, ಪ್ರಾರಂಭಿಕ ಶಿಲ್ಕು	41,790

ಖರ್ಚು **ಕೀರ್ತಿ ಮೌಲ್ಯದ ಖಾತೆ** ಜಮ

ವಿವರಗಳು	₹	ವಿವರಗಳು	₹
ಗೆ, 'A' ನ ಬಂಡವಾಳ ಖಾತೆ (40,000X2/10)	8,000	ಯಿಂದ 'B' ನ ಬಂಡವಾಳ ಖಾತೆ (8,000X3/8)	3,000
		ಯಿಂದ 'C' ನ ಬಂಡವಾಳ ಖಾತೆ (8,000x5/8) (ಗಳಿಕೆ ಅನುಪಾತ i.e.2:**3:5**)	5,000
	8,000		**8,000**

ದಿನಾಂಕ 1 – 4 – 2014 ರ B ಮತ್ತು C ರವರ ಅಢಾವೆ ಪತ್ರಿಕೆ

ಜವಾಬ್ದಾರಿಗಳು	₹	₹	ಆಸ್ತಿಗಳು	₹	₹
ಧಣಿಗಳು		38,000	ಋಣಗಳು	40,000	
ಕೊಡತಕ್ಕ ಹುಂಡಿಗಳು		35,000	– ಕಾಯ್ದಿರಿಸಿದ್ದು	8,000	32,000
ಬ್ಯಾಂಕಿನ ಮೀರೆಳಿದ		41,790	(5,000+3,000)		
ಬಂಡವಾಳ :			ದಾಸ್ತಾನು	25,000	
			+ ಹೆಚ್ಚಳ	1,250	26,250
B	65,185		ಪೀಠೋಪಕರಣಗಳು	28,000	
C	51,975	1,17,160	– ಸವಕಳಿ	2,800	25,200
ಬಾಕಿ ಇರುವ ವೇತನ		3,000	ಮೋಟಾರು ಕಾರು	20,000	
			– ಸವಕಳಿ	2,000	18,000
			ಯಂತ್ರೋಪಕರಣ	55,000	
			– ಸವಕಳಿ	5,500	49,500
			ಕಟ್ಟಡಗಳು	80,000	
			+ ಹೆಚ್ಚಳ	4,000	84,000
		2,34,950			**2,34,950**

ನಿದರ್ಶನ 17.

VR, GR ಮತ್ತು PR ರವರ ಪಾಲುದಾರರಾಗಿದ್ದು 3 : 2 : 1 ರ ಅನುಪಾತದಲ್ಲಿ ಲಾಭ ನಷ್ಟಗಳನ್ನು ಹಂಚಿಕೊಳ್ಳುವರು. ದಿನಾಂಕ 31–03–2014 ರಂದು ಅವರ ಅಢಾವೆ ಪತ್ರಿಕೆಯು ಈ ಕೆಳಕಂಡತಿದೆ.

ಜವಾಬ್ದಾರಿಗಳು	₹	₹	ಆಸ್ತಿಗಳು	₹	₹
ಧಣಿಗಳು		26,000	ನಗದು		2,500
ಕೊಡತಕ್ಕ ಹುಂಡಿಗಳು		4,000	ಋಣಿಗಳು	16,000	
ಲಾಭ ನಷ್ಟಗಳ ಖಾತೆ		6,000	– ಕರಡು ಸಾಲಗಳ ನಿಧಿ	500	15,500
ಬಂಡವಾಳ :			ದಾಸ್ತಾನು		25,000
VR	50,000		ಮೋಟಾರು ಕಾರು		8,000
GR	30,000		ಯಂತ್ರೋಪಕರಣಗಳು		35,000
PR	20,000	1,00,000	ಕಟ್ಟಡಗಳು		50,000
		1,36,000			**1,36,000**

ವಸತಿಯ ಬದಲಾವಣೆಯ ಕಾರಣದಿಂದ GR ರವರು ನಿವೃತ್ತಿಯಾಗಿರುತ್ತಾರೆ, ಹಾಗು ಕೆಳಕಂಡ ಹೊಂದಾಣಿಕೆಗಳನ್ನು ಮಾಡಬೇಕು.

1. ಸಂಸ್ಥೆಯ ಕೀರ್ತಿ ಮೌಲ್ಯವನ್ನು ₹ 45,000ಕ್ಕೆ ಮೌಲ್ಯಕರಿಸಲಾಯಿತು. GR ರವರ ಪಾಲಿನ ಕೀರ್ತಿ ಮೌಲ್ಯವನ್ನು ಸೃಷ್ಟಿಸಿ, ಕೀರ್ತಿ ಮೌಲ್ಯದ ಖಾತೆಯನ್ನು ತೆರೆಯದೆ ತೊಡೆದು ಹಾಕಿ.
2. ಆಸ್ತಿಗಳನ್ನು ಕೆಳಕಂಡಂತೆ ಮರು ಮೌಲ್ಯ ಮಾಪನ ಮಾಡಲಾಗಿದೆ.

ಕಟ್ಟಡಗಳು	₹ 58,000	ಮೋಟಾರು ಕಾರು	₹ 5,000
ಯಂತ್ರೋಪಕರಣ	₹ 33,000	ದಾಸ್ತಾನು	₹ 30,000

3. ಕರಡು ಸಾಲಗಳ ಕಾಯ್ದಿರಿಸಿದ ನಿಧಿ ಶೇ 5%ಕ್ಕೆ ಹೆಚ್ಚಿಸಿ ಹಾಗು ಧಣಿಗಳ ಮೀಸಲು ಸೋಡಿಯನ್ನು ಶೇ 2% ರಷ್ಟು ಸೃಷ್ಟಿಸಿ.
4. VR ಮತ್ತು PR ರವರು ಮುಂದಿನ ಲಾಭ & ನಷ್ಟಗಳನ್ನು 3:2ರ ಅನುಪಾತದಲ್ಲಿ ಹಂಚಿಕೊಳ್ಳಲು ಒಪ್ಪಿರುತ್ತಾರೆ.

ಈ ಕೆಳಗಿನವುಗಳನ್ನು ತಯಾರಿಸಿ.

1) ಮರು ಮೌಲ್ಯ ಮಾಪನ ಖಾತೆ 2) ಪಾಲುದಾರರ ಬಂಡವಾಳ ಖಾತೆ

3) ಹೊಸ ಸಂಸ್ಥೆಯ ಅಢಾವೆ ಪತ್ರಿಕೆ.

ನಿರೂಪಣೆ :

ಟಿಪ್ಪಣಿ :

A) VR ಮತ್ತು PR ರವರ ಗಳಿಕೆಯ ಅನುಪಾತವನ್ನು ಲೆಕ್ಕ ಹಾಕುವುದು:

ಗಳಿಸಿದ ಪಾಲು = ಹೊಸ ಪಾಲು – ಹಳೆಯ ಪಾಲು.

VR ಗಳಿಸಿದ ಪಾಲು = $\frac{3}{5}-\frac{3}{6}=\frac{18-15}{30}=\frac{3}{30}$

PR ಗಳಿಸಿದ ಪಾಲು = $\frac{2}{5}-\frac{1}{6}=\frac{12-5}{30}=\frac{7}{30}$

VR ಮತ್ತು PR ರವರ ಗಳಿಸಿದ ಅನುಪಾತ = $\frac{3}{30}:\frac{7}{30}$ ಅಥವಾ 3:7.

B) GR ರವರ ಪಾಲಿನ ಕೀರ್ತಿ ಮೌಲ್ಯವು = 45,000 × $\frac{2}{6}$ = ₹15,000.

GR ಪಾಲಿನ ಕೀರ್ತಿ ಮೌಲ್ಯವನ್ನು ಸೃಷ್ಟಿಸಿ ಕೀರ್ತಿ ಮೌಲ್ಯದ ಖಾತೆಯನ್ನು ತೆರೆಯದೆ ತೊಡೆದು ಹಾಕಿದ್ದಕ್ಕೆ ರೋಜು ದಾಖಲೆ :

VR ರ ಬಂಡವಾಳ ಖಾತೆ ಖರ್ಚು (15,000X3/10)	4,500	
PR ರ ಬಂಡವಾಳ ಖಾತೆ ಖರ್ಚು (15,000X7/10)	10,500	
GR ರ ಬಂಡವಾಳ ಖಾತೆಗೆ ಜಮ (45000 X 2/6)		15,000

ಖರ್ಚು **ಮರು ಮೌಲ್ಯ ಮಾಪನದ ಖಾತೆ** ಜಮ

ವಿವರಗಳು	₹	ವಿವರಗಳು	₹
ಗೆ, ಮೋಟಾರು ಕಾರು ಖಾತೆ (8,000-5,000)	3,000	ಯಿಂದ, ಕಟ್ಟಡಗಳ ಖಾತೆ (58,000-50,000)	8,000
ಗೆ, ಯಂತ್ರೋಪಕರಣ ಖಾತೆ (35,000-33,000)	2,000	ಯಿಂದ, ದಾಸ್ತಾನು ಖಾತೆ (30,000-25,000)	5,000
ಗೆ, ಕರಡು ಸಾಲದ ಕಾಯ್ದಿಟ್ಟ ನಿಧಿ ಖಾತೆ (16,000X5/100-500)		300 ಯಿಂದ, ಧಣಿಗಳ ಮೇಲಿನ ಮೀಸಲು ಸೋಡಿ (26,000X2/100)	520
ಗೆ, ಪಾಲುದಾರರ ಬಂಡವಾಳ ಖಾತೆಗಳು : VR(8,220X3/6) 4,110 GR (8,220X2/6) 2,740 PR (8,220X1/6) 1,370	8,220		
	13,520		**13,520**

ಖರ್ಚು **ಪಾಲುದಾರರ ಬಂಡವಾಳ ಖಾತೆಗಳು** ಜಮ

ವಿವರಗಳು	VR ₹	GR ₹	PR ₹	ವಿವರಗಳು	VR ₹	GR ₹	PR ₹
ಗೆ, GR ರ ಬಂಡವಾಳ ಖಾತೆ	4,500		10,500	ಯಿಂದ, ಪ್ರಾರಂಬಿಕ ಶಿಲ್ಕು	50,000	30,000	20,000
ಗೆ, GR ರ ಸಾಲದ (ಖಾತೆ)		49,740		ಯಿಂದ, ಮರು ಮೌಲ್ಯ ಮಾಪನ ಖಾತೆ	4,110	2,740	1,370
ಗೆ, ಅಂತಿಮ ಶಿಲ್ಕು	52,610		11,870	ಯಿಂದ, ಲಾಭ & ನಷ್ಟದ ಖಾತೆ	3,000	2,000	1,000
				ಯಿಂದ, VR ರ ಬಂಡವಾಳ ಖಾತೆ		4,500	
				ಯಿಂದ, PR ರ ಬಂಡವಾಳ ಖಾತೆ		10,500	
	57,110	**49,740**	**22,370**		**57,110**	**49,740**	**22,370**
				ಯಿಂದ, ಪ್ರಾರಂಬಿಕ ಶಿಲ್ಕು	52,610		11,870

ದಿನಾಂಕ 1 – 4 – 2014 ರ VR ಮತ್ತು PR ರವರ ಆಢಾವೆ ಪತ್ರಿಕೆ

ಜವಾಬ್ದಾರಿಗಳು	₹	₹	ಆಸ್ತಿಗಳು	₹	₹
ಧಣಿಗಳು	26,000		ನಗದು		2,500
– ಮೀಸಲು ಸೋಡಿ	520	25,480	ಋಣಿಗಳು	16,000	
ಕೊಡತಕ್ಕ ಹುಂಡಿಗಳು		4,000	– ಕ.ಸಾ.ಕಾ.ನಿ.	800	15,200
ಬಂಡವಾಳ :			ದಾಸ್ತಾನು	25,000	
VR	52,610		+ ಹೆಚ್ಚಳ	5,000	30,000
PR	11,870	64,480	ಮೋಟಾರು ಕಾರು	8,000	
GR ರವರ ಸಾಲದ ಖಾತೆ		49,740	– ಸವಕಳಿ	3,000	5,000
			ಯಂತ್ರೋಪಕರಣ	35,000	
			– ಸವಕಳಿ	2,000	33,000
			ಕಟ್ಟಡಗಳು	50,000	
			+ ಹೆಚ್ಚಳ	8,000	58,000
		1,43,700			**1,43,700**

ನಿದರ್ಶನ 18.

ಆಕಾಶ್, ಪೃಥ್ವಿ ಮತ್ತು ಸಾಗರ್ ರವರು ಪಾಲುದಾರರಾಗಿದ್ದು, ಇವರು 5:3:2 ರ ಅನುಪಾತದಲ್ಲಿ ಲಾಭ ನಷ್ಟಗಳನ್ನು ಹಂಚಿಕೊಳ್ಳುತ್ತಾರೆ. ದಿನಾಂಕ 31–3–2014 ರಂದು ಅವರ ಆಢಾವೆ ಪತ್ರಿಕೆಯು ಈ ಕೆಳಕಂಡಂತಿದೆ.

ಜವಾಬ್ದಾರಿಗಳು	₹	₹	ಆಸ್ತಿಗಳು	₹	₹
ಬಂಡವಾಳಗಳು			ಕಟ್ಟಡಗಳು		40,000
ಆಕಾಶ್	72,000		ಯಂತ್ರೋಪಕರಣಗಳು		46,500
ಪೃಥ್ವಿ	41,500		ಹೂಡಿಕೆಗಳು		28,000
ಸಾಗರ್	34,500	1,48,000	ಪೀಠೋಪಕರಣಗಳು		7,700
ಮೀಸಲು ನಿಧಿ		18,000	ದಾಸ್ತಾನು		18,500
ಧಣಿಗಳು		12,400	ಋಣಿಗಳು	17,200	
ಬಾಕಿಯಿರುವ		1,600	–ಕ.ಸಾ.ಮೀ	1,200	16,000
ಖರ್ಚುಗಳು			ನಗದು		23,300
		1,80,000			**1,80,000**

ಮೇಲ್ಕಂಡ ದಿನಾಂಕದಂದು ಪೃಥ್ವಿ ನಿವೃತ್ತರಾಗಿರುತ್ತಾರೆ ಹಾಗೂ ಕೆಳಕಂಡ ಹೊಂದಾಣಿಕೆಗಳಿಗೆ ಒಪ್ಪಿರುತ್ತಾರೆ.

1. ದಾಸ್ತಾನಿನ ಮರುಮೌಲ್ಯ ₹ 17,200 ಹಾಗೂ ಪೀಠೋಪಕರಣ ಮೌಲ್ಯವನ್ನು ₹ 800 ರಷ್ಟು ಹೆಚ್ಚಿಸ ಬೇಕು.
2. ಕಟ್ಟಡಗಳ ಮೌಲ್ಯವನ್ನು ಶೇ 10 ರಷ್ಟು ಹೆಚ್ಚಿಸಿ ಮತ್ತು ಯಂತ್ರೋಪಕರಣಗಳಿಗೆ ಶೇ 5 ರಷ್ಟು ಸವಕಳಿ ಮಾಡಿ.
3. ಕರಡು ಸಾಲದ ಕಾಯ್ದಿಟ್ಟ ನಿಧಿ ಅವಶ್ಯಕತೆ ಇರುವುದಿಲ್ಲ.
4. ಸಂಸ್ಥೆಯ ಕೀರ್ತಿ ಮೌಲ್ಯವನ್ನು ₹ 18,000, ರಷ್ಟು ಸೃಷ್ಟಿಸಲಾಗಿದೆ. ಆದರೆ ಅದನ್ನು ಪುಸ್ತಕಗಳಲ್ಲಿ ತೋರಿಸದಿರಲು ನಿರ್ಧರಿಸಲಾಗಿದೆ.
5. ಪೃಥ್ವಿರವರಿಗೆ ₹ 20,000 ವನ್ನು ನಿವೃತ್ತಿಯ ತಕ್ಷಣ ಪಾವತಿಸಿ, ಉಳಿದ ಮಾತ್ತಿನನ್ನು ಅವನ ಸಾಲದ ಖಾತೆಗೆ ವರ್ಗಾಯಿಸಬೇಕು.

ಈ ಕೆಳಗಿನವುಗಳನ್ನು ತಯಾರಿಸಿ.

a) ಮರು ಮೌಲ್ಯ ಮಾಪನ ಖಾತೆ , b) ಪಾಲುದಾರ ಬಂಡವಾಳ ಖಾತೆಗಳು, c) ಪುನರ್ ಸ್ಥಾಪಿತ ಆಢಾವೆ ಪತ್ರಿಕೆ.

ಖರ್ಚು **ಮರು ಮೌಲ್ಯ ಮಾಪನ ಖಾತೆ** **ಜಮ**

ವಿವರಗಳು		₹	ವಿವರಗಳು	₹
ಗೆ, ದಾಸ್ತಾನು ಖಾತೆ (18,500-17,200)		1,300	ಯಿಂದ, ಪೀಠೋಪಕರಣಗಳ ಖಾತೆ	800
ಗೆ, ಯಂತ್ರೋಪಕರಣಗಳ ಖಾತೆ (46,500x5/100)		2,325	ಯಿಂದ, ಕಟ್ಟಡಗಳ ಖಾತೆ (40,000x10/100)	4,000
ಗೆ, ಪಾಲುದಾರರ ಬಂಡವಾಳ ಖಾತೆಗಳು (ಲಾಭ)			ಯಿಂದ, ಕರಡು ಸಾಲದ ಕಾಯ್ದಿಟ್ಟ ನಿಧಿ ಖಾತೆ	1,200
ಆಕಾಶ್ (2,375X5/10)	1,188			
ಪೃಥ್ವಿ (2,375X3/10)	712			
ಸಾಗರ್ (2,375X2/10)	475	2,375		
		6,000		**6,000**

ಖರ್ಚು **ಪಾಲುದಾರರ ಬಂಡವಾಳ ಖಾತೆಗಳು** **ಜಮ**

ವಿವರಗಳು	ಆಕಾಶ್ ₹	ಪೃಥ್ವಿ ₹	ಸಾಗರ್ ₹	ವಿವರಗಳು	ಆಕಾಶ್ ₹	ಪೃಥ್ವಿ ₹	ಸಾಗರ್ ₹
ಗೆ, ಕೀರ್ತಿ ಮೌಲ್ಯದ ಖಾತೆ	12,857	-	5,143	ಯಿಂದ, ಪ್ರಾರಂಭಿಕ ಶಿಲ್ಕು	72,000	41,500	34,500
ಗೆ, ನಗದು ಖಾತೆ	-	20,000	-	ಯಿಂದ, ಮರು ಮೌಲ್ಯ ಮಾಪನದ ಖಾತೆ	1,188	712	475
ಗೆ, ಸಾಲದ ಖಾತೆ	-	33,012	-	ಯಿಂದ ಮೀಸಲು ನಿಧಿ ಖಾತೆ	9,000	5,400	3,600
ಗೆ, ಅಂತಿಮ ಶಿಲ್ಕು	78,331	-	37,032	ಯಿಂದ, ಕೀರ್ತಿ ಮೌಲ್ಯದ ಖಾತೆ	9,000	5,400	3,600
	91,188	**53,012**	**42,175**		**91,188**	**53,012**	**42,175**
				ಯಿಂದ, ಪ್ರಾರಂಭಿಕ ಶಿಲ್ಕು	78,331	-	37,032

ಖರ್ಚು **ಕೀರ್ತಿ ಮೌಲ್ಯದ ಖಾತೆ** **ಜಮ**

ವಿವರ	₹	ವಿವರ	₹
ಗೆ, ಆಕಾಶ್ ಬಂಡವಾಳ ಖಾತೆ (18,000X5/10)	9,000	ಯಿಂದ, ಆಕಾಶನ ಬಂಡವಾಳ ಖಾತೆ $\left(18,000\times\frac{3}{7}\right)$	12,857
ಗೆ, ಪೃಥ್ವಿ ಬಂಡವಾಳ ಖಾತೆ (18,000X3/10)	5,400	ಯಿಂದ, ಸಾಗರ್‌ನ ಬಂಡವಾಳ ಖಾತೆ $\left(18,000\times\frac{2}{7}\right)$	5,143
ಗೆ, ಸಾಗರ್ ಬಂಡವಾಳ ಖಾತೆ (18,000x2/10)	3,600		
	18,000		**18,000**

ಖರ್ಚು **ನಗದು ಖಾತೆ** ಜಮ

ವಿವರಗಳು	₹	ವಿವರಗಳು	₹
ಗೆ, ಪ್ರಾರಂಭಿಕ ಶಿಲ್ಕು	23,300	ಯಿಂದ ಪೃಥ್ವಿಯ ಬಂಡವಾಳ ಖಾತೆ	20,000
		ಯಿಂದ ಅಂತಿಮ ಶಿಲ್ಕು	3,300
	23,300		**23,300**
ಗೆ, ಪ್ರಾರಂಭಿಕ ಶಿಲ್ಕು	3,300		

ದಿನಾಂಕ 1 – 4 – 2014 ರಂದು ಆಕಾಶ್ ಮತ್ತು ಸಾಗಾರ್ ರವರ ಅಢಾವೆ ಪತ್ರಿಕೆ

ಜವಾಬ್ದಾರಿಗಳು	₹	₹	ಆಸ್ತಿಗಳು	₹	₹
ಬಂಡವಾಳಗಳು :			ಕಟ್ಟಡಗಳು	40,000	
ಆಕಾಶ್	78,331		+ ಹೆಚ್ಚಳ	4,000	44,000
ಸಾಗರ್	37032	1,15,363	ಯಂತ್ರೋಪಕರಣಗಳು	46,500	
ಪೃಥ್ವಿಯ ಸಾಲದ ಖಾತೆ		33,012	– ಸವಕಳಿ	2,235	44,175
ಧಣಿಗಳು		12,400	ಹೂಡಿಕೆಗಳು		28,000
ಬಾಕಿಯಿರುವ ವೆಚ್ಚಗಳು		1,600	ಪಿಠೋಪಕರಣಗಳು	7,700	
			+ ಹೆಚ್ಚಳ	800	8,500
			ದಾಸ್ತಾನು	18,500	
			– ಸವಕಳಿ	1,300	17,200
			ಋಣಿಗಳು		17,200
			ನಗದು		3,300
		1,62,375			**1,62,375**

ನಿದರ್ಶನ 19.

ದಿನಾಂಕ 31–3–2014ರಂದು ವಿವೇಕ್, ವಿಕಾಸ್ ಮತ್ತು ವಿನಯ್ ರವರ ಅಢಾವೆ ಪತ್ರಿಕೆ.

ಜವಾಬ್ದಾರಿಗಳು	₹	₹	ಆಸ್ತಿಗಳು	₹	₹
ಧಣಿಗಳು		10,000	ನಗದು		10,000
ಬ್ಯಾಂಕಿನ ಮೀರೆಳೆತ		20,000	ದಾಸ್ತಾನು		25,000
ಮೀಸಲು ನಿಧಿ		18,000	ಋಣಿಗಳು	40,000	
ಬಂಡವಾಳಗಳು :			–ಕರಡು ಸಾಲದ ಕಾಯ್ದಿಟ್ಟ ನಿಧಿ	1,000	39,000
ವಿವೇಕ್	30,000		ಬರತಕ್ಕ ಹುಂಡಿಗಳು		11,000
ವಿಕಾಸ್	40,000		ವ್ಯಾಪಾರಿ ಚಿಹ್ನೆಗಳು		10,000
ವಿನಯ್	50,000	1,20,000	ಪೀಠೋಪಕರಣಗಳು		20,000
ಲಾಭ & ನಷ್ಟದ ಖಾತೆ		6,000	ಸಲಕರಣೆಗಳು		29,000
			ಕಟ್ಟಡಗಳು		30,000
		1,74,000			**1,74,000**

ಮೇಲ್ಕಂಡ ದಿನಾಂಕದಂದು ವಿನಯ್ ವ್ಯವಹಾರದಿಂದ ನಿವೃತ್ತನಾಗಿದ್ದಾನೆ. ಹಾಗು ಪಾಲುದಾರರು ಕೆಳಕಂಡ ಮರು ಮೌಲ್ಯ ಮಾಪನಗಳನ್ನು ಒಪ್ಪಿರುತ್ತಾರೆ.

1. ಪೀಠೋಪಕರಣಗಳು ಮತ್ತು ಸಲಕರಣೆಗಳನ್ನು ಶೇ 10 ರಷ್ಟು ಸವಕಳಿ ಮಾಡುವುದು.
2. ಕಟ್ಟಡಗಳನ್ನು ಶೇ 20 ರಷ್ಟು ಮೌಲ್ಯ ಹೆಚ್ಚಿಸುವುದು.
3. ಕರಡು ಸಾಲದ ಕಾಯ್ದಿಟ್ಟ ನಿಧಿ ಶೇ 5ರಷ್ಟು ಕಾಪಾಡಿ ಹಾಗು ಬಾಕಿಯಿರುವ ಬಾಡಿಗೆ ಮೊತ್ತ ₹100.
4. ಬ್ಯಾಂಕಿನ ಮೀರೆಳೆತದ ಮೇಲಿನ ಬಡ್ಡಿಯು ವಾರ್ಷಿಕ ಶೇ 10ರ ಧರದಲ್ಲಿ 9 ತಿಂಗಳಿಗೆ ಬಾಕಿಯಿರುತ್ತದೆ.
5. ಸಂಸ್ಥೆಯ ಕೀರ್ತಿ ಮೌಲ್ಯವನ್ನು ಹಿಂದಿನ 5 ವರ್ಷಗಳ ಸರಾಸರಿ ಲಾಭದ 3 ರಷ್ಟಕ್ಕೆ ಮೌಲ್ಯ ಮಾಪನ ಮಾಡಿ. 5 ವರ್ಷಗಳ ಲಾಭ ಕೆಳಕಂಡಂತಿದೆ.

ವರ್ಷ	ಲಾಭ/ನಷ್ಟ	₹
2010	(ನಷ್ಟ)	10,000
2011	(ಲಾಭ)	25,000
2012	(ಲಾಭ)	30,000
2013	(ನಷ್ಟ)	15,000
2014	(ಲಾಭ)	20,000

6. ವಿನಯ್ ಪಾಲಿನ ಕೀರ್ತಿ ಮೌಲ್ಯವನ್ನು ಸೃಷ್ಟಿಸಿ ಹಾಗು ತಕ್ಷಣ ತೊಡೆದು ಹಾಕಿ.

ಕೆಳಗಿನವುಗಳನ್ನು ತಯಾರಿಸಿ:

a) ಮರು ಮೌಲ್ಯ ಮಾಪನದ ಖಾತೆ
b) ಪಾಲುದಾರರ ಬಂಡವಾಳ ಖಾತೆಗಳು
c) ಪುನರ್ ಸ್ಥಾಪಿತ ಸಂಸ್ಥೆಯ ಅಢಾವೆ ಪತ್ರಿಕೆ.

ನಿರೂಪಣೆ :

ಟಿಪ್ಪಣಿ :

ವಿನಯ್‌ನ ಪಾಲಿನ ಕೀರ್ತಿ ಮೌಲ್ಯವನ್ನು ಲೆಕ್ಕ ಹಾಕುವುದು :

ಹಿಂದಿನ 5 ವರ್ಷಗಳ ಒಟ್ಟು ಲಾಭವು :

ವರ್ಷ		₹
2011 ಲಾಭ	25,000	
2012 ಲಾಭ	30,000	
2014 ಲಾಭ	20,000	75,000
(–)ಕಮ್ಮಿ 2010 ನಷ್ಟ	10,000	
2013 ನಷ್ಟ	15,000	25,000
ಒಟ್ಟು ನಿವ್ವಳ ಲಾಭ		50,000

5 ವರ್ಷಗಳ ಸರಾಸರಿ ಲಾಭ $= \frac{50,000}{5} =$ ₹ 10,000

ಸರಾಸರಿ ಲಾಭದ 3 ಪಟ್ಟು = 10,000×3 = ₹ 30,000

ಸಂಸ್ಥೆಯ ಕೀರ್ತಿ ಮೌಲ್ಯ = ₹ 30,000.

ವಿನಯ್‌ನ ಪಾಲಿನ ಕೀರ್ತಿ ಮೌಲ್ಯ = 30,000× 1/3 = ₹ 10,000

ಖರ್ಚು **ನಗದು ಖಾತೆ** ಜಮ

ವಿವರಗಳು	₹	ವಿವರಗಳು	₹
ಗೆ, ಪೀಠೋಪಕರಣ ಖಾತೆ (20,000x10/100)	2,000	ಯಿಂದ, ಕಟ್ಟಡಗಳ ಖಾತೆ (30,000x20/100)	6000
ಗೆ, ಸಲಕರಣೆಗಳ ಖಾತೆ (29,000x10/100)	2,900	ಯಿಂದ, ಪಾಲುದಾರರ ಬಂಡವಾಳ ಖಾತೆಗಳು	
		ವಿವೇಕ್ (1,500x1/3) 500	
ಗೆ, ಕರಡು ಸಾಲಗಳ ಕಾಯ್ದಿಟ್ಟ ನಿಧಿ (40,000X5/100-1,000)	1,000	ವಿಕಾಸ್ (1,500x1/3) 500	
		ವಿನಯ್ (1,500x1/3) 500	1,500
ಗೆ, ಬ್ಯಾಂಕಿನ ಮೀರೆಳೆತದ ಮೇಲಿನ ಬಡ್ಡಿ ಖಾತೆ (20,000X10/100X9/12)	1,500		
ಗೆ, ಬಾಕಿಯಿರುವ ಬಾಡಿಗೆಯ ಖಾತೆ	100		
	7,500		**7,500**

ಖರ್ಚು **ಪಾಲುದಾರರ ಬಂಡವಾಳ ಖಾತೆಗಳು** ಜಮ

ವಿವರಗಳು	ವಿವೇಕ್ ₹	ವಿಕಾಸ್ ₹	ವಿನಯ್ ₹	ವಿವರಗಳು	ವಿವೇಕ್ ₹	ವಿಕಾಸ್ ₹	ವಿನಯ್ ₹
ಗೆ, ಮರು ಮೌಲ್ಯ ಮಾಪನದ ಖಾತೆ (ನಷ್ಟ)	500	500	500	ಯಿಂದ, ಪ್ರಾರಂಬಿಕ ಶಿಲ್ಕು	30,000	40,000	50,000
ಗೆ, ಕೀರ್ತಿ ಮೌಲ್ಯದ ಖಾತೆ	5,000	5,000	-	ಯಿಂದ, ಮೀಸಲು ನಿಧಿ ಖಾತೆ	6,000	6,000	6,000
ಗೆ, ವಿನಯ್‌ನ ಸಾಲದ ಖಾತೆ	-		67,500	ಯಿಂದ, ಲಾಭ & ನಷ್ಟದ ಖಾತೆ	2,000	2,000	2,000
ಗೆ, ಅಂತಿಮ ಶಿಲ್ಕು	32,500	42,500	-	ಯಿಂದ, ಕೀರ್ತಿ ಮೌಲ್ಯದ ಖಾತೆ	-	-	10,000
	38,000	**48,000**	**68,000**		**38,000**	**48,000**	**68,000**
				ಯಿಂದ, ಪ್ರಾರಂಬಿಕ ಶಿಲ್ಕು	32,500	42,500	-

ಖರ್ಚು **ಕೀರ್ತಿ ಮೌಲ್ಯದ ಖಾತೆ** ಜಮ

ವಿವರಗಳು	₹	ವಿವರಗಳು	₹
ಗೆ, ವಿನಯ್‌ನ ಬಂಡವಾಳ ಖಾತೆ	10,000	ಯಿಂದ, ವಿವೇಕನ ಬಂಡವಾಳ ಖಾತೆ (10,000 X ½)	5,000
		ಯಿಂದ, ವಿಕಾಸನ ಬಂಡವಾಳ ಖಾತೆ (10,000 X ½)	5,000
	10,000		**10,000**

ದಿನಾಂಕ 31–3–2014ರಂದು ವಿವೇಕ ಮತ್ತು ವಿಕಾಸ್‌ರ ಅಢಾವೆ ಪತ್ರಿಕೆ

ಜವಾಬ್ದಾರಿಗಳು	₹	₹	ಆಸ್ತಿಗಳು	₹	₹
ಧಣಿಗಳು		10,000	ನಗದು		10,000
ಬ್ಯಾಂಕಿನ ಮೀರೆಳೆತ	20,000		ದಾಸ್ತಾನು		25,000
ಬಾಕಿಯಿರುವ ಬಡ್ಡಿ	1,500	21,500	ಋಣಿಗಳು	40,000	
ಬಂಡವಾಳಗಳು :			_ಕರಡು ಸಾಲದ ಕಾಯ್ದಿಟ್ಟ ನಿಧಿ	2,000	38,000
ವಿವೇಕ್	32,500		(1,000+1,000)		
ವಿಕಾಸ್	42,500	75,000	ಬರತಕ್ಕ ಹುಂಡಿಗಳು		11,000
ವಿನಯ್‌ನ ಸಾಲದ ಖಾತೆ		67,500	ವ್ಯಾಪಾರಿ ಚಿಹ್ನೆಗಳು		10,000
ಬಾಕಿಯಿರುವ ಬಾಡಿಗೆ		100	ಪೀಠೋಪಕರಣಗಳು	20,000	
			– ಸವಕಳಿ	2,000	18,000
			ಸಲಕರಣೆಗಳು	29,000	
			– ಸವಕಳಿ	2,900	26,100
			ಕಟ್ಟಡಗಳು	30,000	
			+ ಹೆಚ್ಚಳ	6,000	36,000
		1,74,100			**1,74,100**

ನಿದರ್ಶನ 20.

M,N ಮತ್ತು O ರವರು ಪಾಲುದಾರರಾಗಿದ್ದು, ಲಾಭ ನಷ್ಟಗಳನ್ನು 2:2:1ರ ಅನುಪಾತದಲ್ಲಿ ಹಂಚಿಕೊಳ್ಳುವರು. ದಿನಾಂಕ 31–3–2014 ರಂದು ಅವರ ಅಢಾವೆ ಪತ್ರಿಕೆಯು ಈ ಕೆಳಕಂಡಂತಿದೆ.

ಜವಾಬ್ದಾರಿಗಳು	₹	₹	ಆಸ್ತಿಗಳು	₹	₹
ಧಣಿಗಳು		32,000	ಬ್ಯಾಂಕು		42,500
ಕೊಡತಕ್ಕ ಹುಂಡಿಗಳು		28,000	ಬರತಕ್ಕ ಹುಂಡಿಗಳು		12,000
ಮೀಸಲು ನಿಧಿಗಳು		25,000	ಋಣಿಗಳು		21,000
ಬಂಡವಾಳಗಳು :			ದಾಸ್ತಾನು		14,000
M	40,000		ಪೀಠೋಪಕರಣಗಳು		18,000
N	40,000		ಯಂತ್ರೋಪಕರಣಗಳು		35,000
O	20,000	1,00,000	ಕಟ್ಟಡಗಳು		40,000
ಬಾಕಿಯಿರುವ ವೆಚ್ಚಗಳು		2,500	ಲಾಭ ಮತ್ತು ನಷ್ಟದ ಖಾತೆ		5,000
		1,87,500			**1,87,500**

N ವ್ಯವಹಾರದಿಂದ ನಿವೃತ್ತನಾಗಿದ್ದಾನೆ. ಹಾಗು ಕೆಳಕಂಡ ಹೊಂದಾಣಿಕೆಗಳನ್ನು ಮಾಡಬೇಕು.

1. ಕಟ್ಟಡಗಳು ಮತ್ತು ದಾಸ್ತಾನನ್ನು ಪುಸ್ತಕದ ಮೌಲ್ಯಕ್ಕಿಂತ ಶೇ 10ರಷ್ಟನ್ನು ಹೆಚ್ಚಿಸಿ.
2. ಯಂತ್ರೋಪಕರಣಗಳನ್ನು ಪುಸ್ತಕ ಮೌಲ್ಯಕ್ಕಿಂತ ಶೇ 5ರಷ್ಟು ಕಡಿಮೆ ಮೌಲ್ಯ ಮಾಡಲಾಗಿದೆ.
3. ಪೀಠೋಪಕರಣವನ್ನು ₹ 12,400 ಕ್ಕೆ ಮರು ಮೌಲ್ಯ ಮಾಪನ ಮಾಡಲಾಗಿದೆ.
4. ಬಾಕಿಯಿರುವ ವೆಚ್ಚಗಳನ್ನು ₹ 3,050 ಕ್ಕೆ ಹೆಚ್ಚಿಸಿ.

5. ಸಂಸ್ಥೆಯ ಕೀರ್ತಿ ಮೌಲ್ಯವನ್ನು ₹ 30,000 ರಷ್ಟು ಸೃಷ್ಟಿಸಿ ಹಾಗು ಅದನ್ನು ವ್ಯವಹಾರದಲ್ಲಿ ಉಳಿಸಿ.
6. N ನ ಬಂಡವಾಳ ಖಾತೆಯಿಂದ ₹ 40,000 ವನ್ನು ಅವನ ಸಾಲದ ಖಾತೆಗೆ ವರ್ಗಾಯಿಸಿ ಉಳಿದ ಮೊತ್ತವನ್ನು ಚೆಕ್ ಮೂಲಕ ಪಾವತಿಸಲಾಗುವುದು.

ಕೆಳಗಿನವುಗಳನ್ನು ತಯಾರಿಸಿ.

a) ಮರು ಮೌಲ್ಯ ಮಾಪನದ ಖಾತೆ
b) ಪಾಲುದಾರರ ಬಂಡವಾಳ ಖಾತೆಗಳು
c) ಪುನರ್ ಸ್ಥಾಪಿತ ಸಂಸ್ಥೆಯ ಆಢಾವೆ ಪತ್ರಿಕೆ.

ನಿರೂಪಣೆ :

ಖರ್ಚು **ಮರು ಮೌಲ್ಯ ಮಾಪನದ ಖಾತೆ** ಜಮ

ವಿವರಗಳು	₹	ವಿವರಗಳು		₹
ಗೆ, ಯಂತ್ರೋಪಕರಣ ಖಾತೆ (35,000 x5/100)	1,750	ಯಿಂದ, ಕಟ್ಟಡದ ಖಾತೆ (40,000x10/100)		4,000
ಗೆ, ಪೀಠೋಪಕರಣ ಖಾತೆ (18,000-12,400)	5,600	ಯಿಂದ, ದಾಸ್ತಾನು ಖಾತೆ (14000 X10/100)		1,400
ಗೆ, ಬಾಕಿಯಿರುವ ಖರ್ಚಿನ ಖಾತೆ (3,050 – 2,500)	550	ಯಿಂದ, ಪಾಲುದಾರರ ಬಂಡವಾಳ ಖಾತೆಗಳು (ನಷ್ಟ)		
		M (2,500X2/5)	1,000	
		N (2,500X2/5)	1,000	
		O (2,500X1/5)	500	2,500
	7,900			**7,900**

ಖರ್ಚು **ಬ್ಯಾಂಕ್ ಖಾತೆ** ಜಮ

ವಿವರಗಳು	₹	ವಿವರಗಳು	₹
ಗೆ, ಪ್ರಾರಂಭಿಕ ಶಿಲ್ಕು	42,500	ಯಿಂದ, 'N' ನ ಬಂಡವಾಳ ಖಾತೆ	19,000
		ಯಿಂದ, ಅಂತಿಮ ಶಿಲ್ಕು	23,500
	42,500		**42,500**
ಗೆ, ಪ್ರಾರಂಭಿಕ ಶಿಲ್ಕು	23,500		

ಖರ್ಚು **ಪಾಲುದಾರರ ಬಂಡವಾಳ ಖಾತೆಗಳು** ಜಮ

ವಿವರಗಳು	M ₹	N ₹	O ₹	ವಿವರಗಳು	M ₹	N ₹	O ₹
ಗೆ, ಮರು ಮೌಲ್ಯ ಮಾಪನ ಖಾತೆ (ನಷ್ಟ)	1,000	1,000	500	ಯಿಂದ, ಪ್ರಾರಂಭಿಕ ಶಿಲ್ಕು	40,000	40,000	20,000
ಗೆ, ಲಾಭ & ನಷ್ಟದ ಖಾತೆ	2,000	2,000	1,000	ಯಿಂದ, ಮೀಸಲು ನಿಧಿ ಖಾತೆ	10,000	10,000	5,000
'N' ನ ಸಾಲದ ಖಾತೆ	-	40,000	-	ಯಿಂದ, ಕೀರ್ತಿ ಮೌಲ್ಯದ ಖಾತೆ	12,000	12,000	6,000
ಗೆ, ಬ್ಯಾಂಕ್ ಖಾತೆ	-	19,000	-				
ಗೆ, ಅಂತಿಮ ಶಿಲ್ಕು	59,000		29,500				
	62,000	**62,000**	**31,000**		**62,000**	**62,000**	**31,000**
				ಯಿಂದ, ಆರಂಭಿಕ ಶಿಲ್ಕು	59,000	-	29,500

ಖರ್ಚು **ಕೀರ್ತಿ ಮೌಲ್ಯದ ಖಾತೆ** ಜಮ

ವಿವರಗಳು	₹	ವಿವರಗಳು	₹
ಗೆ, 'M' ನ ಬಂಡವಾಳ ಖಾತೆ (30,000X2/5)	12,000	ಯಿಂದ, ಅಂತಿಮ ಶಿಲ್ಕು	30,000
ಗೆ, 'N' ನ ಬಂಡವಾಳ ಖಾತೆ (30,000X2/5)	12,000		
ಗೆ, 'O' ನ ಬಂಡವಾಳ ಖಾತೆ (30,000X1/5)	6,000		
	30,000		**30,000**
ಗೆ, ಪ್ರಾರಂಬಿ ಶಿಲ್ಕು	30,000		

ದಿನಾಂಕ 1 – 4 – 2014 ರ M ಮತ್ತು O ರವರ ಅಢಾವೆ ಪತ್ರಿಕೆ

ಜವಾಬ್ದಾರಿಗಳು	₹	₹	ಆಸ್ತಿಗಳು	₹	₹
ಧಣಿಗಳು		32,000	ಬ್ಯಾಂಕು		23,500
ಕೊಡತಕ್ಕ ಹುಂಡಿಗಳು		28,000	ಬರತಕ್ಕ ಹುಂಡಿಗಳು		12,000
ಬಂಡವಾಳಗಳು :			ಋಣಿಗಳು		21,000
M	59,000		ದಾಸ್ತಾನು	14,000	
O	29,500	88,500	+ ಹೆಚ್ಚಳ	1,400	15,400
'N' ನ ಸಾಲದ ಖಾತೆ		40,000	ಪೀಠೋಪಕರಣಗಳು	18,000	
ಬಾಕಿಯಿರುವ	2,500		–ಸವಕಳಿ	5,600	12,400
ವೆಚ್ಚಗಳು			ಯಂತ್ರಗಳು	35,000	
+ ಹೆಚ್ಚಳ ಮಾಡಿದ್ದು	550	3,050	– ಸವಕಳಿ	1,750	33,250
			ಕಟ್ಟಡಗಳು	40,000	
			+ ಹೆಚ್ಚಳ	4,000	44,000
			ಕೀರ್ತಿ ಮೌಲ್ಯ		30,000
		1,91,550			**1,91,550**

ನಿದರ್ಶನ 21.

ಅನು, ಮನು ಮತ್ತು ವಿನು ರವರು 3 : 2: 1ರ ಅನುಪಾತದಲ್ಲಿ ಲಾಭ ಹಂಚಿಕೊಳ್ಳುವ ಪಾಲುದಾರರಾಗಿದ್ದು, ದಿನಾಂಕ 31–3–2011ರಂದು ಅವರ ಅಢಾವೆ ಪತ್ರಿಕೆಯು ಈ ಕೆಳಕಂಡಂತಿದೆ.

ಜವಾಬ್ದಾರಿಗಳು	₹	₹	ಆಸ್ತಿಗಳು	₹	₹
ಧಣಿಗಳು		40,000	ನಗದು		18,000
ಬ್ಯಾಂಕ್ ಸಾಲ		14,000	ದಾಸ್ತಾನು		25,000
ಸಾಮಾನ್ಯ ಮೀಸಲು		15,000	ಯಂತ್ರೋಪಕರಣಗಳು		20,000
ಬಂಡವಾಳಗಳು :			ಋಣಿಗಳು	35,000	
ಅನು	30,000		–ಕರಡು ಸಾಲದ ಕಾಯ್ದಿಟ್ಟ ನಿಧಿ	3,000	32,000
ಮನು	25,000		ಪೀಠೋಪಕರಣಗಳು		15,000
ವಿನು	25,000	80,000	ಭೂಮಿ & ಕಟ್ಟಡಗಳು		45,000
ಲಾಭ & ನಷ್ಟದ ಖಾತೆ		6,000			
		1,55,000			**1,55,000**

ಮೇಲಿನ ದಿನಾಂಕದಂದು ಅನುರವರು ವ್ಯವಹಾರದಿಂದ ನಿವೃತ್ತರಾಗಿದ್ದಾರೆ. ಅದಕ್ಕಾಗಿ ಕೆಳಕಂಡ ಹೊಂದಾಣಿಕೆಗಳು ಅಗತ್ಯವಾಗಿವೆ.

1. ಅನುರ ಪಾಲಿನ ₹ 15,000 ದ ಕೀರ್ತಿ ಮೌಲ್ಯವನ್ನು ಸೃಷ್ಟಿಸಬೇಕು ಹಾಗು ಕೀರ್ತಿ ಮೌಲ್ಯದ ಖಾತೆಯನ್ನು ತೆರೆಯದೆ ತಕ್ಷಣ ತೊಡೆದು ಹಾಕ ಬೇಕು.
2. ಕಟ್ಟಡಗಳ ಮೌಲ್ಯವನ್ನು ಶೇ 10ರಷ್ಟು ಹೆಚ್ಚಿಸಿ ಮತ್ತು ಯಂತ್ರೋಪಕರಣದ ಮೌಲ್ಯವನ್ನು ₹ 2,500 ರಷ್ಟು ಕಡಿಮೆ ಮಾಡಿ.
3. ಕರಡು ಸಾಲದ ಕಾಯ್ದಿಟ್ಟ ನಿಧಿಯನ್ನು ₹ 1,000 ರಷ್ಟು ಕಡಿಮೆ ಮಾಡಿ.
4. ಕಾರ್ಮಿಕರ ನಷ್ಟ ಪರಿಹಾರಕ್ಕಾಗಿ ₹ 2,300 ನ್ನು ತೆಗೆದಿರಿಸಿ.
5. ಬ್ಯಾಂಕಿನ ಸಾಲದ ಮೇಲೆ ಶೇ 15 ರಂತೆ 4 ತಿಂಗಳ ಅವದಿಗೆ ಬಡ್ಡಿ ಬಾಕಿಯಿದೆ.
6. ಅನು ನಿವೃತ್ತಿಯಾದ ತಕ್ಷಣ ₹ 10,500 ನ್ನು ಪಾವತಿಸ ಬೇಕು ಮತ್ತು ಉಳಿದ ಮೊತ್ತವನ್ನು ಮೂರು ವಾರ್ಷಿಕ ಸಮ ಕಂತುಗಳಲ್ಲಿ ವಾರ್ಷಿಕ ಶೇ 10ರ ಬಡ್ಡಿಯ ಸಮೇತ ಪಾವತಿಸಬೇಕು.

ಕೆಳಗಿನವುಗಳನ್ನು ತಯಾರಿಸಿ:

a) ಮರು ಮೌಲ್ಯ ಮಾಪನದ ಖಾತೆ
b) ಪಾಲುದಾರರ ಬಂಡವಾಳ ಖಾತೆಗಳು
c) ಪುನರ್ ಸ್ಥಾಪಿತ ಸಂಸ್ಥೆಯ ಪ್ರಾರಂಭಿಕ ಅಢಾವೆ ಪತ್ರಿಕೆ
d) ಅನುರವರ ಸಾಲದ ಖಾತೆ.

ನಿರೂಪಣೆ :

ಖರ್ಚು **ಮರು ಮೌಲ್ಯ ಮಾಪನದ ಖಾತೆ** ಜಮ

ವಿವರಗಳು	₹	ವಿವರಗಳು	₹
ಗೆ, ಯಂತ್ರೋಪಕರಣದ ಖಾತೆ	2,500	ಯಿಂದ, ಕಟ್ಟಡದ ಖಾತೆ (45,000X10/100)	4,500
ಗೆ, ಕಾರ್ಮಿಕರ ನಷ್ಟ ಪರಿಹಾರ ಖಾತೆ	2,300	ಯಿಂದ, ಕರಡು ಸಾಲದ ಮೀಸಲು ಖಾತೆ	1,000
ಗೆ, ಬ್ಯಾಂಕ್ ಸಾಲದ ಮೇಲೆ ಬಡ್ಡಿ ಖಾತೆ (14,000X15/100x4/12)	700		
	5,500		**5,500**

ಖರ್ಚು **ಪಾಲುದಾರರ ಬಂಡವಾಳ ಖಾತೆಗಳು** ಜಮ

ವಿವರಗಳು	ಅನು ₹	ಮನು ₹	ವಿನು ₹	ವಿವರಗಳು	ಅನು ₹	ಮನು ₹	ವಿನು ₹
ಗೆ, ಅನು ಬಂಡವಾಳ ಖಾತೆ (ಕೀರ್ತಿ ಮೌಲ್ಯ)		10,000	5,000	ಯಿಂದ ಪ್ರಾರಂಭಿಕ ಶಿಲ್ಕು	30,000	25,000	25,000
ಗೆ, ನಗದು ಖಾತೆ	10,500			ಯಿಂದ ಸಾಮಾನ್ಯ ಮೀಸಲು ನಿಧಿ ಖಾತೆ	7,500	5,000	2,500
ಗೆ, ಅನು ಸಾಲದ ಖಾತೆ	45,000			ಯಿಂದ ಲಾಭ & ನಷ್ಟದ ಖಾತೆ	3,000	2,000	1,000
ಗೆ, ಅಂತಿಮ ಶಿಲ್ಕು		22,000	23,500	ಯಿಂದ ಮನು ಬಂಡವಾಳ ಖಾತೆ (ಕೀರ್ತಿ ಮೌಲ್ಯ)	10,000		
				ಯಿಂದ ವಿನು ಬಂಡವಾಳ ಖಾತೆ (ಕೀರ್ತಿ ಮೌಲ್ಯ)	5,000		
	55,500	**32,000**	**28,500**		**55,500**	**32,000**	**28,500**
				ಯಿಂದ ಪ್ರಾರಂಭಿಕ ಶಿಲ್ಕು		22,000	23,500

ಖರ್ಚು ನಗದು ಖಾತೆ ಜಮ

ವಿವರಗಳು	₹	ವಿವರಗಳು	₹
ಗೆ, ಪ್ರಾರಂಬಿಕ ಶಿಲ್ಕು	18,000	ಯಿಂದ, ಅನು ಬಂಡವಾಳ ಖಾತೆ	10,500
		ಯಿಂದ, ಅಂತಿಮ ಶಿಲ್ಕು	7,500
	18,000		**18,000**
ಗೆ, ಪ್ರಾರಂಬಿಕ ಶಿಲ್ಕು	7,500		

ದಿನಾಂಕ 1 – 4 – 2011 ರಂದು ಮನು ಮತ್ತು ವಿನು ರವರ ಅಢಾವೆ ಪತ್ರಿಕೆ

ಜವಾಬ್ದಾರಿಗಳು	₹	₹	ಆಸ್ತಿಗಳು	₹	₹
ಧಣಿಗಳು		40,000	ನಗದು		7,500
ಬ್ಯಾಂಕ್ ಸಾಲ	14,000		ದಾಸ್ತಾನು		25,000
+ ಬಾಕಿ ಬಡ್ಡಿ	700	14,700	ಯಂತ್ರೋಪಕರಣ	20,000	
ಬಂಡವಾಳಗಳು :			– ಸವಕಳಿ	2,500	17,500
ಮನು	22,000		ಋಣಿಗಳು	35,000	
ವಿನು	23,500		–ಕ. ಸಾ. ಕಾ.ನಿ.	2,000	33,000
		45,500	(3,000-1,000)		
ಅನು ಸಾಲದ ಖಾತೆ		45,000	ಪೀಠೋಪಕರಣಗಳು		15,000
ಕಾರ್ಮಿಕರ ನಷ್ಟ		2,300	ಭೂಮಿ ಹಾಗು ಕಟ್ಟಡಗಳು	45,000	
ಪರಿ ಹಾರದ ಮೊತ್ತ			+ ಹೆಚ್ಚಳ	4,500	49,500
		1,47,500			**1,47,500**

ಖರ್ಚು ಅನು ಸಾಲದ ಖಾತೆ ಜಮ

ದಿನಾಂಕ	ವಿವರಗಳು	₹	ದಿನಾಂಕ	ವಿವರಗಳು	₹
31.3.2011	ಗೆ, ಅಂತಿಮ ಶಿಲ್ಕು	45,000	31.3.2011	ಯಿಂದ, ಅನು ಬಂಡವಾಳ ಖಾತೆ	45,000
		45,000			45,000
31.3.2012	ಗೆ, ನಗದು/ಬ್ಯಾಕ್ ಖಾತೆ (15,000 + 4,500)	19,500	01.4.2011	ಯಿಂದ, ಪ್ರಾರಂಬಿಕ ಶಿಲ್ಕು	45,000
			31.3.2012	ಯಿಂದ, ಬಡ್ಡಿ ಖಾತೆ (45,000X10/100)	4,500
31.3.2012	ಗೆ, ಅಂತಿಮ ಶಿಲ್ಕು	30,000			
		59,500			**59,500**
31.3.2013	ಗೆ, ನಗದು/ಬ್ಯಾಕ್ ಖಾತೆ 15,000+3,000)	18,000	01.4.2012	ಯಿಂದ, ಪ್ರಾರಂಬಿಕ ಶಿಲ್ಕು	30,000
31.3.2013	ಗೆ, ಅಂತಿಮ ಶಿಲ್ಕು	15,000	31.3.2013	ಯಿಂದ, ಬಡ್ಡಿ ಖಾತೆ (30,000X10/100)	3,000
		33,000			**33,000**
31.3.2014	ಗೆ, ನಗದು/ಬ್ಯಾಕ್ ಖಾತೆ (15,000+1,500)	16,500	01.4.2013	ಯಿಂದ, ಪ್ರಾರಂಬಿಕ ಶಿಲ್ಕು	15,000
			31.3.2014	ಯಿಂದ, ಬಡ್ಡಿ ಖಾತೆ	1,500
		16,500			**16,500**

ನಿದರ್ಶನ 22.

A, B ಮತ್ತು C ಪಾಲುದಾರರಾಗಿದ್ದು, ಲಾಭ ಮತ್ತು ನಷ್ಟಗಳನ್ನು ತಮ್ಮ ಬಂಡವಾಳದ ಅನುಪಾತದಲ್ಲಿ ಹಂಚಿಕೊಳ್ಳುವರು. ದಿನಾಂಕ 31–3–2014 ರಂದು ಅವರ ಅಢಾವೆ ಪತ್ರಿಕೆಯು ಈ ಕೆಳಕಂಡಂತಿದೆ.

ಜವಾಬ್ದಾರಿಗಳು	₹	₹	ಆಸ್ತಿಗಳು	₹	₹
ಧಣಿಗಳು		12,000	ಬ್ಯಾಂಕಿನಲ್ಲಿ ನಗದು		30,000
ಕೊಡತಕ್ಕ ಹುಂಡಿಗಳು		18,000	ಭೂಮಿ ಮತ್ತು ಕಟ್ಟಡಗಳು		50,000
ಸಾಲ		17,000	ಋಣಿಗಳು	10,000	
ಬಂಡವಾಳಗಳು :			–ಕರಡು ಸಾಲದ ಕಾಯ್ದಿಟ್ಟ ನಿಧಿ	200	9,800
A	30,000		ದಾಸ್ತಾನು		14,000
B	30,000		ಯಂತ್ರೋಪಕರಣಗಳು		18,200
C	15,000	75,000			
		1,22,000			**1,22,000**

B ನಿವೃತ್ತನಾಗಿದ್ದಾನೆ. ಆತನಿಗೆ ಅಂತಿಮವಾಗಿ ಪಾವತಿಸಬೇಕಾದ ಮೊತ್ತವನ್ನು ಲೆಕ್ಕ ಹಾಕುವುದಕ್ಕೆ ಮೊದಲು ಆಸ್ತಿ ಮತ್ತು ಜವಾಬ್ದಾರಿಗಳಲ್ಲಿ ಕೆಳಕಂಡ ಹೊಂದಾಣಿಕೆಗಳನ್ನು ಮಾಡಲು ಒಪ್ಪಿರುತ್ತಾರೆ.

1. ಭೂಮಿ ಹಾಗು ಕಟ್ಟಡದ ಮೌಲ್ಯವನ್ನು ಶೇ 20 ರಷ್ಟು ಹೆಚ್ಚಿಸಿ.
2. ಯಂತ್ರೋಪಕರಣವನ್ನು ಶೇ 5 ಹಾಗೂ ದಾಸ್ತಾನನ್ನು ಶೇ 10 ರಷ್ಟು ಸವಕಳಿ ಗೊಳಿಸಿ.
3. ಋಣಿಗಳ ಮೇಲಿನ ಕರಡು ಸಾಲನ ಕಾಯ್ದಿಟ್ಟ ನಿಧಿ ಶೇ 5 ರಷ್ಟು ಹೆಚ್ಚಿಸಿ.
4. ಮುದ್ರಣ ಹಾಗು ಲೇಖನ ಸಾಮಗ್ರಿಗಳಿಗಾಳಿ ₹ 1,000 ತೆಗೆದಿರಿಸ ಬೇಕು.
5. ಸಂಸ್ಥೆಯ ಕೀರ್ತಿ ಮೌಲ್ಯವನ್ನು ₹18,000 ಕ್ಕೆ ಸೃಷ್ಟಿಸಿ, ಹಾಗು ಪುಸ್ತಕದಲ್ಲಿ ಉಳಿಸಲಾಗಿದೆ.
6. B ಗೆ ₹ 9,756 ನ್ನು ಚೆಕ್ಕಿನ ಮೂಲಕ ಪಾವತಿಸಿ, ಉಳಿಕೆ ಮೊತ್ತವನ್ನು ಅವನ ಸಾಲದ ಖಾತೆಗೆ ವರ್ಗಾಯಿಸಿ.
7. A ಮತ್ತು C ರವರ ಹೊಸ ಸಂಸ್ಥೆಯ ಒಟ್ಟು ಬಂಡವಾಳವು ರೂ 60,000 ವಾಗಿದ್ದು, ಇದು ಅವರ ಹೊಸ ಅನುಪಾತವಾದ 3:1 ರ ಪ್ರಕಾರವಾಗಿರಬೇಕು.

ಕೆಳಗಿನವುಗಳನ್ನು ತಯಾರಿಸಿ:

a) ಮರು ಮೌಲ್ಯ ಮಾಪನ ಖಾತೆ.
b) ಪಾಲುದಾರರ ಬಂಡವಾಳ ಖಾತೆಗಳು
c) ಹೊಸ ಸಂಸ್ಥೆಯ ಪ್ರಾರಂಭಿಕ ಅಢಾವೆ ಪತ್ರಿಕೆ.

ನಿರೂಪಣೆ :

ಟಿಪ್ಪಣಿ :

a) ಹಳೆಯ ಲಾಭ ಹಂಚಿಕೆಯ ಪ್ರಮಾಣವು 30,000 : 30,000 : 15,000ರ 2 : 2 : 1 ಆಗಿದೆ.

b) ಉಳಿಕೆ ಪಾಲುದಾರರ ಬಂಡವಾಳವನ್ನು ಅವರ ಹೊಸ ಅನುಪಾತದ (3:1) ಪ್ರಕಾರ ಕಂಡುಹಿಡಿಯುವುದು.

ಸಂಸ್ಥೆಯ ಒಟ್ಟು ಬಂಡವಾಳವು ರೂ. 60,000 ಆಗಿದೆ.

ಹೊಸ ಲಾಭ ಹಂಚಿಕೆಯ ಅನುಪಾತವು 3:1

'A' ನ ಪಾಲಿನ ಹೊಸ ಬಂಡವಾಳ = 60,000X3/4 = ₹ 45,000

'C' ನ ಪಾಲಿನ ಹೊಸ ಬಂಡವಾಳ = 60,000X1/4 = ₹ 15,000

₹ 60,000

ಖರ್ಚು **ಮರು ಮೌಲ್ಯ ಮಾಪನದ ಖಾತೆ** ಜಮ

ವಿವರಗಳು		₹	ವಿವರಗಳು	₹
ಗೆ, ಯಂತ್ರೋಪಕರಣದ ಖಾತೆ (18,200X5/100)		910	ಯಿಂದ, ಭೂಮಿ ಮತ್ತು ಕಟ್ಟಡಗಳ ಖಾತೆ (50,000 X20/100)	10,000
ಗೆ, ದಾಸ್ತಾನು ಖಾತೆ (14,000X10/100)		1,400		
ಗೆ, ಕ.ಸಾ.ಕಾ ಖಾತೆ (10,000X 5/100 – 200)		300		
ಗೆ, ಮುದ್ರಣ & ಲೇಖನ ಸಾಮಾಗ್ರಿಗಳು ಮೀಸಲು		1,000		
ಗೆ, ಪಾಲುದಾರರ ಬಂಡವಾಳ ಖಾತೆಗಳು (ಲಾಭ)				
A (6,390 X 2/5)	2,556			
B (6,390 X 2/5)	2,556			
C (6,390 X 1/5)	1,278	6,390		
		10,000		**10,000**

ಖರ್ಚು **ಪಾಲುದಾರರ ಬಂಡವಾಳ ಖಾತೆಗಳು** ಜಮ

ವಿವರಗಳು	A ₹	B ₹	C ₹	ವಿವರಗಳು	A ₹	B ₹	C ₹
ಗೆ, ಬ್ಯಾಂಕ್ ಖಾತೆ		9,756	-	ಯಿಂದ, ಪ್ರಾರಂಬಿ ಶಿಲ್ಕು	30,000	30,000	15,000
'B' ನ ಸಾಲದ ಖಾತೆ		30,000	-	ಯಿಂದ, ಮರು ಮೌಲ್ಯ ಮಾಪನದ ಖಾತೆ (ಲಾಭ)	2,556	2,556	1,278
ಗೆ, ಅಂತಿಮ ಶಿಲ್ಕು	39,756	-	19,878	ಯಿಂದ, ಕೀರ್ತಿ ಮೌಲ್ಯದ ಖಾತೆ	7,200	7,200	3,600
	39,756	**39,756**	**19,878**		**39,756**	**39,756**	**19,878**
ಗೆ, ಬ್ಯಾಂಕ್ ಖಾತೆ (ಹೆಚ್ಚುವರಿ ಬಂಡವಾಳ ಹಿಂಪಡೆದಿದ್ದು)			4,878	ಯಿಂದ, ಪ್ರಾರಂಬಿ ಶಿಲ್ಕು	39,756		19,878
				ಯಿಂದ, ಬ್ಯಾಂಕ್ ಖಾತೆ (ಕೊರತೆ ತುಂಬಲು ತಂದ ನಗದು)	5,244		
ಗೆ, ಅಂತಿಮ ಶಿಲ್ಕು	45,000		15,000				
	45,000		**19,878**		**45,000**		**19,878**
				ಯಿಂದ, ಪ್ರಾರಂಬಿಕ ಶಿಲ್ಕು	45,000		15,000

ಖರ್ಚು **ಕೀರ್ತಿ ಮೌಲ್ಯದ ಖಾತೆ** ಜಮ

ವಿವರಗಳು	₹	ವಿವರಗಳು	₹
ಗೆ, 'A' ನ ಬಂಡವಾಳ ಖಾತೆ (18,000X 2/5)	7,200	ಯಿಂದ, ಅಂತಿಮ ಶಿಲ್ಕು	18,000
ಗೆ, 'B' ನ ಬಂಡವಾಳ ಖಾತೆ (18,000 X 2/5)	7,200		
ಗೆ, 'C' ನ ಬಂಡವಾಳ ಖಾತೆ (18,000 xX1/5)	3,600		
	18,000		**18,000**
ಗೆ, ಪ್ರಾರಂಬಿಕ ಶಿಲ್ಕು	18,000		

ಖರ್ಚು **ಬ್ಯಾಂಕ್ ಖಾತೆ** ಜಮ

ವಿವರಗಳು	₹	ವಿವರಗಳು	₹
ಗೆ, ಪ್ರಾರಂಬಿಕ ಶಿಲ್ಕು	30,000	ಯಿಂದ 'B' ನ ಬಂಡವಾಳ ಖಾತೆ	9,756.
ಗೆ, 'A' ನ ಬಂಡವಾಳದ ಖಾತೆ	5,244	ಯಿಂದ 'C' ನ ಬಂಡವಾಳ ಖಾತೆ	4,878
		ಯಿಂದ ಅಂತಿಮ ಶಿಲ್ಕು	20,610
	35,244		**35,244**
ಗೆ, ಪ್ರಾರಂಬಿಕ ಶಿಲ್ಕು	20,610		

ದಿನಾಂಕ 1–4–2014 A ಮತ್ತು C ರವರ ಅಢಾವೆ ಪತ್ರಿಕೆ

ಜವಾಬ್ದಾರಿಗಳು	₹	₹	ಆಸ್ತಿಗಳು	₹	₹
ಧಣಿಗಳು		12,000	ಬ್ಯಾಂಕಿನಲ್ಲಿ ನಗದು		20,610
ಕೊಡತಕ್ಕ ಹುಂಡಿಗಳು		18,000	ಭೂಮಿ ಹಾಗು ಕಟ್ಟಡಗಳು	50,000	
ಸಾಲ		17,000	+ ಹೆಚ್ಚಳ	10,000	60,000
ಬಂಡವಾಳಗಳು :			ಋಣಿಗಳು	10,000	
A	45,000		–ಕ.ಸಾ.ಕಾ (200+300)	500	9,500
C	15,000	60,000	ದಾಸ್ತಾನು	14,000	
'B' ನ ಸಾಲದ ಖಾತೆ		30,000	– ಸವಕಳಿ	1,400	12,600
ಮುದ್ರಣ ಹಾಗು ಲೇಖನ ಸಾಮಗ್ರಿಗಳ ಮೀಸಲು		1,000	ಯಂತ್ರೋಪಕರಣಗಳು	18,200	
			– ಸವಕಳಿ	910	17,290
			ಕೀರ್ತಿ ಮೌಲ್ಯ		18,000
		1,38,000			**1,38,000**

ನಿದರ್ಶನ 23.

ಚಂದನ, ಮೇಘನ ಮತ್ತು ಅಂಜನ ಪಾಲುದಾರರಾಗಿದ್ದು ಲಾಭ ನಷ್ಟಗಳನ್ನು 2 : 2 : 1 ಅನುಪಾತದಲ್ಲಿ ಹಂಚಿಕೊಳ್ಳುತ್ತಿದ್ದರು. ದಿನಾಂಕ 31–3–2014ಕ್ಕೆ ಅವರ ಅಢಾವೆ ಪತ್ರಿಕೆ ಈ ಕೆಳಗಿನಂತಿದೆ.

ಹೊಣೆಗಾರಿಕೆಗಳು	₹	₹	ಆಸ್ತಿಗಳು	₹	₹
ಬಂಡವಾಳಗಳು			ನಗದು		500
ಚಂದನ	15,000		ಬ್ಯಾಂಕ್		7,500
ಮೇಘನ	10,000		ದಾಸ್ತಾನು		17,000
ಅಂಜನಾ	12,000	37,000	ಪೀಠೋಪಕರಣ		5,800
ಮೀಸಲು		15,000	ಕಟ್ಟಡ		10,000
ಧಣಿಗಳು		13,000	ಋಣಿಗಳು	10,000	
ಕೊಡತಕ್ಕ ಹುಂಡಿಗಳು		9,500	–ಕಾಯ್ದಿಟ್ಟ ನಿಧಿ	800	9,200
ಬಾಕಿ ವೇತನಗಳು		500	ಯಂತ್ರೋಪಕರಣ		10,000
			ಲಾಭ ನಷ್ಟದ ಖಾತೆ		15,000
		75,000			**75,000**

ವಯಸ್ಸಾದ ಕಾರಣಕ್ಕಾಗಿ ಅಂಜನ ರವರು ಸಂಸ್ಥೆಯಿಂದ ನಿವೃತ್ತರಾದರು. ಆಸ್ತಿಗಳು ಮತ್ತು ಹೊಣೆಗಾರಿಗಳನ್ನು ಈ ಕೆಳಗಿನಂತೆ ಮರು ಮೌಲ್ಯ ಮಾಪನ ಮಾಡಲಾಯಿತು.

1. ಸಂಸ್ಥೆಯ ಕೀರ್ತಿ ಮೌಲ್ಯ ಮೂರು ವರ್ಷಗಳ ಸರಾಸರಿ ಲಾಭದ ಎರಡು ಪಟ್ಟು ಇರುತ್ತದೆ.
   31.03.2012 ₹ 9,000
   31.03.2013 ₹ 8,500
   31.03.2014 ₹ 12,500
2. ಅಂಜನ ರವರ ಕೀರ್ತಿ ಮೌಲ್ಯವನ್ನು ಸೃಷ್ಟಿಸಿ ಮತ್ತು ತಕ್ಷಣ ಅದನ್ನು ತೊಡೆದು ಹಾಕಬೇಕು.
3. ಪೀಠೋಪಕರಣ ಮತ್ತು ದಾಸ್ತಾನು ಮೌಲ್ಯ ಕ್ರಮವಾಗಿ ₹ 6,500 ಮತ್ತು ₹ 22,000.
4. ಯಂತ್ರೋಪಕರಣದ ಮೇಲೆ ಶೇ 10ರಷ್ಟು ಸವಕಳಿ ತೆಗೆಯಿರಿ ಮತ್ತು ಕಟ್ಟಡಗಳನ್ನು ಶೇ 10ರಷ್ಟು ಹೆಚ್ಚಿಸಲಾಯಿತು.
5. ಋಣಿಗಳ ಮೇಲೆ ಕರಡು ಸಾಲದ ಕಾಯ್ದಿಟ್ಟ ನಿಧಿ ಶೇ. 5 ರಷ್ಟು ತೆಗೆದಿರಿಸಿ.
6. ಬಾಕಿ ವೇತನ ಮೌಲ್ಯ ₹ 1,000.
7. ಅಂಜನ ರವರಿಗೆ ನೀಡಬೇಕಾದ ಹಣವನ್ನು ಬ್ಯಾಂಕು ಮೀರೆಳೆತವನ್ನು ತೆಗೆದುಕೊಂಡು ಪಾವತಿಸಲಾಯಿತು.

ತಯಾರಿಸಿ : **A**. ಮರು ಮೌಲ್ಯ ಮಾಪನ ಖಾತೆ **B**. ಬಂಡವಾಳ ಖಾತೆಗಳು **C**. ಆಢಾವೇ ಪತ್ರಿಕೆ.

ನಿರೂಪಣೆ :

ಟಿಪ್ಪಣಿ :

a) ಅಂಜನ ಪಾಲಿನ ಕೀರ್ತಿ ಮೌಲ್ಯವನ್ನು ಲೆಕ್ಕಹಾಕುವುದು :

ಹಿಂದಿನ ಮೂರು ವರ್ಷಗಳಲ್ಲಿ ಗಳಿಸಿದ ಒಟ್ಟು ಲಾಭ :

ವರ್ಷ	₹
31.03.2012	9,000
31.03.2013	8,500
31.03.2014	12,500
	30,000

$$\text{ಸರಾಸರಿ ಲಾಭ} = \frac{30,000}{3} = ₹\ 10,000.$$

ಸರಾಸರಿ ಲಾಭದ ಎರಡು ಪಟ್ಟು = 10,000 × 2 = ₹ 20,000.

ಸಂಸ್ಥೆಯ ಕೀರ್ತಿ ಮೌಲ್ಯ ₹ 20,000

ಅಂಜನ ಪಾಲಿನ ಕೀರ್ತಿ ಮೌಲ್ಯ 20,000×1/5 = ₹4,000.

b) ಚಂದನ ಮತ್ತು ಮೇಘನ ರವರ ಗಳಿಕೆಯ ಅನುಪಾತ ಬಂದು ಸಮ ಅನುಪಾತ (2:2(1))

ಖರ್ಚು **ಮರು ಮೌಲ್ಯ ಮಾಪನದ ಖಾತೆ** ಜಮ

ವಿವರಗಳು	₹	ವಿವರಗಳು	₹
ಗೆ, ಯಂತ್ರೋಪಕರಣದ ಖಾತೆ (10,000 x 10/100)	1,000	ಯಿಂದ, ಪೀಠೋಪಕರಣದ ಖಾತೆ (6,500 -5,800)	700
ಗೆ, ಬಾಕಿ ವೇತನ ಖಾತೆ (1,000 -500)	500	ಯಿಂದ, ದಾಸ್ತಾನು ಖಾತೆ (22,000 – 17,000)	5,000
ಗೆ, ಪಾಲುದಾರರ ಬಂಡವಾಳ ಖಾತೆಗಳು		ಯಿಂದ, ಕಟ್ಟಡದ ಖಾತೆ (10,000 x10/100)	1,000
ಚಂದನ (5,500X2/5) 2,200		ಯಿಂದ, ಕರಡು ಸಾಲದ ಕಾಯ್ದಿಟ್ಟ ನಿಧಿ ಖಾತೆ [(800-(10,000X5/100)]	300
ಮೇಘನ (5,500 X2/5) 2,200			
ಅಂಜನ(5,500 X1/5) 1,100	5,500		
	7,000		**7,000**

ಖರ್ಚು **ಪಾಲುದಾರರ ಬಂಡವಾಳದ ಖಾತೆಗಳು** Cr. ಜಮ

ವಿವರಗಳು	ಚಂದನ ₹	ಮೇಘನ ₹	ಅಂಜನ ₹	ವಿವರಗಳು	ಚಂದನ ₹	ಮೇಘನ ₹	ಅಂಜನ ₹
ಗೆ, ಲಾಭ ನಷ್ಟದ ಖಾತೆ	6,000	6,000	3,000	ಯಿಂದ, ಪ್ರಾರಂಬದ ಶಿಲ್ಕು	15,000	10,000	12,000
ಗೆ, ಕೀರ್ತಿ ಮೌಲ್ಯ ಖಾತೆ	2,000	2,000		ಯಿಂದ, ಮರು ಮೌಲ್ಯ ಮಾಪನ ಖಾತೆ (ಲಾಭ)	2,200	2,200	1,100
ಗೆ, ಬ್ಯಾಂಕು ಖಾತೆ			17,100	ಯಿಂದ, ಮೀಸಲು ಖಾತೆ	6,000	6,000	3,000
ಗೆ, ಅಂತಿಮ ಶಿಲ್ಕು	15,200	10,200		ಯಿಂದ, ಕೀರ್ತಿ ಮೌಲ್ಯ ಖಾತೆ			4,000
	23,200	**18,200**	**20,100**		**23,200**	**18,200**	**20,100**
				ಯಿಂದ, ಪ್ರಾರಂಬದ ಶಿಲ್ಕು	15,200	10,200	-

ಖರ್ಚು ಕೀರ್ತಿ ಮೌಲ್ಯದ ಖಾತೆ ಜಮ

ವಿವರಗಳು	₹	ವಿವರಗಳು	₹
ಗೆ, ಅಂಜನ ಬಂಡವಾಳ ಖಾತೆ	4,000	ಯಿಂದ, ಚಂದನ ಬಂಡವಾಳದ ಖಾತೆ (4000 x 1/2)	2,000
		ಯಿಂದ, ಮೇಘನ ಬಂಡವಾಳದ ಖಾತೆ (4000 x1/2)	2,000
	4,000		**4,000**

ಖರ್ಚು ಬ್ಯಾಂಕು ಖಾತೆ ಜಮ

ವಿವರಗಳು	₹	ವಿವರಗಳು	₹
ಗೆ, ಪ್ರಾರಂಭದ ಕಿಲ್ಕು	7,500	ಯಿಂದ, ಅಂಜನ ಬಂಡವಾಳದ ಖಾತೆ	17,100
ಗೆ, ಅಂತಿಮ ಶಿಲ್ಕು	9,600		
	17,100		**17,100**
		ಯಿಂದ, ಪ್ರಾರಂಭದ ಶಿಲ್ಕು	9,600

ದಿನಾಂಕ 1–4–2014 ಕ್ಕೆ ಚಂದನ ಮತ್ತು ಮೇಘನ ರವರ ಆಢಾವೆ ಪತ್ರಿಕೆ

ಹೊಣೆಗಾರಿಕೆಗಳು	₹	₹	ಆಸ್ತಿಗಳು	₹	₹
ಬಂಡವಾಳಗಳು :			ನಗದು		500
ಚಂದನ	15,200		ದಾಸ್ತಾನು	17,000	
ಮೇಘನ	10,200	25,400	+ ಹೆಚ್ಚಳ	5,000	22,000
ಬ್ಯಾಂಕು ಮೀರೆಳೆದ		9,600	ಪೀಠೋಪಕರಣಗಳು	5,800	
ಧಣಿಗಳು		13,000	+ ಹೆಚ್ಚಳ	700	6,500
ಕೊಡತಕ್ಕ ಹುಂಡಿಗಳು		9,500	ಕಟ್ಟಡಗಳು	10,000	
ಬಾಕಿ ವೇತನಗಳು	500		+ ಹೆಚ್ಚಳ	1,000	11,000
+ ಹೆಚ್ಚಳ	500	1,000	ಋಣಿಗಳು	10,000	
			– ಕಾಯ್ದಿಟ್ಟ ನಿಧಿ (800-300)	500	9,500
			ಯಂತ್ರೋಪಕರಣಗಳು	10,000	
			– ಸವಕಳಿ	1,000	9,000
		58,500			**58,500**

ನಿದರ್ಶನ 24.

ಅಜಯ್, ವಿಜಯ್ ಮತ್ತು ಸುಜಯ್ ಪಾಲುದಾರರಾಗಿದ್ದು ಲಾಭ ನಷ್ಟಗಳನ್ನು 2:2:1 ಅನುಪಾತದಲ್ಲಿ ಹಂಚಿಕೊಳ್ಳುವರು. ದಿನಾಂಕ 31–03–2014ಕ್ಕೆ ಅವರ ಆಢಾವೆ ಪತ್ರಿಕೆ ಈ ಕೆಳಗಿನಂತಿದೆ.

ಹೊಣೆಗಾರಿಕೆಗಳು	₹	₹	ಆಸ್ತಿಗಳು	₹	₹
ಧಣಿಗಳು		25,000	ನಗದು		3,000
ಕೊಡತಕ್ಕ ಹುಂಡಿಗಳು		12,000	ಋಣಿಗಳು	20,000	
ಲಾಭ ನಷ್ಟದ ಖಾತೆ		15,000	–ಕರಡು ಸಾಲದ ಕಾಯ್ದಿಟ್ಟ ನಿಧಿ	1,000	19,000
ಬಂಡವಾಳಗಳು :			ದಾಸ್ತಾನು		30,000
ಅಜಯ್	40,000		ಪೀಠೋಪಕರಣಗಳು		10,000
ವಿಜಯ್	40,000		ಸ್ಥಾವರ ಮತ್ತು ಯಂತ್ರ		40,000
ಸುಜಯ್	30,000	1,10,000	ಕಟ್ಟಡ		60,000
		1,62,000			**1,62,000**

ಮೇಲಿನ ದಿನಾಂಕದಂದು ವಿಜಯ್ ರವರು ನಿವೃತ್ತಿಯಾದರು ಮತ್ತು ಉಳಿದ ಪಾಲುಗಾರರು ನಿರ್ಧರಿಸಿರುವುದು ಏನೆಂದರೇ:

1. ಸಂಸ್ಥೆಯ ಕೀರ್ತಿ ಮೌಲ್ಯವನ್ನು ₹ 30,000 ಎಂದು ಮೌಲ್ಯ ಮಾಡಲಾಯಿತು. ವಿಜಯ್ ಪಾಲಿನ ಕೀರ್ತಿ ಮೌಲ್ಯವನ್ನು ಸೃಷ್ಟಿಸಿ ಮತ್ತು ಕೀರ್ತಿ ಮೌಲ್ಯದ ಖಾತೆಯನ್ನು ತೆಗೆಯದೆ ಅದನ್ನು ತೊಡೆದು ಹಾಕಬೇಕು.
2. ಪೀಠೋಪಕರಣಗಳ ಮೇಲೆ ಶೇ.10 ರಷ್ಟು ಸವಕಳಿ ತೆಗೆಯಿರಿ, ಮತ್ತು ಯಂತ್ರೋಪಕರಣಗಳ ಮೌಲ್ಯ ₹ 37,000.
3. ದಾಸ್ತಾನು ಮೌಲ್ಯವನ್ನು ಶೇ 20ರಷ್ಟು ಹೆಚ್ಚಿಸಲಾಯಿತು. ಮತ್ತು ಕಟ್ಟಡಗಳ ಪುಸ್ತಕದ ಬೆಲೆಯನ್ನು ಶೇ 10ರಷ್ಟು ಮೌಲ್ಯವನ್ನು ಹೆಚ್ಚಿಸಲಾಯಿತು.
4. ಅನುಮಾನಸ್ಪದ ಸಾಲದ ಕಾಯ್ದಿಟ್ಟ ನಿಧಿಯನ್ನು ₹ 500ಗೆ ಕಡಿಮೆಮಾಡಲಾಯಿತು ಮತ್ತು ಮುಂಗಡವಾಗಿ ನೀಡಿದ ವಿಮಾ ₹ 1200.
5. ಪುಸ್ತಕದಲ್ಲಿ ತೆಗೆದುಕೊಳ್ಳದಿರುವ ಬೆರಳಚ್ಚು ಯಂತ್ರದ ಬೆಲೆ ₹ 3000 ಅದನ್ನು ಪುಸ್ತಕದಲ್ಲಿ ತೆಗೆದುಕೊಳ್ಳುವುದು.

ತಯಾರಿಸಿ: A) ಪುನರ್ ಮೌಲ್ಯ ಮಾನದ ಖಾತೆ

B) ಪಾಲುದಾರರ ಬಂಡವಾಳದ ಖಾತೆಗಳು

C) ಹೊಸ ಸಂಸ್ಥೆಯ ಪ್ರಾರಂಬದ ಅಢಾವೇ ಪತ್ರಿಕೆ.

ನಿರೂಪಣೆ :

ಖರ್ಚು **ಪುನರ್ ಮೌಲ್ಯ ಮಾಪನದ ಖಾತೆ** **ಜಮ**

ವಿವರಗಳು	₹	ವಿವರಗಳು	₹
ಗೆ, ಪೀಠೋಪಕರಣಗಳ ಖಾತೆ (10,000 x10/100)	1,000	ಯಿಂದ ದಾಸ್ತಾನು ಖಾತೆ (30,000 x20/100)	6,000
ಗೆ, ಯಂತ್ರೋಪಕರಣಗಳ ಖಾತೆ (40,000 -37,000)	3,000	ಯಿಂದ ಕಟ್ಟಡಗಳ ಖಾತೆ (60,000 x10/100)	6,000
ಗೆ, ಪಾಲುದಾರರ ಬಂಡವಾಳದ ಖಾತೆಗಳು (ಲಾಭ)		ಯಿಂದ ಕರಡು ಸಾಲದ ಕಾಯ್ದಿಟ್ಟ ನಿಧಿಖಾತೆ	500
ಅಜಯ್ (12,700 x2/5) 5,080		ಯಿಂದ ಮುಂಗಡವಾಗಿ ನೀಡಿದ ವಿಮೆ.	1,200
ವಿಜಯ್ (12,700 x2/5) 5,080		ಯಿಂದ ಬೆರಳಚ್ಚು ಯಂತ್ರದ ಖಾತೆ	3,000
ಸುಜಯ್ (12,700x1/5) 2,540	12,700		
	16,700		**16,700**

ಖರ್ಚು **ಪಾಲುದಾರರ ಬಂಡವಾಳ ಖಾತೆಗಳು** ಜಮ

ವಿವರಗಳು	ಅಜಯ್ ₹	ವಿಜಯ್ ₹	ಸುಜಯ್ ₹	ವಿವರಗಳು	ಅಜಯ್ ₹	ವಿಜಯ್ ₹	ಸುಜಯ್ ₹
ಗೆ, ವಿಜಯ್ ಬಂಡವಾಳ ಖಾತೆ	8,000		4,000	ಯಿಂದ, ಪ್ರಾರಂಬದ ಶಿಲ್ಕು	40,000	40,000	30,000
ಗೆ, ವಿಜಯ್ ಸಾಲದ ಖಾತೆ		63,080		ಯಿಂದ, ಮರು ಮೌಲ್ಯ ಮಾಪನದ ಖಾತೆ	5,080	5,080	2,540
ಗೆ, ಅಂತಿಮ ಶಿಲ್ಕು	43,080		31,540	ಯಿಂದ, ಲಾಭ ನಷ್ಟದ ಖಾತೆ	6,000	6,000	3,000
				ಯಿಂದ, ಅಜಯ್ ಬಂಡವಾಳ ಖಾತೆ (ಕೀರ್ತಿ ಮೌಲ್ಯ)		8,000	
				ಯಿಂದ, ಸುಜಯ್ ಬಂಡವಾಳ ಖಾತೆ (ಕೀರ್ತಿ ಮೌಲ್ಯ)		4,000	
	51,080	**63,080**	**35,540**		**51,080**	**63,080**	**35,540**
				ಯಿಂದ, ಪ್ರಾರಂಭದ ಶಿಲ್ಕು	43,080	-	31,540

ದಿನಾಂಕ 1–4–2014 ರಂದು ಅಜಯ್ ಮತ್ತು ಸುಜಯ್ ರವರ ಅಢಾವೆ ಪತ್ರಿಕೆ

ಹೊಣೆಗಾರಿಕೆಗಳು	₹	₹	ಆಸ್ತಿಗಳು	₹	₹
ಧಣಿಗಳು		25,000	ನಗದು		3,000
ಕೊಡತಕ್ಕ ಹುಂಡಿಗಳು		12,000	ಋಣಿಗಳು	20,000	
ಬಂಡವಾಳಗಳು :			– ಕಾಯ್ದಿರಿಸಿದ ನಿಧಿ(1,000 -500)	500	19,500
ಅಜಯ್	43,080		ದಾಸ್ತಾನು	30,000	
ಸುಜಯ್	31,540	74,620	+ ಹೆಚ್ಚಳ	6,000	36,000
ವಿಜಯ್ ಸಾಲ		63,080	ಪೀಠೋಪಕರಣಗಳು	10,000	
			–ಸವಕಳಿ	1,000	9,000
			ಸ್ಥಾವರ ಮತ್ತು ಯಂತ್ರ	40,000	
			–ಸವಕಳಿ	3,000	37,000
			ಕಟ್ಟಡಗಳು	60,000	
			+ ಹೆಚ್ಚಳ	6,000	66,000
			ಬೆರಳಚ್ಚು ಯಂತ್ರ		3,000
			ಮುಂಗಡ ನೀಡಿದ ವಿಮೆ		1,200
		1,74,700			**1,74,700**

ನಿದರ್ಶನ 25.

ಭೀಮ್, ಜಗ್ಗು ಮತ್ತು ಕಾಲಿಯಾ ಪಾಲುದಾರಿಕಾ ಸಂಸ್ಥೆಯಲ್ಲಿದ್ದು, ಲಾಭ ನಷ್ಟಗಳನ್ನು 5:4:3 ಅನುಪಾತದಲ್ಲಿ ಹಂಚಿಕೊಳ್ಳುವರು. ದಿನಾಂಕ 31–03–2010 ರಂದು ಕಾಲಿಯಾ ನಿವೃತ್ತರಾದರು. ಎಲ್ಲಾ ಅಗತ್ಯ ಹೊಂದಾಣಿಕೆಗಳನ್ನು ಮಾಡಿದ ನಂತರ ಅವರಿಗೆ ನೀಡಬೇಕಾಗಿರುವ ಹಣ ರೂ 30,000 ನಿವೃತ್ತ ದಿನಾಂಕದೆಂದು ಅವರಿಗೆ ರೂ 3000ಗಳು ಪಾವತಿಸಲಾಯಿತು ಮತ್ತು ಉಳಿದ ಶಿಲ್ಕುನ್ನು ಅವರ ಸಾಲದ ಖಾತೆಗೆ ವರ್ಗಾಯಿಸಲಾಯಿತು. ಅದನ್ನು ವರ್ಷದ ಶೇ 10ರಷ್ಟು ಬಡ್ಡಿ ಸೇರಿಸಿ ವಾರ್ಷಿಕ ಪೂರ್ಣ ಸಮ ಕಂತುಗಳಲ್ಲಿ ಪಾವತಿಸಲಾಯಿತು.

ಮೂರು ವರ್ಷಗಳ ಕಾಲಿಯಾ ರವರ ಸಾಲದ ಖಾತೆಯನ್ನು ತೊರಿಸಿ.

ಖರ್ಚು — ಕಾಲಿಯಾ ಸಾಲದ ಖಾತೆ — ಜಮ

ದಿನಾಂಕ	ವಿವರಗಳು	₹	ದಿನಾಂಕ	ವಿವರಗಳು	₹
31.3.2010	ಗೆ, ಅಂತಿಮ ಶಿಲ್ಕು	27,000	31.3.2010	ಯಿಂದ, ಕಾಲಿಯಾ ಬಂಡವಾಳ ಖಾತೆ	27,000
		27,000			**27,000**
31.3.2011	ಗೆ, ಬ್ಯಾಂಕು ಖಾತೆ (9,000 + 2,700)	11,700	01.4.2010	ಯಿಂದ, ಪ್ರಾರಂಭದ ಶಿಲ್ಕು	27,000
31.3.2011	ಗೆ, ಅಂತಿಮ ಶಿಲ್ಕು	18,000	31.3.2011	ಯಿಂದ, ಬಡ್ಡಿ ಖಾತೆ (27,000 x 10/100)	2,700
		29,700			**29,700**
31.3.2012	ಗೆ, ಬ್ಯಾಂಕು ಖಾತೆ (9,000 + 1,800)	10,800	01.4.2011	ಯಿಂದ, ಪ್ರಾರಂಭದ ಶಿಲ್ಕು	18,000
31.3.2012	ಗೆ, ಅಂತಿಮ ಶಿಲ್ಕು	9,000	31.3.2012	ಯಿಂದ, ಬಡ್ಡಿ ಖಾತೆ (18,000 x 10/100)	1,800
		19,800			**19,800**
31.3.2013	ಗೆ, ಬ್ಯಾಂಕು ಖಾತೆ (9,000 + 900)	9,900	01.04.2012	ಯಿಂದ, ಪ್ರಾರಂಭದ ಶಿಲ್ಕು	9,000
			31.03.2013	ಯಿಂದ, ಬಡ್ಡಿ ಖಾತೆ (9,000+10/100)	900
		9,900			**9,900**

4.2. ಪಾಲುದಾರನ ಮರಣ/ನಿಧನ

ಪೀಠಿಕೆ (Introduction) :

ಪಾಲುಗಾರಿಕೆಯ ಯಾವುದೇ ಪಾಲುದಾರನು ಮರಣ ಹೊಂದಿದಾಗ ಪಾಲುದಾರಿಕೆಯು ಕೊನೆಗೊಳ್ಳುತ್ತದೆ. ಉಳಿದ ಪಾಲುದಾರರ ನಡುವೆ ಪ್ರತ್ಯೇಕ ಒಪ್ಪಂದದೊಂದಿಗೆ, ಪಾಲುಗಾರಿಕಾ ಸಂಸ್ಥೆಯನ್ನು ಯಾವುದೇ ಪಾಲುದಾರರ ಸಾವಿನ ನಂತರವು ಮುಂದುವರಿಸಬಹುದು. ಪಾಲುಗಾರಿಕಾ ಸಂಸ್ಥೆಯ ವ್ಯವಹಾರವು ಮುಂದುವರಿಕೆಯಾದಲ್ಲಿ, ಮರಣ ಹೊಂದಿದ ಪಾಲುದಾರನಿಗೆ ಕೊಡಬೇಕಾದ ಅಥವಾ ಪಾವತಿಸಬೇಕಾದ ಮೊತ್ತವನ್ನು ಕಂಡುಹಿಡಿದು ಅದನ್ನು ಅವನ ಕಾನೂನು ಬದ್ದ ವಾರಸುದಾರರಿಗೆ (ಉತ್ತರಾಧಿಕಾರಿ) ನೀಡಬೇಕಾಗುತ್ತದೆ. ಪಾಲುಗಾರಿಕಾ ಸಂಸ್ಥೆಯ ನಿಧನ ಹೊಂದಿದ ಪಾಲುದಾರರ ಕಾನೂನುಬದ್ದ ಪ್ರತಿನಿಧಿಯನ್ನು ವಾರಸುದಾರ ಅಥವಾ ಉತ್ತರಾಧಿಕಾರಿ ಎನ್ನುತ್ತಾರೆ. ಪಾಲುದಾರರು ನಿಧನ ಹೊಂದಿದಾಗ ಅವನಿಗೆ ಕೊಡಬೇಕಾದ ಅಂತಿಮ ಶಿಲ್ಕನ್ನು ಪಾವತಿಸಲ್ಪಡುವ ವ್ಯಕ್ತಿಗಳನ್ನು ಕಾನೂನು ಬದ್ದ ವಾರಸುದಾರರು ಎನ್ನುತ್ತಾರೆ.

ಲೆಕ್ಕದ ಪರಿಗಣನೆ : (Accounting treatment)

ಪಾಲುಗಾರನ ನಿವೃತ್ತಿ ಮತ್ತು ಪಾಲುದಾರನ ಮರಣ ಈ ಎರಡು ಸಂದರ್ಭದಲ್ಲಿ ಅನುಸರಿಸುವ ಕ್ರಮಾನುಗತಿ ಒಂದೇ ಆಗಿರುತ್ತದೆ. ಪಾಲುದಾರನ ನಿವೃತ್ತಿಯಲ್ಲಿ ಸಾಮಾನ್ಯವಾಗಿ ಪಾಲುದಾರನು ವರ್ಷದ ಕೊನೆಯಲ್ಲಿ ನಿವೃತ್ತಿ ಹೊಂದುತ್ತಾನೆ. ಅದರೆ ಪಾಲುದಾರನ ನಿಧನವು ಅನಿಶ್ಚಿತವಾಗಿದ್ದು ಯಾವುದೇ ಸಮಯದಲ್ಲಿ ಸಂಭವಿಸಬಹುದು. ಈ ಕಾರಣಕ್ಕಾಗಿ ಒಂದು ಹೆಚ್ಚುವರಿ ಹೊಂದಾಣಿಕೆಯನ್ನು ಅಗತ್ಯವಾಗಿ ಮಾಡಬೇಕಾಗುತ್ತದೆ. ಅದು ಯಾವುದೆಂದರೆ, ನಿಧನಹೊಂದಿದ ಪಾಲುದಾರನ ಗಳಿಸಿದ ಲಾಭ ಅಥವಾ ನಷ್ಟದ ಭಾಗವನ್ನು ಕಂಡುಹಿಡಿಯುವುದು.

ಪಾಲುದಾರರ ನಿವೃತ್ತಿ ಮತ್ತು ಪಾಲುದಾರರ ನಿಧನಗಳ ನಡುವಿನ ವ್ಯತ್ಯಾಸಗಳು

ಪಾಲುದಾರರನ ನಿವೃತ್ತಿ	ಪಾಲುದಾರನ ನಿಧನ
1. ಪಾಲುದಾರರ ನಿವೃತ್ತಿಯು ಸಾಮಾನ್ಯವಾಗಿ ವರ್ಷದ ಕೊನೆಯಲ್ಲಿ ನಡೆಯುತ್ತದೆ.	1. ಪಾಲುದಾರರ ಮರಣವು ವರ್ಷದ ಯಾವುದೇ ಸಮಯದಲ್ಲಿ ಸಂಭವಿಸ ಬಹುದು.
2. ಪಾಲುದಾರನ ನಿವೃತ್ತಿಯಲ್ಲಿ ಪಾಲುದಾರರ ಬಂಡವಾಳ ಖಾತೆಯನ್ನು ಸಂಸ್ಥೆ ಮತ್ತು ನಿವೃತ್ತಿ ಹೊಂದಿದ ಪಾಲುದಾರರ ನಡುವೆ ಚುಕ್ತ ಮಾಡಲಾಗುತ್ತದೆ.	2. ನಿಧನ ಹೊಂದಿದ ಪಾಲುದಾರನ ಬಂಡವಾಳ ಖಾತೆಯನ್ನು ಸಂಸ್ಥೆ ಮತ್ತು ಕಾನೂನು ಬದ್ದ ವಾರಸುದಾರರ ನಡುವೆ ಚುಕ್ತ ಮಾಡಲಾಗುತ್ತದೆ.
3. ನಿವೃತ್ತಿಯಲ್ಲಿ ನಿವೃತ್ತಿ ಹೊಂದಿದ ಪಾಲುದಾರನ ಬಂಡವಾಳ ಖಾತೆಯ ಶಿಲ್ಕನ್ನು ಅವನಿಗೆ ತಕ್ಷಣವೇ ಪಾವತಿಸಲಾಗುವುದಿಲ್ಲ.	3. ಪಾಲುದಾರನ ನಿಧನದಲ್ಲಿ ಸಾಮಾನ್ಯವಾಗಿ ಮರಣ ಹೊಂದಿದ ಪಾಲುದಾರನ ಬಂಡವಾಳ ಖಾತೆಯ ಶಿಲ್ಕನ್ನು ಅವನ ವಾರಸುದಾರರಿಗೆ ತಕ್ಷಣವೇ ಪಾವತಿಸಲಾಗುವುದು.

4.2.1 ಮರಣಹೊಂದಿದ ಪಾಲುದಾರರನಿಗೆ ಪಾವತಿಸಬೇಕಾದ ಮೊತ್ತವನ್ನು ಕಂಡುಹಿಡಿಯುವುದು:

ಯಾವುದೇ ಪಾಲುದಾರ ನಿಧನ ಹೊಂದಿದಾಗ, ಅವನಿಗೆ ಬರಬೇಕಾದ ನಿವ್ವಳ ಬಂಡವಾಳವನ್ನು ಅವನ ವಾರಸುದಾರರು ಸಂಸ್ಥೆಯ ಉಳಿದ ಪಾಲುದಾರರಿಂದ ಪಡೆಯಲು ಅರ್ಹರಿರುತ್ತಾರೆ. ಈ ಮೊತ್ತವನ್ನು ನಿಧನ ಹೊಂದಿದ ಪಾಲುದಾರನ ಬಂಡವಾಳ ಖಾತೆಯನ್ನು ತೆರೆಯುವುದರ ಮೂಲಕ ಕಂಡುಹಿಡಿಯಬಹುದು. ಪಾಲುದಾರನ ಬಂಡವಾಳ ಖಾತೆಯನ್ನು ತೆರೆಯುವಾಗ, ಈ ಕೆಳಗಿನ ಅಂಶಗಳನ್ನು ಸಂಸ್ಥೆಯ ಲೆಕ್ಕದ ಪುಸ್ತಕದಲ್ಲಿ ಪರಿಗಣಿಸಬೇಕಾಗುತ್ತದೆ.

a) **ನಿಧನ ಹೊಂದಿದ ಪಾಲುದಾರನ ಬಂಡವಾಳ** : ಸಂಸ್ಥೆಯ ಅಥಾವೆ ಪತ್ರಿಕೆಯಲ್ಲಿ ನಮೂದಿಸಿದ ಬಂಡವಾಳದ ಮೊತ್ತವನ್ನು ಅವನ ಬಂಡವಾಳ ಖಾತೆಯ ಜಮ ಭಾಗದಲ್ಲಿ ಪ್ರಾರಂಭಿಕ ಶಿಲ್ಕುಯೆಂದು ತೋರಿಸಬೇಕು.

b) **ಬಂಡವಾಳದ ಮೇಲಿನ ಬಡ್ಡಿ** : ಪಾಲುಗಾರಿಕಾ ಒಪ್ಪಂದಂತೆ ಪಾಲುದಾರರಿಗೆ ಅವರ ಬಂಡವಾಳದ ಮೇಲೆ ಬಡ್ಡಿ ನೀಡುವಂತಿದ್ದರೆ, ಹಿಂದಿನ ಅಥಾವೆ ಪತ್ರಿಕೆ ದಿನದಿಂದ ಪಾಲುದಾರನ ಮರಣದ ದಿನಾಂಕದವರೆಗೆ ಬಂಡವಾಳದ ಮೇಲಿನ ಬಡ್ಡಿಯನ್ನು ಕಂಡುಹಿಡಿದು ಬಂಡವಾಳ ಬಡ್ಡಿ ಖಾತೆಗೆ ಖರ್ಚು ಬರೆದು ನಿಧನ ಹೊಂದಿದ ಪಾಲುದಾರನ ಬಂಡವಾಳ ಖಾತೆಗೆ ಜಮ ಬರೆಯಬೇಕು.

c) **ನಿಧನ ಹೊಂದಿದ ದಿನಾಂಕದವರೆಗೆ ವೇತನ ಮತ್ತು ದಲ್ಲಾಳಿ** : ಪಾಲುಗಾರಿಕಾ ಒಪ್ಪಂದಂತೆ, ಪಾಲುದಾರರಿಗೆ ಸಂಭಾವನೆ ವೇತನ ಮತ್ತು ದಲ್ಲಾಳಲ್ಲಿ ನೀಡುವಂತಿದ್ದರೆ ಹಿಂದಿನ ಆಥಾವೆ ಪತ್ರಿಕೆ ದಿನದಿಂದ ಮರಣ ದಿನಾಂಕದವರೆಗೆ ಮಾತ್ರವೇ ಕಂಡುಹಿಡಿದು ವೇತನ ಅಥವಾ ದಲ್ಲಾಳಿ ಖಾತೆಗೆ ಖರ್ಚು ಬರೆದು, ನಿಧನ ಹೊಂದಿದ ಪಾಲುದಾರನ ಬಂಡವಾಳ ಖಾತಿಗೆ ಜಮ ಬರೆಯಬೇಕು.

d) **ನಿಧನ ಹೊಂದಿದ ಪಾಲುದಾರನ ಕಾಯ್ದಿಟ್ಟ (ಸಂಚಿತ ನಿಧಿ) ನಿಧಿಯ ಪಾಲು** : ಹಿಂದಿನ ಅಥಾವೆ ಪತ್ರಿಕೆಯಲ್ಲಿ ನಮೂದಿಸಿರುವ ಯಾವುದೇ ನಿಧಿ, ಸಂಚಿತ ಅಥವಾ ಸಾಮಾನ್ಯ (ಸಂಚಿತ ಲಾಭ) ಇದ್ದರೆ ಅದನ್ನು ಸಂಬಂಧಿಸಿದ ನಿಧಿಯ ಖಾತೆಗೆ ಖರ್ಚು ಬರೆದು ನಿಧನ ಪಾಲುದಾರನ ಬಂಡವಾಳ ಖಾತೆಗೆ ಜಮ ಬರೆಯಬೇಕು.

e) **ನಿಧನ ಹೊಂದಿದ ಪಾಲುದಾರನ ಕೀರ್ತಿ ಮೌಲ್ಯದ ಪಾಲು** : ನಿಧನ ಹೊಂದಿದ ಪಾಲುದಾರನಿಗೆ ಪಾವತಿಸಬೇಕಾದ ಮೊತ್ತವನ್ನು ಕಂಡುಹಿಡಿಯುವಲ್ಲಿ ಅವನ ಕೀರ್ತಿ ಮೌಲ್ಯದ ಪಾಲನ್ನು ಪರಿಗಣಿಸಬೇಕಾಗುತ್ತದೆ. ಈ ಕೀರ್ತಿ ಮೌಲ್ಯದ ಪಾಲನ್ನು ಪಾಲುಗಾರಿಕಾ ಒಪ್ಪಂದದ ಪ್ರಕಾರವೇ ಕಂಡುಹಿಡಿಯಬೇಕಾಗುತ್ತದೆ. ಪಾಲುಗಾರಿಕಾ ಒಪ್ಪಂದರಲ್ಲಿ ಕೀರ್ತಿ ಮೌಲ್ಯದ ನಿಂಬಂಧನೆಯ ಗೈರು ಹಾಜರಿಯಲ್ಲಿ ಸಂಸ್ಥೆಯ ಉಳಿದ ಪಾಲುದಾರರು ಹಾಗೂ ವಾರಸುದಾರರ ನಡುವಿನ ಪರಸ್ಪರ ಒಪ್ಪಿಗೆಯ ಮೇಲೆ ಕೀರ್ತಿ ಮೌಲ್ಯ ನಿರ್ಧಾರವಾಗುತ್ತದೆ.

ಪಾಲುದಾರನು ಸತ್ತಾಗ ಕೀರ್ತಿ ಮೌಲ್ಯವನ್ನು ನಿರ್ಧರಿಸಲು ಅನುಸರಿಸಲಾಗುವ ವಿವಿಧ ಪದ್ಧತಿಗಳು, ನಿವೃತ್ತಿಯ ಸಂದರ್ಭದಲ್ಲಿ ಅನುಸರಿಸುವ ಪದ್ಧತಿಗಳಂತೆಯೇ ಇರುತ್ತವೆ. ನಿಧನಹೊಂದಿದ ಪಾಲುದಾರನ ಕೀರ್ತಿ ಮೌಲ್ಯದ ಪಾಲನ್ನು ಕಂಡುಹಿಡಿದ ಮೇಲೆ, ಕೀರ್ತಿ ಮೌಲ್ಯದ ಖಾತೆಗೆ ಖರ್ಚು ಬರೆದು ನಿಧನ ಹೊಂದಿದ ಪಾಲುದಾರನ ಬಂಡವಾಳ ಖಾತೆಗೆ ಜಮ ಬರೆಯಲಾಗುತ್ತದೆ.

f) **ಜಂಟಿ ವಿಮಾ ಪಾಲಿಸಿಯ ಪಾಲು** : ಪಾಲುಗಾರಿಕಾ ಸಂಸ್ಥೆಯು ಜಂಟಿ ವಿಮಾ ಪಾಲಿಸಿಯನ್ನು ಹೊಂದಿದ್ದರೆ, ಅ ಪಾಲಿಸಿಯ ನಿಧನ ಹೊಂದಿದ ಪಾಲುದಾರನ ಪಾಲನ್ನು ಪರಿಗಣಿಸಬೇಕು. ಅದಕ್ಕಾಗಿ ಜಂಟಿ ವಿಮಾ ಪಾಲಿಸಿಯ ಖಾತೆಗೆ ಖರ್ಚನ್ನು ಬರೆದು ನಿಧನ ಹೊಂದಿದ ಪಾಲುಗಾರನ ಬಂಡವಾಳ ಖಾತೆಗೆ ಜಮ ಬರೆಯಬೇಕು.

g) **ನಿಧನ ಹೊಂದಿದ ಪಾಲುದಾರನ ಹಿಂತೆಗೆತದ ಮೊತ್ತ** : ನಿಧನ ಹೊಂದಿದ ಪಾಲುದಾರನು ಹಿಂದಿನ ದಿನಾಂಕದ ಅಥಾವೆ ಪತ್ರಿಕೆಯ ದಿನದಿಂದ ಅವನು ನಿಧನ ಹೊಂದಿದ ದಿನಾಂಕದವರೆಗೆ ತನ್ನ ಸ್ವಂತ ಅಥವಾ ಖಾಸಗಿ ಉದ್ದೇಶಗಳಿಗೆ ಹಣ ಅಥವಾ ಸರಕುಗಳನ್ನು ಹಿಂತೆಗಿದ್ದರೆ, ಅದನ್ನು ಕಂಡುಹಿಡಿದು ನಿಧನ ಹೊಂದಿದ ಪಾಲುಗಾರನ ಬಂಡವಾಳ ಖಾತೆಗೆ ಖರ್ಚು ಬರೆದು ಹಿಂತೆಗೆತದ ಖಾತೆಗೆ ಜಮ ಬರೆಯಬೇಕು.

h) ಸತ್ತಪಾಲುದಾರನ ಹಿಂತೆಗೆತಗಳ ಮೇಲಿನ ಬಡ್ಡಿ : ಹಿಂತೆಗೆತಗಳ ಮೇಲೆ ಬಡ್ಡಿ ವಿಧಿಸಲು ಪಾಲುದಾರಿಕೆಯ ಕರಾರಿನಲ್ಲಿ ಅವಕಾಶವಿದ್ದಲ್ಲಿ, ವಾರಸುದಾರರಿಗೆ ಪಾವತಿಸಬೇಕಾದ ಮೊತ್ತವನ್ನು ಲೆಕ್ಕಹಾಕುವಾಗ, ಸತ್ತಪಾಲುದಾರನ ಹಿಂತೆಗೆತಗಳ ಮೇಲಿನ ಬಡ್ಡಿಯನ್ನು ಗಣನೆಗೆ ತೆಗೆದುಕೊಳ್ಳಬೇಕು. ಅದಕ್ಕಾಗಿ ಸತ್ತಪಾಲುದಾರನ ಬಂಡವಾಳ ಖಾತೆಗೆ ಖರ್ಚು ಬರೆದು, ಹಿಂತೆಗೆತಗಳ ಬಡ್ಡಿಯ ಖಾತೆಗೆ ಜಮಾ ಬರೆಯಬೇಕು.

i) ನಿಧನ ಹೊಂದಿದ ಪಾಲುದಾರನ ವಿತರಿಸದೇಯಿರುವ ಲಾಭ ಅಥವ ಅದನ್ನು ನಷ್ಟದ ಪಾಲು : ಹಿಂದಿನ ಅಢಾವೆ ಪತ್ರಿಕೆಯಲ್ಲಿ ವಿತರಸದೇಯಿರುವ ಲಾಭ ಅಥವ ನಷ್ಟದ ಶಿಲ್ಕು ಇದ್ದರೆ, ಪರಿಗಣಿಸಬೇಕಾಗುತ್ತದೆ ವಿತರಸದೇಯಿರುವ ಲಾಭವು ಹೊಣೆಗಾರಿಯ (ಆಢಾವೆ ಪತ್ರಿಕೆ) ಬದಿಯಲ್ಲಿದ್ದರೆ ಅದನ್ನು ಲಾಭ ಮತ್ತು ನಷ್ಟದ ಖಾತೆಗೆ ಖರ್ಚು ಬರೆದು ನಿಧನ ಹೊಂದಿದ ಪಾಲುದಾರನ ಬಂಡವಾಳ ಖಾತೆಗೆ ಜಮಾ ಬರೆಯುವುದು. ವಿತರಿಸದೇಯಿರುವ ನಷ್ಟವು ಅಢಾವೆ ಪತ್ರಿಕೆಯ ಆಸ್ತಿಗಳ ಬದೀಯಲ್ಲಿದ್ದರೆ, ಅದನ್ನು ನಿಧನ ಹೊಂದಿದ ಪಾಲುದಾರರ ಬಂಡವಾಳ ಖಾತೆಗೆ ಖರ್ಚು ಬರೆದು, ಲಾಭ ಮತ್ತು ನಷ್ಟದ ಖಾತೆಗೆ ಜಮ ಬರೆಯಲಾಗುತ್ತದೆ.

j) ನಿಧನ ಹೊಂದಿದ ಪಾಲುದಾರನ ಗಳಿಸಿದ ಲಾಭ ಅಥವ ನಷ್ಟದ ಪಾಲು : ಹಿಂದಿನ ಅಢಾವೆ ಪತ್ರಿಕೆಯ ದಿನಾಂಕದಿಂದ ಪಾಲುದಾರನ ನಿಧನದ ದಿನಾಂಕದವರೆಗೆ ಸಂಸ್ಥೆಯಲ್ಲಿ ಗಳಿಸಿರಬಹುದಾದ ಲಾಭ/ನಷ್ಟವನ್ನು ಗಳಿಸಿದ ಲಾಭ ಅಥವಾ ನಷ್ಟ ಎನ್ನುತ್ತಾರೆ.

ನಿಧನ ಹೊಂದಿದ ಪಾಲುದಾರನ್ನು ಸಂಸ್ಥೆಯ ಗಳಿಸಿದ ಲಾಭ ಅಥವಾ ನಷ್ಟದಲ್ಲಿ ಪಾಲು ಪಡೆಯಲು ಅರ್ಹನಿರುತ್ತಾನೆ. ನಿಧನ ಹೊಂದಿದ ಪಾಲುದಾರನ ಗಳಿಸಿ ಲಾಭ/ನಷ್ಟದ ಪಾಲನ್ನು ಅಂತಿಮ ಲೆಕ್ಕದ ಮೂಲಕ ಕಂಡುಹಿಡಿದಿದ್ದರೆ. ಲಾಭ ಮತ್ತು ನಷ್ಟದ ಖಾತೆಗೆ ಖರ್ಚು ಬರೆದು ನಿಧನ ಹೊಂದಿದ ಪಾಲುಗಾರನ ಬಂಡವಾಳ ಖಾತೆಗೆ ಜಮಾ ಬರೆಯಲಾಗುತ್ತದೆ. (ಲಾಭವಿದ್ದರೆ) ನಷ್ಟವಿದ್ದರೆ ನಿಧನ ಹೊಂದಿದ ಪಾಲುದಾರನ ಬಂಡವಾಳ ಖಾತೆಗೆ ಖರ್ಚು ಬರೆದು ಲಾಭ/ನಷ್ಟದ ಖಾತೆಗೆ ಜಮಾ ಬರೆಯಲಾಗುತ್ತದೆ. ಒಂದು ವೇಳೆ ಅಂತಿಮ ಲೆಕ್ಕಗಳನ್ನು ತಯಾರಿಸಲು ಸಾಧ್ಯವಾಗದೇಯಿದ್ದರೆ, ನಿಧನ ಹೊಂದಿದ ದಿನಾಂಕದಂದು ಗಳಿಸಿದ ಲಾಭ/ನಷ್ಟದ ಭಾಗವನ್ನು ಹಿಂದಿನ ವರ್ಷಗಳ ಸರಾಸರಿ ಲಾಭ ಅಥವಾ ನಷ್ಟದ ಮೇಲೆ ಅಥವಾ ಸಂಸ್ಥೆಯ ಮಾರಾಟದ ಮೊತ್ತದ ಆಧಾರದಲ್ಲಿ ಕಂಡುಹಿಡಿಯಲಾಗುತ್ತದೆ. ಆ ಸಂದರ್ಭದಲ್ಲಿ ಗಳಿಸಿದ ಲಾಭದ ಭಾಗವನ್ನು ಲಾಭ/ನಷ್ಟದ ಸಂದೇಹಾಸ್ಪದ (suspense) ಖಾತೆಗೆ ಖರ್ಚು ಬರೆದು ನಿಧನ ಹೊಂದಿದ ಪಾಲುದಾರನ ಬಂಡವಾಳ ಖಾತೆಗೆ ಜಮಾ ಬರೆಯಲಾಗುತ್ತದೆ. ಗಳಿಸಿದ ನಷ್ಟವಿದ್ದರೆ ನಿಧನ ಹೊಂದಿದ ಪಾಲುದಾರನ ಬಂಡವಾಳ ಖಾತೆಗೆ ಖರ್ಚು ಬರೆದು ಲಾಭ/ನಷ್ಟದ ಸಂದೇಹಾಸ್ಪದ (suspense) ಖಾತೆಗೆ ಜಮಾ ಬರೆಯಲಾಗುತ್ತದೆ. ಮೇಲಿನ ಎರಡು ಪದ್ದತಿಗಳನ್ನು ಅನುಸರಿಸ ಬಹುದಾಗಿದ್ದರೂ ವಿದ್ಯಾರ್ಥಿಗಳು ಸಮಸ್ಯೆಯಲ್ಲಿ (ಲೆಕ್ಕದಲ್ಲಿ) ನೀಡಿದ ಸೂಚನೆಗಳನ್ನು ಅನುಸರಿಸಬೇಕು.

k) ಆಸ್ತಿ ಮತ್ತು ಜವಾಬ್ದಾರಿಗಳ ಮರುಮೌಲ್ಯ ಮಾಪನದ ಮೇಲಿನ ಲಾಭ ಅಥವ ನಷ್ಟದ ಪಾಲು : ಪಾಲುದಾರರ ಸೇರ್ಪಡೆ ಹಾಗು ನಿವೃತ್ತಿಯಲ್ಲಿದ್ದಂತೆ, ನಿಧನದಲ್ಲಿಯೂ ಸಹ, ಆಸ್ತಿ ಹಾಗು ಜವಾಬ್ದಾರಿಗಳ ಮೌಲ್ಯವನ್ನು ಚಾಲ್ತಿ ಬೆಲೆಗೆ ತರಲು ಮರು ಮೌಲ್ಯಮಾಪನ ಮಾಡುವ ಅವಶ್ಯಕತೆಯಿದೆ, ಮರು ಮೌಲ್ಯ ಮಾಪನಕ್ಕೆ ಒಪ್ಪಿಕೊಂಡಲ್ಲಿ, ಪಾಲುದಾರನ ನಿಧನದ ದಿನಾಂಕದಂದು ಮರುಮೌಲ್ಯ ಮಾಪನ ಮಾಡಬೇಕು ಸತ್ತಪಾಲುದಾರನ ಬಾಕಿ ಮೊತ್ತದ ಲೆಕ್ಕಾಚಾರದಲ್ಲಿ ಅವನ ಆಸ್ತಿ ಮತ್ತು ಜವಾಬ್ದಾರಿಗಳ ಮರುಮೌಲ್ಯಮಾಪನದ ಲಾಭ ಅಥವಾ ನಷ್ಟದ ಪಾಲನ್ನು ಗಣನೆಗೆ ತೆಗೆದುಕೊಳ್ಳಬೇಕು. ಲಾಭವಿದ್ದಲ್ಲಿ, ಮರುಮೌಲ್ಯಮಾಪನಖಾತೆಯನ್ನು ಖರ್ಚು ಹಾಗು ಸತ್ತಪಾಲುದಾರನ ಬಂಡವಾಳ ಖಾತೆಗೆ ಜಮಾ ಬರೆಯಬೇಕು. ನಷ್ಟವಿದ್ದಲ್ಲಿ ಸತ್ತಪಾಲುದಾರನ ಬಂಡವಾಳ ಖಾತೆ ಖರ್ಚು ಹಾಗು ಮರು ಮೌಲ್ಯಮಾಪನ ಖಾತೆಯನ್ನು ಜಮಾ ಬರೆಯಬೇಕು.

7) ನಿಧನ ಹೊಂದಿದ ಪಾಲುದಾರನ ಚಾಲ್ತಿ ಖಾತೆಯ ಶಿಲ್ಕು : ಪಾಲುದಾರನ ಬಂಡವಾಳ ಖಾತೆಯನ್ನು ಸ್ಥಿರ ಬಂಡವಾಳ ಪದ್ಧತಿಯಲ್ಲಿ ಅನುಸರಿಸಿದ್ದರೆ, ಪಾಲುದಾರರ ಚಾಲ್ತಿ ಖಾತೆಗಳನ್ನು ತೆರೆಯಬೇಕಾಗುತ್ತದೆ. ಹಾಗೂ ಅದರ ಮೊತ್ತವನ್ನು ನಿಧನ ಹೊಂದಿದ ಪಾಲುದಾರನಿಗೆ ಪಾವತಿಸಲು ಪರಿಗಣೀಸಬೇಕಾಗುತ್ತದೆ. ನಿಧನ ಹೊಂದಿದ ಪಾಲುದಾರನ ಚಾಲ್ತಿ ಖಾತೆಯು ಋಣದ ಶಿಲ್ಕು (Debit balance) ನ್ನು ಹೊಂದಿದ್ದರೆ ಆ ಮೊತ್ತವನ್ನು ನಿಧನ ಹೊಂದಿದ ಪಾಲುದಾರನ ಬಂಡವಾಳ ಖಾತೆಗೆ ಖರ್ಚು ಬರೆದು ಅವನ ಚಾಲ್ತಿ ಖಾತೆಗೆ ಜಮಾ ಬರೆಯಬೇಕು. ನಿಧನ ಹೊಂದಿದ ಪಾಲುದಾರನ ಚಾಲ್ತಿ ಖಾತೆಯು ಧನ ಶಿಲ್ಕು (Credit balance) ಹೊಂದಿದರೆ ನಿಧನ ಹೊಂದಿದ ಪಾಲುದಾರನ ಚಾಲ್ತಿ ಖಾತೆಗೆ ಖರ್ಚು ಬರೆದು ಅವನ ಬಂಡವಾಳ ಖಾತೆಗೆ ಜಮಾ ಬರೆಯಲಾಗುತ್ತದೆ.

ನಿಧನ ಹೊಂದಿದ ಪಾಲುದಾರನಿಗೆ ಪಾವತಿಸಬೇಕಾದ ಮೊತ್ತ : ಮೇಲೆ ತಿಳಿಸಿದ ಎಲ್ಲಾ ಅಂಶಗಳನ್ನು ನಿಧನ ಹೊಂದಿದ ಪಾಲುದಾರನ ಖಾತೆಯಲ್ಲಿ ದಾಖಲಿಸಿದ ಮೇಲೆ ಖಾತೆಯನ್ನು ತಾಳೆಮಾಡಿ ಶಿಲ್ಕನ್ನು ಕಂಡು ಹಿಡಿ ಹೀಗೆ ಕಂಡುಹಿಡಿದ ಅಂತಿಮ ಶೀಲ್ಕು ನಿಧನ ಹೊಂದಿದ ಪಾಲುದಾರನ ವಾರಸುದಾರರಿಗೆ ನೀಡಬೇಕಾದ ಮೊತ್ತವಾಗಿರುತ್ತದೆ.

ನಿಧನ ಹೊಂದಿದ ಪಾಲುದಾರನಿಗೆ ಪಾವತಿಸಬೇಕಾದ ಮೊತ್ತವನ್ನು ಕಂಡುಹಿಡಿಯಲು ಪರಿಗಣಿಸಬಹುದಾದ ಹಲವು ಅಂಶಗಳನ್ನು ಅವನ ಬಂಡವಾಳ ಖಾತೆಯಲ್ಲಿ ಈ ಕೆಳಕಂಡಂತೆ ತೋರಿಸ ಬಹುದಾಗಿದೆ.

ಖರ್ಚು **ನಿಧನ ಹೊಂದಿದ ಪಾಲುದಾರನ ಬಂಡವಾಳ ಖಾತೆ** **ಜಮ**

ವಿವರಣೆ	₹	ವಿವರಣೆ	₹
ಗೆ ಪ್ರಾರಂಭಿಕ ಶಿಲ್ಕು	xxxx	ಯಿಂದ ಪ್ರಾರಂಭದ ಶಿಲ್ಕು	xxxx
ಗೆ ನಿಧನ ಹೊಂದಿದ ಪಾಲುದಾರನ ಚಾಲ್ತಿ ಖಾತೆ ಬಾಬ್ತು (Debit balance)	xxxx	ಯಿಂದ ನಿಧನ ಹೊಂದಿದ ಪಾಲುದಾರನ ಚಾಲ್ತಿ ಖಾತೆ (Credit balance)	xxxx
ಗೆ ನಿಧನ ಹೊಂದಿದ ಪಾಲುದಾರನ ಹಿಂತೆಗೆತ ಖಾತೆ ಬಾಬ್ತು	xxxx	ಯಿಂದ ಲಾಭ & ನಷ್ಟದ ಖಾತೆ (ವಿತರಸದೇಯಿರುವ ಲಾಭದ ಪಾಲು)	xxxx
ಗೆ ಪುನರ್ ಮೌಲ್ಯ ಮಾಪನ ಖಾತೆ (ಪುನರ್ ಮೌಲ್ಯದ ಮಾಪನದ ನಷ್ಟದ ಭಾಗ)	xxxx	ಯಿಂದ ಸಾಮಾನ್ಯ ನಿಧಿ ಖಾತೆ (ಸಂಚಿತ ಲಾಭದ ಪಾಲು)	xxxx
ಗೆ ಲಾಭ/ನಷ್ಟದ ಖಾತೆ (ವಿತರಸದೇಯಿರುವ ನಷ್ಟದ ಪಾಲು)	xxxx	ಯಿಂದ ಬಂಡವಾಳದ ಮೇಲಿನ ಬಡ್ಡಿ	xxxx
ಗೆ ಸತ್ತ ಪಾಲುದಾರನ ಹಿಂದೆಗೆತದ ಮೇಲಿನ ಬಡ್ಡಿ ಖಾತೆ	xxxx	ಯಿಂದ ವೇತನ/ದಲ್ಲಾಳಿ	xxxx
ಗೆ, ಲಾಭ ನಷ್ಟಗಳ ಅನಿಶ್ಚಿತ ಖಾತೆ (ಗಳಿಸಿದ ನಷ್ಟದ ಪಾಲು)	xxxx	ಯಿಂದ, ಕೀರ್ತಿ ಮೌಲ್ಯದ ಖಾತೆ (ಸತ್ತಪಾಲುದಾರನ ಪಾಲು)	xxxx
ಗೆ, ಸತ್ತ ಪಾಲುದಾರನ ವಾರಸದಾರರ ಖಾತೆ (ಅಂತಿಮ ಶಿಲ್ಕುನ ವರ್ಗಾವಣೆ)	xxxx	ಯಿಂದ, ಲಾಭ / ನಷ್ಟದ ಸಂದೇಹಾಸ್ಪದ ಖಾತೆ (ಗಳಿಸಿದ ಲಾಭದ ಭಾಗ)	
		ಯಿಂದ, ಪುನರ್ ಮೌಲ್ಯ ಮಾಪನ ಖಾತೆ	xxxx
		ಯಿಂದ, ಜಂಟಿ ವಿಮಾ ಪಾಲಿಸಿ ಖಾತೆ (ಸತ್ತಪಾಲುದಾರನ ಪಾಲು)	xxxx
	xxxx		**xxxx**

ಖರ್ಚು ನಿಧನ ಹೊಂದಿದ ಪಾಲುದಾರನ ವಾರಸುದಾರರ ಖಾತೆ ಜಮ

ವಿವರಣೆ	₹	ವಿವರಣೆ	₹
ಗೆ, ಬ್ಯಾಂಕು ಖಾತೆ/ನಗದು ಖಾತೆ (ತಕ್ಷಣವೇ ಪಾವತಿಸದಲ್ಲಿ)	xxx	ಯಿಂದ ನಿಧನ ಹೊಂದಿದ ಪಾಲುದಾರನ ಬಂಡವಾಳ ಖಾತೆ	xxxx
ಗೆ, ಅಂತಿಮ ಶಿಲ್ಕು	xxx	(ಸತ್ತ ಪಾಲುದಾರನ ಬಂಡವಾಳ ಖಾತೆಯ ಅಂತಿಮ ಶಿಲ್ಕನ್ನು ವರ್ಗಾಯಿಸಲಾಗಿದೆ)	
	xxxx		xxxx

ನಿದರ್ಶನ 1.

ಆಳ್ವ, ಅನಂತ್ ಹಾಗು ಮಂಜುನಾಥ್‌ರವರು ಪಾಲುದಾರರಾಗಿದ್ದು, ಲಾಭ ನಷ್ಟಗಳನ್ನು 2:2:1ರ ಅನುಪಾತದಲ್ಲಿ ಹಂಚಿಕೊಳ್ಳುವರು. ದಿನಾಂಕ 31–3–2012ರಂದು ಅವರ ಅಢಾವೆ ಪತ್ರಿಕೆಯು ಈ ಕೆಳಕಂಡಂತಿದೆ.

ಹೊಣೆಗಾರಿಕೆಗಳು	₹	₹	ಆಸ್ತಿಗಳು	₹	₹
ವ್ಯಾಪಾರಿ ಸಾಹುಕಾರರು		15,000	ಬ್ಯಾಂಕಿನಲ್ಲಿ ನಗದು		10,000
ಬಂಡವಾಳ ಖಾತೆಗಳು :			ವ್ಯಾಪಾರಿ ಸಾಲಗಾರರು		25,000
ಆಳ್ವ	30,000		ದಾಸ್ತಾನು		20,000
ಅನಂತ್	30,000		ಯಂತ್ರೋಪಕರಣಗಳು		35,000
ಮಂಜುನಾಥ್	25,000	85,000	ಕೀರ್ತಿ ಮೌಲ್ಯ		25,000
ಲಾಭ ನಷ್ಟದ ಖಾತೆ		15,000			
		1,15,000			**1,15,000**

ಅನಂತನು ದಿನಾಂಕ 31 ಆಗಸ್ಟ್ 2012ರಂದು ನಿಧನರಾಗಿರುತ್ತಾರೆ. ಪಾಲುದಾರಿಕಾ ಕರಾರಿನ ಪ್ರಕಾರ, ಪಾಲುದಾರನು ಸತ್ತ ಸಂದರ್ಭದಲ್ಲಿ, ಅವನ ವಾರಸುದಾರರು ಈ ಕೆಳಕಂಡಂತೆ ಪಡೆಯಲು ಅರ್ಹರಾಗಿರುತ್ತಾರೆ:

a) ಹಿಂದಿನ ಅಢಾವೆ ಪತ್ರಿಕೆಯ ದಿನಾಂಕದಂದು ಅವನ ಬಂಡವಾಳ

b) ಅವನ ಪಾಲಿನ ಹಂಚಿಕೆಯಾಗದ ಲಾಭ

c) ಹಿಂದಿನ ವರ್ಷದ ಲಾಭದ ಆಧಾರದಲ್ಲಿ ಅವನ ಪಾಲಿನ ಗಳಿಸಿದ ಲಾಭ 2011–12ನೇ ವರ್ಷದ ಸಂಸ್ಥೆಯ ಲಾಭವು ರೂ 18,000.

d) ಮರು ಮೌಲ್ಯ ಮಾಪನ ಖಾತೆಯ ಲಾಭ ಅಥವಾ ನಷ್ಟದಲ್ಲಿ ಪಾಲು ಅನಂತನು ಸತ್ತ ಸಂದರ್ಭದಲ್ಲಿ, ಮರು ಮೌಲ್ಯ ಮಾಪನದ ಒಟ್ಟು ನಷ್ಟ ರೂ 6,000.

ಅನಂತನ ವಾರುಸುದಾರರಿಗೆ ಪಾವತಿಸಬೇಕಾದ ಮೊತ್ತವನ್ನು ಕಂಡುಹಿಡಿಯಿರಿ.

ನಿರೂಪಣೆ :

ಖರ್ಚು ಅನಂತನ ಬಂಡವಾಳ ಖಾತೆ ಜಮ

ವಿವರಗಳು	₹	ವಿವರಗಳು	₹
ಗೆ, ಮರು ಮೌಲ್ಯ ಮಾಪನ ಖಾತೆ (ನಷ್ಟ)	2,400	ಯಿಂದ, ಮುಂದುವರೆದ ಶಿಲ್ಕು	30,000
ಗೆ, ಅನಂತನ ವಾರಸುದಾರರ ಖಾತೆ (ಸಮತೋಲನದ ಶಿಲ್ಕು)	36,600	ಯಿಂದ, ಲಾಭ ಮತ್ತು ನಷ್ಟದ ಖಾಲೆ	6,000
		ಯಿಂದ, ಅನಿಶ್ಚಿತ ಲಾಭ ನಷ್ಟದಗಳ ಖಾತೆ	3,000
	39,000		**39,000**

ಸೂಚನೆ :

1) ಅನಂತನ ಪಾಲಿನ ಗಳಿಸಿದ ಲಾಭ $= 18{,}000 \times \frac{5}{12} \times \frac{2}{5} =$ ₹ 3, 000.

ನಿದರ್ಶನ 2.

ವೆಂಕಟೇಶ್, ಕೃಷ್ಣ ಮತ್ತು ರಾಜಶೇಖರ್, ಒಂದು ಸಂಸ್ಥೆಯಲ್ಲಿ ಪಾಲುದಾರರಾಗಿದ್ದು, 2:2:1 ಅನುಪಾತದಲ್ಲಿ ಲಾಭ ನಷ್ಟಗಳನ್ನು ಹಂಚಿಕೊಳ್ಳುವರು. ದಿನಾಂಕ 31–3–2013ರಂದು ಅವರ ಅಢಾವೆ ಪತ್ರಿಕೆಯು ಈ ಕೆಳಕಂಡತಿದೆ:

ಹೊಣೆಗಾರಿಕೆಗಳು	₹	ಆಸ್ತಿಗಳು	₹
ಸಾಹುಕಾರರು	14,000	ಕಟ್ಟಡಗಳು	24,000
ಸಾಮಾನ್ಯ ನಿಧಿ	10,000	ಯಂತ್ರಗಳು	30,000
ವೆಂಕಟೇಶನ ಬಂಡವಾಳ	30,000	ದಾಸ್ತಾನು	10,000
ಕೃಷ್ಣನ ಬಂಡವಾಳ	20,000	ಹಕ್ಕುಗಳು	11,000
ರಾಜಶೇಖರನ ಬಂಡವಾಳ	20,000	ಸಾಲಗಾರರು	8,000
		ನಗದು	11,000
	94,000		**94,000**

ವೆಂಕಟೇಶನು ದಿನಾಂಕ 30–9–2013 ರಂದು ಮರಣ ಹೊಂದಿರುತ್ತಾನೆ. ಉಳಿಕೆ ಪಾಲುದಾರರು ಹಾಗೂ ವಾರಸುದಾರರ ನಡುವೆ ಈ ಕೆಳಕಂಡ ಒಪ್ಪಂದವಾಗಿದೆ.

a) ಕೀರ್ತಿ ಮೌಲ್ಯವನ್ನು ಹಿಂದಿನ ನಾಲ್ಕು ವರ್ಷಗಳ ಸರಾಸರಿ ಲಾಭದ ಎರಡರಷ್ಟೆಂದು ಮೌಲ್ಯ ಮಾಡಬೇಕು. ಹಿಂದಿನ ನಾಲ್ಕು ವರ್ಷಗಳ ಲಾಭವು ಕೆಳಕಂಡಂತಿದೆ.

2009-10	₹ 13,000
2010-11	₹ 12, 000
2011-12	₹ 20,000
2012-13	₹ 15,000.

b) ವೆಂಕಟೇಶನ ಮರಣದ ಸಂದರ್ಬದಲ್ಲಿ ಅವನ ಪಾಲಿನ ಮರುಮೌಲ್ಯ ಮಾಪನದ ಲಾಭವು ₹ 1,000.

c) ಗಳಿಸಿದ ಲಾಭವನ್ನು ಲೆಕ್ಕ ಹಾಕಲು 2012–13ರ ವರ್ಷದ ಲಾಭವನ್ನು ಆಧಾರವಾಗಿ ತೆಗೆದುಕೊಳ್ಳಬೇಕು.

d) ಬಂಡವಾಳದ ಮೇಲೆ ಶೇ 10ರಷ್ಟು (ವಾರ್ಷಿಕ) ಬಡ್ಡಿಯನ್ನು ಒದಗಿಸಬೇಕು.

ವೆಂಕಟೇಶನ ಬಂಡವಾಳ ಖಾತೆಯನ್ನು ತಯಾರಿಸಿ.

ನಿರೂಪಣೆ :

ಖರ್ಚು **ವೆಂಕಟೇಶನ ಬಂಡವಾಳ ಖಾತೆ** ಜಮ

ವಿವರಗಳು	₹	ವಿವರಗಳು	₹
ಗೆ, ವೆಂಕಟೇಶನ ವಾರಸುದಾರರ ಖಾತೆ	51,500	ಯಿಂದ, ಮುಂದುವರೆದ ಶಿಲ್ಕು	30,000
		ಯಿಂದ, ಸಾಮಾನ್ಯ ನಿಧಿ ಖಾತೆ	4,000
		ಕೀರ್ತಿ ಮೌಲ್ಯದ ಖಾತೆ	12,000
		ಯಿಂದ, ಮರು ಮೌಲ್ಯ ಮಾಪನ ಖಾತೆ	1,000
		ಯಿಂದ, ಅನಿಶ್ಚಿತ ಲಾಭ ನಷ್ಟಗಳ ಖಾತೆ	3,000
		ಯಿಂದ, ಬಂಡವಾಳ ಮೇಲಿನ ಬಡ್ಡಿಯ ಖಾತೆ	1,500
	51,500		**51,500**

ಸೂಚನೆ :

1) ಕೀರ್ತಿ ಮೌಲ್ಯ = 2ವರ್ಷಗಳ ಲಾಭ × ನಾಲ್ಕು ವರ್ಷಗಳ ಸರಾಸರಿ ಲಾಭ
   ಸರಾಸರಿ ಲಾಬ = 13,000+12,000+20,000+15,000 ÷ 4 = ₹ 15,000.
   ಸಂಸ್ಥೆಯ ಕೀರ್ತಿ ಮೌಲ್ಯ = 15,000× 2 = ₹ 30,000.
   ವೆಂಕಟೇಶನ ಪಾಲಿನ ಕೀರ್ತಿ ಮೌಲ್ಯ = $30,000 \times \frac{2}{5}$ = ₹ 12,000.
2) ದಿನಾಂಕ 31–3–2013 ರಿಂದ 30–9–2013ರ ವರೆಗಿನ 6 ತಿಂಗಳ ಅವದಿಗೆ ಗಳಿಸಿದ ಲಾಭ
   $= 15,000 \times \frac{6}{12} \times \frac{2}{5}$ = ₹ 3, 000.
3) ವೆಂಕಟೇಶನ ಬಂಡವಾಳದ ಮೇಲೆ ಶೇ 10ರ ವಾರ್ಷಿಕ ಬಡ್ಡಿ
   $= 30,000 \times \frac{10}{100} \times \frac{6}{12}$ = ₹ 1,500.

ನಿದರ್ಶನ 3.

ಮೋಹಿತ್, ಸೋಹನ್ ಮತ್ತು ರಾಹುಲ್ ರವರು ಪಾಲುದಾರರಾಗಿದ್ದು, ಲಾಭ ನಷ್ಟಗಳನ್ನು 2:2:1ರ ಅನುಪಾತದಲ್ಲಿ ಹಂಚಿಕೊಳ್ಳುತ್ತಾರೆ. ದಿನಾಂಕ 31–3–2013 ರಂದು ಅವರ ಅಢಾವೆ ಪತ್ರಿಕೆಯ ಈ ಕೆಳಕಂಡಂತಿದೆ.

ದಿನಾಂಕ 31–3–2013ರಂದು ಅಢಾವೆ ಪತ್ರಿಕೆ

ಹೊಣೆಗಾರಿಕೆಗಳು	₹	₹	ಆಸ್ತಿಗಳು	₹	₹
ಧಣಿಗಳು		40,000	ಯಂತ್ರಗಳು		30,000
ಕಾಯ್ದಿರಿಸಿದ ನಿಧಿಗಳು		25,000	ಕಟ್ಟಡಗಳು		60,000
ಬಂಡವಾಳ ಖಾತೆಗಳು			ದಾಸ್ತಾನು		10,000
ಮೋಹಿತ್	30,000		ಋಣಿಗಳು		20,000
ಸೋಹನ್	25,000		ಬ್ಯಾಂಕಿನಲ್ಲಿಯ ನಗದು		15,000
ರಾಹುಲ್	15,000	70,000			
		1,35,000			**1,35,000**

ಸೋಹನ್, ದಿನಾಂಕ 30–ಜೂನ್ 2013 ರಂದು ನಿಧನರಾಗಿದ್ದಾರೆ. ಪಾಲುದಾರಿಕೆಯ ಕರಾರಿನ ಪ್ರಕಾರ, ಅವನ ವಾರಸುದಾರರು ಈ ಕೆಳಕಂಡಂತೆ ಪಡೆಯಲು ಅರ್ಹರಾಗಿರುತ್ತಾರೆ.

a) ಅವನ ಬಂಡವಾಳ ಖಾತೆಯ ಶಿಲ್ಕು :

b) ಕೀರ್ತಿ ಮೌಲ್ಯದಲ್ಲಿನ ಪಾಲು ಸಂಸ್ಥೆಯ ಕೀರ್ತಿ ಮೌಲ್ಯವು ಹಿಂದಿನ ನಾಲ್ಕು ವರ್ಷಗಳ ಸರಾಸರಿ ಲಾಭದ ಮೂರರಷ್ಟಾಗಿರುತ್ತದೆ. ಹಿಂದಿನ ನಾಲ್ಕು ವರ್ಷದ ಲಾಭಗಳು ಕೆಳಕಂಡಂತಿವೆ.

2009–10	₹ 15,000
2010–11	₹ 17,000
2011–12	₹ 19,000
2012–13	₹ 13,000

c) ಸತ್ತ ದಿನಾಂಕದ ವರೆಗಿನ ಲಾಭದ ಪಾಲು. ಅದನ್ನು ಹಿಂದಿನ ನಾಲ್ಕು ವರ್ಷಗಳ ಸರಾಸರಿ ಲಾಭದ ಆದಾರದಲ್ಲಿ ಲೆಕ್ಕ ಹಾಕಬೇಕು.

d) ಬಂಡವಾಳದ ಮೇಲೆ ವಾರ್ಷಿಕ ಬಡ್ಡಿ ಶೇ 12.

e) ಸಂಸ್ಥೆಯು ರೂ 1,25,000 ಮೌಲ್ಯದ ಜಂಟಿ ಜೀವ ವಿಮಾ ಪಾಲಿಸಿಯನ್ನು ಪಡೆದಿರುತ್ತದೆ.

ಸೋಹನ್‌ನ ವಾರಸುದಾರರಿಗೆ ಬಾಕಿಯಿರುವ ಮೊತ್ತವನ್ನು ಪಾವತಿಸಬೇಕಾಗಿದೆ. ಮೋಹಿತ್ ಮತ್ತು ರಾಹುಲ್‌ರವರು ಸೋಹನ್‌ನ ಲಾಭವನ್ನು ಸಮಾನವಾಗಿ ಹಂಚಿಕೊಳ್ಳುವ ಮೂಲಕ, ಪಾಲುದಾರರಾಗಿ ಮುಂದುವರೆಯುತ್ತಾರೆ. ಸೋಹನ್‌ನ ವಾರಸುದಾರರಿಗೆ ಪಾವತಿಸಬೇಕಾದ ಮೊತ್ತವನ್ನು ಲೆಕ್ಕ ಹಾಕಿ.

ನಿರೂಪಣೆ :

ಖರ್ಚು **ಸೋಹನ್‌ನ ಬಂಡವಾಳ ಖಾತೆ** **ಜಮ**

ವಿವರಗಳು	₹	ವಿವರಗಳು	₹
		ಯಿಂದ, ಪ್ರಾರಂಭಿಕ ಶಿಲ್ಕು	25,000
ಗೆ, ಸೋಹನ್‌ನ ವಾರಸುದಾರರ ಖಾತೆ	1,06,550	ಯಿಂದ, ಕಾಯ್ದಿರಿಸಿದ ನಿಧಿಗಳು	10,000
		ಯಿಂದ, ಕೀರ್ತಿ ಮೌಲ್ಯದ ಖಾತೆ	19,200
		ಯಿಂದ, ಅನಿಶ್ಚಿತ ಲಾಭ ನಷ್ಟದ ಖಾತೆ	1,600
		ಯಿಂದ, ಬಂಡವಾಳದ ಮೇಲೆ ಬಡ್ಡಿಯ ಖಾತೆ	750
		ಯಿಂದ, ಜಂಟಿ ಜೀವ ವಿಮಾ ಪಾಲಿಸಿಯ ಖಾತೆ	50,000
	1,06,550		**1,06,550**

ಟಿಪ್ಪಣಿ :

1. ಕೀರ್ತಿ ಮೌಲ್ಯ :

ಸಂಸ್ಥೆಯ ಕೀರ್ತಿ ಮೌಲ್ಯ = ಹಿಂದಿನ ನಾಲ್ಕು ವರ್ಷಗಳ ಸರಾಸರಿ ಲಾಭ

= 15,000+17,000+19,000+13,000 × ¾ = ₹48,000.

ಸೋಹನ್‌ನ ಪಾಲಿನ ಕೀರ್ತಿ ಮೌಲ್ಯ = ಸಂಸ್ಥೆಯ ಕೀರ್ತಿ ಮೌಲ್ಯ × $\frac{2}{5}$ =48,000 × $\frac{2}{5}$ = ₹19,200.

2. ಸೋಹನ್‌ನ ಅಂತ್ಯದವರೆಗೆ ಗಳಿಸಿದ ಲಾಭ =

   4 ವರ್ಷಗಳ ಸರಾಸರಿ ಲಾಭ × ಅವನ ಪಾಲು × ಅವದಿ

   $=15,000+17,000+19,000+13,000 \div 4 \times \frac{2}{5} \times \frac{3}{12}$ = ₹ 1,600.

3. ಜಂಟಿ ಜೀವ ವಿಮಾ ಖಾತೆ – ₹1, 25,000.

   ಸೋಹನ್‌ನ ಪಾಲಿನ ವಿಮಾ ಮೊತ್ತ = 1, 25,000 × $\frac{2}{5}$ = ₹50,000.

4. ಬಂಡವಾಳದ ಮೇಲಿನ ಬಡ್ಡಿ :

   ಸೋಹನ್‌ನ ಬಂಡವಾಳದ ಮೇಲಿನ ಬಡ್ಡಿ = 25,000 × $\frac{12}{100} \times \frac{3}{12}$ = ₹ 750.

ನಿದರ್ಶನ 4.

ಮೇಘನ, ಅನುಷ ಮತ್ತು ರಶ್ಮಿ ಪಾಲುದಾರರಾಗಿದ್ದು ಲಾಭ ನಷ್ಟಗಳನ್ನು 3:2:1 ಅನುಪಾತದಲ್ಲಿ ಹಂಚಿಕೊಳ್ಳುತ್ತಿದ್ದರು. ಅವರು ತಮ್ಮ ಜೀವಗಳ ಮೇಲೆ ₹ 1,20,000ಗೆ ಜಂಟಿ ವಿಮಾ ಮಾಡಿಸಿ, ಅದರ ವರ್ಷದ ಕಂತು ₹ 5750 ನ್ನು ಲಾಭ ನಷ್ಟದ ಖಾತೆಗೆ ಖರ್ಚು ಹಾಕಲು ನಿರ್ಧರಿಸಿದರು. ದಿನಾಂಕ 1–11–2013 ರಂದು ರಶ್ಮಿ ರವರು ನಿಧನರಾದರು. ಹಿಂದಿನ ಅಢಾವೇ ಪತ್ರಿಕೆ ಪ್ರಾಕಾರ ರಶ್ಮಿರವರ ಬಂಡವಾಳ ₹ 35,000 ಅವರು ನಿಧನ ಹೊಂದಿದ ದಿನಾಂಕದವರೆಗೂ ಮಾಡಿದ ಹಿಂತೆಗೆತಗಳ ಮೊತ್ತ ₹ 5000. ಪಾಲುದಾರರ ಒಪ್ಪಂದದ ಪ್ರಕಾರ ಈ ಕೆಳಗಿನವುಗಳನ್ನು ರಶ್ಮಿರವರ ವಾರಸುದಾರನಿಗೆ ನೀಡಬೇಕಾಗುತ್ತದೆ.

1. ಹಿಂದಿನ ಅಢಾವೇ ಪತ್ರಿಕೆಯ ಪ್ರಕಾರ ಅವಳ ಬಂಡವಾಳ
2. ಬಂಡವಾಳದ ಮೇಲೆ ಬಡ್ಡಿ ವಾರ್ಷಿಕ ಶೇ 6
3. ಜಂಟಿ ವಿಮಾ ಪತ್ರದಲ್ಲಿ ಅವಳ ಪಾಲು
4. ನಿಧನ ಹೊಂದಿದ ದಿನಾಂಕದ ವರೆಗೂ ಅವರ ಲಾಭದ ಪಾಲನ್ನು ಮೂರು ವರ್ಷಗಳ ಸರಾಸರಿ ಲಾಭದ ಅಧಾರದ ಮೇಲೆ ಲೆಕ್ಕಹಾಕಿರಿ. ಮೂರು ವರ್ಷಗಳ ಲಾಭಗಳು ಈ ಕೆಳಗಿನಂತಿವೆ.

   2010–11 ರೂ 21,000 ; 2011–12 ₹ 25,000 ; 2012–13 ₹ 26,000

ರಶ್ಮಿ ವಾರಸುದಾರರಿಗೆ ನೀಡಬೇಕಾಗಿರುವ ಮೊತ್ತವನ್ನು ಲೆಕ್ಕ ಹಾಕಲು, ಅವಳ ಬಂಡವಾಳ ಖಾತೆಯನ್ನು ತಯಾರಿಸಿ.

ನಿರೂಪಣೆ :

ಖರ್ಚು **ರಶ್ಮಿ ಬಂಡವಾಳ ಖಾತೆ** **ಜಮ**

ವಿವರಗಳು	₹	ವಿವರಗಳು	₹
ಗೆ, ಸ್ವಂತ ವೆಚ್ಚದ ಖಾತೆ	5,000	ಯಿಂದ, ಪ್ರಾರಂಭದ ಶಿಲ್ಕು	35,000
ಗೆ, ರಶ್ಮಿ ವಾರಸುದಾರರ ಖಾತೆ (ಶಿಲ್ಕಿನ ಮೊತ್ತ)	53,558	ಯಿಂದ, ಬಂಡವಾಳದ ಮೇಲೆ ಬಡ್ಡಿ ಖಾತೆ	1,225
		ಯಿಂದ, ಜಂಟಿ ವಿಮಾ ಪತ್ರದ ಖಾತೆ	20,000
		ಯಿಂದ, ಅನಿಶ್ಚಿತ ಲಾಭ ನಷ್ಟದ ಖಾತೆ	2,333
	58,558		**58,558**

ಟಿಪ್ಪಣಿ :

ರಶ್ಮಿ ರವರ ಪಾಲನ್ನು ಲೆಕ್ಕಹಾಕುವಿಕೆ ;

1. ಬಂಡವಾಳದ ಮೇಲೆ ಬಡ್ಡಿ

$$35,000 \times \frac{6}{100} \times \frac{7}{12} = ₹\ 1,225.$$

2. ಜಂಟಿ ವಿಮಾ ಪತ್ರ

$$1,20,000 \times \frac{1}{6} = ₹\ 20,000.$$

3. ಗಳಿಸಿದ ಲಾಭ

$$21,000 + 25,000 + 26,000 \div 3 \times \frac{1}{6} \times \frac{7}{12}$$

= ₹ 2,333.33 or ₹ 2,333.

ನಿದರ್ಶನ 5.

ಅನು, ಭಾನು ಮತ್ತು ಚರಣ್ ಒಂದು ಸಂಸ್ಥೆಯಲ್ಲಿ ಪಾಲುದಾರರಾಗಿದ್ದು ಲಾಭ ನಷ್ಟಗಳನ್ನು ಸಮವಾಗಿ ಹಂಚಿಕೊಳ್ಳುತ್ತಿದ್ದರು. ದಿನಾಂಕ 31–3–2013ಕ್ಕೆ ಅವರ ಅಢಾವೇ ಪತ್ರಿಕೆ ಈ ಕೆಳಗೆ ನೀಡಿದ್ದಾರೆ :

ಹೊಣೆಗಾರಿಕೆಗಳು	₹	₹	ಆಸ್ತಿಗಳು	₹	₹
ಧಣಿಗಳು		15,000	ಸ್ಥಾವರ ಮತ್ತು ಯಂತ್ರ		20,000
ಸಾಮಾನ್ಯ ಮೀಸಲು		13,000	ಪೀಠೋಪಕರಣ		5,000
ಬಂಡವಾಳಗಳು :			ದಾಸ್ತಾನು		13,000
ಅನು	20,000		ಋಣಿಗಳು		15,000
ಭಾನು	15,000		ಹೂಡಿಕೆಗಳು		10,000
ಚರಣ್	10,000	45,000	ನಗದು		10,000
		73,000			**73,000**

ದಿನಾಂಕ 01–07–2013 ರಂದು ಅನು ರವರು ನಿಧನರಾದರು ಪಾಲುಗಾರಿಕೆಯ ಒಪ್ಪಂದದ ಪ್ರಕಾರ ನಿಧನ ಹೊಂದಿದ ಪಾಲುದಾರಳ ಪ್ರತಿನಿಧಿಗಳಿಗೆ ಈ ಕೆಳಗಿನವುಗಳನ್ನು ನೀಡಬೇಕು.

a) ಹಿಂದಿನ ಅಢಾವೇ ಪತ್ರಿಕೆಯಲ್ಲಿನ ಬಂಡವಾಳ

b) ಬಂಡವಾಳ ಮೇಲಿನ ಬಡ್ಡಿ ವರ್ಷದ ಶೇ. 6

c) ಗಳಿಸಿದ ಲಾಭದಲ್ಲಿನ ಪಾಲು ಮೂರು ವರ್ಷಗಳ ಸರಾಸರಿ ಲಾಭದ ಮೇಲೆ ಲೆಕ್ಕ ಹಾಕಿ. ಮೂರು ವರ್ಷಗಳ ಲಾಭಗಳು : ರೂ 65,000, ₹ 64,000 ಮತ್ತು ₹ 69,000.

d) ಸಾಮಾನ್ಯ ಮೀಸಲುನಲ್ಲಿ ಪಾಲು

e) ಸ್ವಂತ ವೆಚ್ಚಕ್ಕಾಗಿ ಉಪಯೋಗಿಸಿದ ಹಣದ ಮೇಲೆ ಬಡ್ಡಿ ₹ 200.

f) ನಿಧನದ ದಿನಾಂಕದ ವರೆಗೂ ಅವರು ಸ್ವಂತ ವೆಚ್ಚಕ್ಕಾಗಿ ಉಪಯೋಗಿಸಿದ ಹಣ ರೂ 8000

ಅನು ರವರ ವಾರಸುದಾರರಿಗೆ ನೀಡಬೇಕಾದ ಹಣವನ್ನು ಲೆಕ್ಕ ಹಾಕಿರಿ.

ನಿರೂಪಣೆ :

ಖರ್ಚು — **ಅನು ಬಂಡವಾಳ ಖಾತೆ** — ಜಮ

ವಿವರಣೆ	ರೂ.	ವಿವರಣೆ	₹
		ಯಿಂದ, ಪ್ರಾರಂಭದ ಶಿಲ್ಕು	20,000
ಗೆ, ಸ್ವಂತ ವೆಚ್ಚದ ಖಾತೆ	8,000	ಯಿಂದ, ಬಂಡವಾಳದ ಮೇಲಿನ ಬಡ್ಡಿ ಖಾತೆ	300
ಗೆ, ಸ್ವಂತ ವೆಚ್ಚದ ಮೇಲಿನ ಬಡ್ಡಿ ಖಾತೆ	200	ಯಿಂದ, ಅನಿಶ್ಚಿತ ಲಾಭ ನಷ್ಟದ ಖಾತೆ	5,500
ಗೆ, ಅನು ವಾರಸುದಾರರ ಖಾತೆ	21,933	ಯಿಂದ, ಸಾಮಾನ್ಯ ಮೀಸಲು ಖಾತೆ	4,333
	30,133		**30,133**

ಟಿಪ್ಪಣಿ :

ಅನು ಸಾಲನ್ನು ಲೆಕ್ಕಹಾಕುವಿಕೆ.

a) ಬಂಡವಾಳದ ಮೇಲಿನ ಬಡ್ಡಿ $= 20,000 \times \frac{6}{100} \times \frac{3}{12} =$ ₹ 300.

b) ಅನಿಶ್ಚಿತ ಲಾಭ ನಷ್ಟದ ಖಾತೆ : 65,000+64,000+69,000÷3

ಸರಾಸರಿ ಲಾಭ = ₹ 66,000

$= 66,000 \times \frac{3}{12} \times \frac{1}{3} =$ ₹5,500.

c) ಸಾಮಾನ್ಯ ಮೀಸಲು $= 13,000 \times \frac{1}{3} = 4,333.33$ ಅಥವಾ ₹ 4,333.

ನಿದರ್ಶನ 6.

ಇಂದಿರಾ, ಮಮತಾ ಮತ್ತು ಸೌಮ್ಯ ಒಂದು ಸಂಸ್ಥೆಯಲ್ಲಿ ಪಾಲುದಾರರಾಗಿದ್ದು ಲಾಭ ನಷ್ಟಗಳನ್ನು 5:3:2 ಅನುಪಾತದಲ್ಲಿ ಹಂಚಿಕೊಳ್ಳುವರು. ದಿನಾಂಕ 31–03–2013ಕ್ಕೆ ಅವರ ಅಢಾವೇ ಪತ್ರಿಕೆ ಈ ಕೆಳಗಿನಂತಿದೆ.

ಹೊಣೆಗಾರಿಕೆಗಳು	₹	₹	ಆಸ್ತಿಗಳು	₹	₹
ಧಣಿಗಳು		15,000	ಬ್ಯಾಂಕು		5,000
ಕೊಡತಕ್ಕ ಹುಂಡಿಗಳು		5,000	ಋಣಿಗಳು		15,000
ಬಂಡವಾಳ ಖಾತೆಗಳು :			ದಾಸ್ತಾನು		20,000
ಇಂದಿರಾ	50,000		ಪೀಠೋಪಕರಣಗಳು		20,000
ಮಮತಾ	30,000		ಸ್ಥಾವರ ಮತ್ತು ಯಂತ್ರ		25,000
ಸೌಮ್ಯ	20,000	1,00,000	ಕಟ್ಟಡ		35,000
		1,20,000			**1,20,000**

ದಿನಾಂಕ 01–10–2013 ರಂದು ಸೌಮ್ಯ ರವರು ನಿಧನರಾದರು. ಪಾಲುದಾರಿಕೆಯ ಒಪ್ಪಂದ ಪ್ರಕಾರ ನಿಧನ ಹೊಂದಿದ ಪಾಲುದಾರರ ವಾರಸುದಾರರು ಈ ಕೆಳಗಿನವುಗಳನ್ನು ಪಡೆಯಲು ಅರ್ಹರಾಗಿರುತ್ತಾರೆ.

a) ಸೌಮ್ಯಳ ಬಂಡವಾಳ.

b) ₹ 300 ತಿಂಗಳ ವೇತನ.

c) ಅವಳ ಪಾಲಿನ ಕೀರ್ತಿ ಮೌಲ್ಯ ಸಂಸ್ಥೆಯ ಕೀರ್ತಿ ಮೌಲ್ಯ ₹ 10,000

d) ನಿಧನದ ದಿನಾಂಕದ ವರೆಗಿನ ಲಾಭದ ಪಾಲುನ್ನು ಮೂರು ವರ್ಷಗಳ ಸರಾಸರಿ ಲಾಭದ ಆಧಾರದ ಮೇಲೆ ಲೆಕ್ಕ ಹಾಕುವುದು.
ಮೂರು ವರ್ಷಗಳ ಲಾಭಗಳು : 2010–11 ₹ 14,000, 2011–12 ₹ 15,000 ಮತ್ತು 2012–13 ₹ 16,000

e) ಬಂಡವಾಳದ ಮೇಲಿನ ಬಡ್ಡಿ ವರ್ಷದ ಶೇ 6.

f) ನಿಧನದ ದಿನಾಂಕದ ವರೆಗೂ, ನಿಧನ ಪಾಲುದಾರಳು ಸ್ವಂತ ವೆಚ್ಚಕ್ಕಾಗಿ ಉಪಯೋಗಿಸಿದ ಹಣ ₹ 7000.

ಸೌಮ್ಯ ರವರ ವಾರಸುದಾರರಿಗೆ ಪಾವತಿಸಬೇಕಾದ ಮೊತ್ತವನ್ನು ಕಂಡುಹಿಡಯಿರಿ.

ನಿರೂಪಣೆ :

ಖರ್ಚು — ಸೌಮ್ಯ ಬಂಡವಾಳ ಖಾತೆ — ಜಮ

ವಿವರಗಳು	₹	ವಿವರಗಳು	₹
ಗೆ, ಸೌಮ್ಯ ಸ್ವಂತ ವೆಚ್ಚದ ಖಾತೆ	7,000	ಯಿಂದ, ಪ್ರಾರಂಭಿಕ ಶಿಲ್ಕು	20,000
ಗೆ, ಸೌಮ್ಯಳ ವಾರಸುದಾರರ ಖಾತೆ [ಶಿಲ್ಕು ವರ್ಗಾಯಿಸಿದ್ದು]	18,900	ಯಿಂದ, ವೇತನ ಖಾತೆ	1,800
		ಯಿಂದ, ಬಂಡವಾಳದ ಬಡ್ಡಿ ಖಾತೆ	600
		ಯಿಂದ, ಕೀರ್ತಿ ಮೌಲ್ಯ ಖಾತೆ	2,000
		ಯಿಂದ, ಅನಿಶ್ಚಿತ ಲಾಭ ನಷ್ಟದ ಖಾತೆ	1,500
	25,900		**25,900**

ಖರ್ಚು — ಸೌಮ್ಯ ವಾರಸುದಾರರ ಖಾತೆ — ಜಮ

ವಿವರಗಳು	₹	ವಿವರಗಳು	₹
ಗೆ, ಅಂತಿಮ ಶಿಲ್ಕು	18,900	ಯಿಂದ, ಸೌಮ್ಯ ಬಂಡವಾಳ ಖಾತೆ ಸೌಮ್ಯ ಬಂಡವಾಳ ಖಾತೆಯಿಂದ ವರ್ಗಾಯಿಸಿದ ಶಿಲ್ಕು	18,900
	18,900		**18,900**
		ಯಿಂದ ಪ್ರಾರಂಭಿಕ ಶಿಲ್ಕು	18,900

ಪರ್ಯಾಯವಾಗಿ ವಾರಸುದಾರರ ಖಾತೆಯನ್ನು ನೇರವಾಗಿ ನಾವು ತಯಾರಿಸಬಹುದು:

ಖರ್ಚು **ಸೌಮ್ಯ ವಾರಸುದಾರರ ಖಾತೆ** ಜಮ

ವಿವರಗಳು	₹	ವಿವರಗಳು	₹
ಗೆ, ಸೌಮ್ಯ ಹಿಂತೆಗೆತದ ಖಾತೆ	7,000	ಯಿಂದ, ಸೌಮ್ಯ ಬಂಡವಾಳ ಖಾತೆ	20,000
ಗೆ, ಅಂತಿಮ ಶಿಲ್ಕು	18,900	ಯಿಂದ, ವೇತನ ಖಾತೆ	1,800
		ಯಿಂದ, ಬಂಡವಾಳ ಮೇಲಿನ ಬಡ್ಡಿ ಖಾತೆ	600
		ಯಿಂದ, ಕೀರ್ತಿ ಮೌಲ್ಯ ಖಾತೆ	2,000
		ಯಿಂದ, ಲಾಭ ನಷ್ಟದ ಅನಿಶ್ಚಿತ ಖಾತೆ	1,500
	25,900		**25,900**
		ಯಿಂದ, ಪ್ರಾರಂಭಿಕದ ಶಿಲ್ಕು	18,900

ನಿದರ್ಶನ 7.

ಶಿವರಾಂ, ಜಯರಾಂ ಮತ್ತು ಮದನ್ ಪಾಲುದಾರರಾಗಿದ್ದು ಲಾಭ ನಷ್ಟಗಳನ್ನು 4:3:2 ಅನುಪಾತದಲ್ಲಿ ಹಂಚಿಕೊಳ್ಳುವರು ದಿನಾಂಕ 31–03–2013ಕ್ಕೆ ಅವರ ಅಢಾವೇ ಪತ್ರಿಕೆ ಈ ಕೆಳಗಿನಂತಿದೆ.

Balance sheet as on 31-3-2013

ಹೊಣೆಗಾರಿಕೆಗಳು	ರೂ.	₹	ಆಸ್ತಿಗಳು	₹	₹
ಕೊಡತಕ್ಕ ಹುಂಡಿಗಳ		14,000	ಬ್ಯಾಂಕಿನಲ್ಲಿ ನಗದು		13,400
ಸಾಮಾನ್ಯ ಮೀಸಲು		18,000	ಋಣಿಗಳು		16,000
ಬಂಡವಾಳಗಳು :			ದಸ್ತಾನು		14,000
ಶಿವರಾಂ	23,000		ಯಂತ್ರ ಮತ್ತು ಸ್ಥಾನಕ		25,000
ಜಯರಾಂ	22,000		ಕೀರ್ತಿ ಮೌಲ್ಯ		12,600
ಮದನ್	16,000	61,000	ಮೋಟಾರು ವಾಹನ		12,000
		93,000			**93,000**

ದಿನಾಂಕ 30–6–2013 ರಂದು ಜಯರಾಂ ರವರು ನಿಧನ ಹೊಂದಿದರು. ಪಾಲುಗಾರಿಕೆಯ ಒಪ್ಪಂದದ ಪ್ರಕಾರ ನಿಧನ ಪಾಲುದಾರನ ವಾರಸುದಾರನಿಗೆ ಈ ಕೆಳಗಿನವುಗಳನ್ನು ನೀಡಬೇಕಾಗುತ್ತದೆ.

a) ಪಾಲುದಾರನ ಬಂಡವಾಳದ ಶಿಲ್ಕು

b) ಸಾಮಾನ್ಯ ಮೀಸಲುನಲ್ಲಿ ಪಾಲು

c) ಬಂಡವಾಳದ ಮೇಲಿನ ಬಡ್ಡಿ ವಾರ್ಷಿಕ ಶೇ 5.

d) ಕೀರ್ತಿ ಮೌಲ್ಯದ ಪಾಲನ್ನು ಮೂರು ವರ್ಷಗಳ ಸರಾಸರಿ ಲಾಭದ ಎರಡು ಪಟ್ಟು ಹೆಚ್ಚಿಸಿ ಲೆಕ್ಕ ಹಾಕಿರಿ.

e) ಹಿಂದಿನ ಅಢಾವೇ ಪತ್ರಿಕೆ ದಿನದಿಂದ ನಿದನ ಹೊಂದಿದ ದಿನಾಂಕದವರೆಗೂ ಲಾಭವನ್ನು ಹಿಂದಿನ ವರ್ಷ ಲಾಭದ ಆಧಾರದ ಮೇಲೆ ಲೆಕ್ಕಹಾಕಿ.

f) ಜಯರಾಂ ವಾರಸುದಾರರಿಗೆ ತಕ್ಷಣ ₹ 10,000ಗಳನ್ನು ಪಾವತಿಸಿ ಮತ್ತು ಉಳಿದ ಶಿಲ್ಕುನ್ನು ವಾರಸುದಾರರ ಸಾಲದ ಖಾತೆಗೆ ವರ್ಗಾಯಿಸಿ.

ಹಿಂದಿನ ಮೂರು ವರ್ಷಗಳ ಲಾಭಗಳು : 2010–11 ₹ 16,000, 2011–12 ₹ 19,200 ಮತ್ತು 2012–13 ₹ 20,000

ಜಯರಾಂ ಬಂಡವಾಳ ಖಾತೆ ಮತ್ತು ವಾರಸುದಾರನ ಖಾತೆಯನ್ನು ತಯಾರಿಸಿ.

ನಿರೂಪಣೆ :

ಖರ್ಚು — **ಜಯರಾಂ ಬಂಡವಾಳ ಖಾತೆ** — ಜಮ

ವಿವರಗಳು	₹	ವಿವರಗಳು	₹
ಗೆ, ಜಯರಾಂ ವಾರಸುದಾರನ ಖಾತೆ [ಶಿಲ್ಕು ವರ್ಗಾವಣೆ]	42,209	ಯಿಂದ, ಪ್ರಾರಂಭದ ಶಿಲ್ಕು	22,000
		ಯಿಂದ, ಸಾಮಾನ್ಯ ಮೀಸಲು ಖಾತೆ	6,000
		ಯಿಂದ, ಬಂಡವಾಳದ ಮೇಲಿನ ಬಡ್ಡಿ ಖಾತೆ	275
		ಯಿಂದ, ಕೀರ್ತಿ ಮೌಲ್ಯ ಖಾತೆ	12,267
		ಯಿಂದ, ಅನಿಶ್ಚಿತ ಲಾಭ ನಷ್ಟದ ಖಾತೆ	1,667
	42,209		**42,209**

ಖರ್ಚು — **ಜಯರಾಂ ವಾರಸುದಾರನ ಖಾತೆ** — ಜಮ

ವಿವರ	₹	ವಿವರ	₹
ಗೆ, ಬ್ಯಾಂಕ್ ಖಾತೆ	10,000	ಯಿಂದ, ಜಯರಾಂ ಬಂಡವಾಳ ಖಾತೆ [ವರ್ಗಾಯಿಸಿದ ಶಿಲ್ಕು]	42,209
ಗೆ, ಜಯರಾಂ ವಾರಸುದಾರನ ಸಾಲದ ಖಾತೆ	32,209		
	42,209		**42,209**

ಟಿಪ್ಪಣಿ :

ಜಯರಾಂ ಪಾಲನ್ನು ಲೆಕ್ಕ ಹಾಕುವಿಕೆ:

1) ಬಂಡವಾಳದ ಮೇಲಿನ ಬಡ್ಡಿ

$$22,000 \times \frac{5}{100} \times \frac{3}{12} = ₹\ 275.$$

2) ಸಾಮಾನ್ಯ ಮೀಸಲು

$$18,000 \times \frac{3}{9} = ₹6,000.$$

3) ಕೀರ್ತಿ ಮೌಲ್ಯ

$$16,000+19,200+20,000 \div 3 \text{ x } 2 \times \frac{3}{9}$$

$$= \frac{55,200}{3} \times 2 \times \frac{3}{9} = 12,266.66 \text{ ಅಥವಾ } ₹\ 12,267$$

4) ಅನಿಶ್ಚಿತ ಲಾಭ ನಷ್ಟದ ಖಾತೆ

ಹಿಂದಿನ ವರ್ಷದ ಲಾಭ × ಅವರ ಪಾಲು × ಕಾಲ

$$= 20,000 \times \frac{3}{9} \times \frac{3}{12} = 1,666.66 \text{ ಅಥವಾ } ₹\ 1,667.$$

ನಿದರ್ಶನ 8.

ಗಾಂಧಿ, ಮೋಹನದಾಸ್ ಮತ್ತು ಮಂಡೇಲಾ ರವರು ಒಂದು ಸಂಸ್ಥೆಯಲ್ಲಿ ಪಾಲುದಾರರಾಗಿದ್ದು ಲಾಭ ನಷ್ಟಗಳನ್ನು 5:3:2 ಅನುಪಾತದಲ್ಲಿ ಕ್ರಮವಾಗಿ ಹಂಚಿಕೊಳ್ಳುತ್ತಿದ್ದರು. ದಿನಾಂಕ : 31–3–2013 ರಂದು ಅವರ ಅಢಾವೇ ಪತ್ರಿಕೆ ಈ ಕೆಳಗಿನಂತಿದೆ.

ಹೊಣೆಗಾರಿಕೆಗಳು	₹	₹	ಆಸ್ತಿಗಳು	₹	₹
ಕೊಡತಕ್ಕ ಹುಂಡಿಗಳು		25,000	ನಗದು		9,000
ಬ್ಯಾಂಕಿನ ಮೀರೆಳೆತ		2,000	ದಾಸ್ತಾನು		15,000
ಸಾಹುಕಾರರು		23,000	ಹೊಡಿಕೆಗಳು		16,000
ಮೀಸಲು ನಿಧಿ		50,000	ಬರತಕ್ಕ ಹುಂಡಿಗಳು		18,000
ಬಂಡವಾಳಗಳು :			ಪೀಠೋಪಕರಣಗಳು		22,000
ಗಾಂಧಿ	50,000		ಯಂತ್ರೋಪಕರಣಗಳು		45,000
ಮೋಹನದಾಸ್	30,000		ಕಟ್ಟಡಗಳು		75,000
ಮಂಡೇಲಾ	20,000	1,00,000			
		2,00,000			**2,00,000**

ಶ್ರೀ ಮಂಡೇಲಾ ರವರು ದಿನಾಂಕ 01–12–2013 ರಂದು ನಿಧನರಾದರು. ಪಾಲುಗಾರಿಕೆಯ ಒಪ್ಪಂದವು ಈ ಕೆಳಗಿನಂತಿದೆ.

a) ನಿಧನ ಹೊಂದಿನ ಪಾಲುದಾರನ ವಾರಸುದಾರರು ಕೀರ್ತಿ ಮೌಲ್ಯದಲ್ಲಿ ಪಾಲನ್ನು ಪಡೆಯುತ್ತಾರೆ. ಸಂಸ್ಥೆಯ ಕೀರ್ತಿ ಮೌಲ್ಯವನ್ನು 4 ವರ್ಷಗಳ ಸರಾಸರಿ ಲಾಭದ 3 ವರ್ಷಗಳ ಖರೀದಿಗೆ ಸಮ ಎಂದು ಲೆಕ್ಕಹಾಕಿರಿ. ಲಾಭನಷ್ಟಗಳು ಈ ಕೆಳಗಿನಂತಿವೆ.

2009-10	ಲಾಭ	45,000
2010-11	ಲಾಭ	30,000
2011-12	ನಷ್ಟ	15,000
2012-13	ಲಾಭ	40,000

b) ನಿಧನ ಹೊಂದಿದ ದಿನಾಂಕದವರೆಗೂ ಲಾಭದಲ್ಲಿನ ಪಾಲನ್ನು ಹಿಂದಿನ ವರ್ಷದ ಲಾಭದ ಆಧಾರದ ಮೇಲೆ ಲೆಕ್ಕಹಾಕಿರಿ.

c) ಬಂಡವಾಳದ ಮೇಲಿನ ಬಡ್ಡಿ ವರ್ಷದ ಶೇ 9.

d) ಮೀಸಲು ನಿಧಿಯಲ್ಲಿ ಪಾಲು.

ಶ್ರೀ ಮಂಡೇಲಾ ರವರು ನಿಧನಹೊಂದಿದ ದಿನಾಂಕದ ವರೆಗೂ ತಮ್ಮ ಸ್ವಂತ ವೆಚ್ಚಕ್ಕಾಗಿ ಉಪಯೋಗಿಸಿದ ಹಣ ರೂ 3,000 ಅವರ ಬಂಡವಾಳ ಬಾಕಿಯನ್ನು ಬ್ಯಾಂಕಿನ ಮೀರೆಳೆತದ ಮೂಲಕ ಚುಕ್ತಾ ಮಾಡಬೇಕೆಂದು ನಿರ್ಧರಿಸುರಿತ್ತಾರೆ.

ಶ್ರೀ ಮಂಡೇಲಾ ರವರ ಬಂಡವಾಳ ಖಾತೆಯನ್ನು ತಯಾರಿಸಿ.

ನಿರೂಪಣೆ :

ಖರ್ಚು ಮಂಡೇಲಾ ಬಂಡವಾಳದ ಖಾತೆ ಜಮ

ವಿವರ	₹	ವಿವರ	₹
ಗೆ, ಹಿಂತೆಗೆತದ ಖಾತೆ	3,000	ಯಿಂದ, ಪ್ರಾರಂಭದ ಶಿಲ್ಕು	20,000
ಗೆ, ಬ್ಯಾಂಕು (ಮೀರೆಳೆತ)	48,533	ಯಿಂದ, ಮೀಸಲು ನಿಧಿ ಖಾತೆ	10,000
		ಯಿಂದ, ಕೀರ್ತಿ ಮೌಲ್ಯ ಖಾತೆ	15,000
		ಯಿಂದ, ಅನಿಶ್ಚಿತ ಲಾಭ ನಷ್ಟದ ಖಾತೆ	5,333
		ಯಿಂದ, ಬಂಡವಾಳದ ಮೇಲಿನ ಬಡ್ಡಿ ಖಾತೆ	1,200
	51,533		**51,533**

ಟಿಪ್ಪಣಿ :

a) ಮಂಡೇಲಾ ಪಾಲಿನ ಮೀಸಲು ನಿಧಿ = $50,000 \times \frac{2}{10}$ = ₹ 10,000.

b) ಕೀರ್ತಿ ಮೌಲ್ಯ
ಸಂಸ್ಥೆಯ ಕೀರ್ತಿ ಮೌಲ್ಯ = ಸರಾಸರಿ ಲಾಭ × 3 = 45,000+30,000-15,000+40,000 ÷ 4 × 3
= ₹ 75,000.

ಮಂಡೇಲಾ ಪಾಲಿನ ಕೀರ್ತಿ ಮೌಲ್ಯ = $75,000 \times \frac{2}{10}$ = ₹ 15,000.

c) ಅನಿಶ್ಚಿತ ಲಾಭ = $40,000 \times \frac{2}{10} \times \frac{8}{12}$ = ₹ 5,333.

d) ಬಂಡವಾಳದ ಮೇಲಿನ ಬಡ್ಡಿ = $20,000 \times \frac{9}{100} \times \frac{8}{12}$ = ₹ 1,200.

ನಿದರ್ಶನ 9.

ಸಾಗರ್, ನವಾಬ್ ಮತ್ತು ಜಾನ್‌ಸನ್ ರವರು ಒಂದು ಸಂಸ್ಥೆಯಲ್ಲಿ ಪಾಲುದಾರರಾಗಿದ್ದು ಲಾಭ ನಷ್ಟಗಳನ್ನು 3:2:1 ಅನುಪಾತದಲ್ಲಿ ಹಂಚಿಕೊಳ್ಳುವರು. ದಿನಾಂಕ 31–3–2009ಕ್ಕೆ ಅವರ ಆಢಾವೇ ಪತ್ರಿಕೆ ಈ ಕೆಳಗಿನಂತಿದೆ.

ಹೊಣೆಗಾರಿಕೆಗಳು	₹	₹	ಆಸ್ತಿಗಳು	₹	₹
ಧಣಿಗಳು		45,000	ಕೈಯಲ್ಲಿ ನಗದು		18,000
ಮೀಸಲು ನಿಧಿ		30,000	ದಾಸ್ತಾನು		15,000
ಲಾಭ ನಷ್ಟದ ಖಾತೆ		18,000	ಋಣಿಗಳು		40,000
ಬಂಡವಾಳಗಳು :			ಹೂಡಿಕೆಗಳು		35,000
ಸಾಗರ್	30,000		ಪೀಠೋಪಕರಣಗಳು		22,500
ನವಾಬ್	50,000		ಕಟ್ಟಡ		62,500
ಜಾನ್‌ಸನ್	20,000	1,00,000			
		1,93,000			**1,93,000**

ದಿನಾಂಕ 30–09–2009ರಂದು ಜಾನ್‌ಸನ್ ರವರು ನಿಧನರಾದರು, ಪಾಲುಗಾರಿಕೆಯ ಕರಾರು ಪತ್ರದ ಪ್ರಕಾರ ವಾರಸುದಾರರಿಗೆ ಕೆಳಕಂಡಂತೆ ಪಾವತಿಸಲಾಗುವುದು.

a) ಹಿಂದಿನ ಆಢಾವೇ ಪತ್ರಿಕೆಯಲ್ಲಿರುವ ಅವರ ಬಂಡವಾಳ

b) ಮೀಸಲು ನಿಧಿ ಮತ್ತು ಲಾಭ ನಷ್ಟದ ಖಾತೆಯಲ್ಲಿ ಅವರ ಪಾಲು.

c) ನಿಧನ ಹೊಂದಿದ ದಿನಾಂಕದ ವರೆಗಿನ ಲಾಭನ್ನು ಹಿಂದಿನ ವರ್ಷದ ಲಾಭದ ಆಧಾರದ ಮೇಲೆ ಲೆಕ್ಕಹಾಕುವುದು.

d) ಸಂಸ್ಥೆಯಲ್ಲಿ ಅವರ ಪಾಲಿನ ಕೀರ್ತಿ ಮೌಲ್ಯವನ್ನು 4 ವರ್ಷಗಳ ಸರಾಸರಿ ಲಾಭದ 2 ವರ್ಷಗಳ ಖರೀದಿಗೆ ಸಮ ಎಂದು ಲೆಕ್ಕಹಾಕಿ.

e) ಬಂಡವಾಳದ ಮೇಲಿನ ಬಡ್ಡಿ ವರ್ಷದ ಶೇ 10.

f) ಜಾನ್‌ಸನ್ ಸ್ವಂತವೆಚ್ಚದ (drawings) ಮೇಲಿನ ಬಡ್ಡಿ ₹ 900.

g) ಜಾನ್‌ಸನ್ ರವರಿಗೆ ನೀಡಬೇಕಾದ ವಾರ್ಷಿಕ ದಳ್ಳಾಲಿ ₹ 12,000

h) ಜಂಟಿ ವಿಮಾ ಪತ್ರದ ಮೌಲ್ಯದಲ್ಲಿ ಅವರ ಪಾಲು ಜಂಟಿ ಮಿಮಾ ಪತ್ರದ ಮೌಲ್ಯ ₹ 60,000 ಹಿಂದಿನ 4 ವರ್ಷಗಳ ಲಾಭ 2005–06 ₹ 40,000 ; 2006–07 ₹ 30,000 ; 2007–08 ರೂ 20,000; 2008–09 ₹ 30,000.

ನಿಧನ ಹೊಂದಿರುವ ದಿನಾಂಕದ ವರೆಗೂ ಅವರ ಹಿಂತೆಗೆತ ರೂ. 18000

ಮುಂದುವರೆದ ಪಾಲುದಾರರು ವಾರಸುದಾರನಿಗೆ ₹ 8600 ತಕ್ಷಣವೇ ನೀಡಲು ಒಪ್ಪಿರುತ್ತಾರೆ ಮತ್ತು ಉಳಿದ ಶಿಲ್ಕುನ್ನು ಶೇ 12 ಬಡ್ಡಿಯಂತೆ 3 ಸಮ ವಾರ್ಷಿಕ ಕಂತುಗಳಲ್ಲಿ ಪಾವತಿಸುತ್ತಾರೆ.

ಜಾನ್‌ಸನ್ ಬಂಡವಾಳ ಖಾತೆ ಮತ್ತು ಅವರ ವಾರಸುದಾರರ ಸಾಲದ ಖಾತೆಯನ್ನು ಚುಕ್ತಾ ಆಗುವವರೆಗೂ ತೋರಿಸಿ.

ನಿರೂಪಣೆ :

ಖರ್ಚು **ಜಾನ್‌ಸನ್ ಬಂಡವಾಳ ಖಾತೆ** ಜಮ

ವಿವರ	₹	ವಿವರ	₹
ಗೆ ಹಿಂತೆಗೆತದ ಖಾತೆ	18,000	ಯಿಂದ, ಪ್ರಾರಂಬದ ಶಿಲ್ಕು	20,000
ಗೆ, ಹಿಂತೆಗೆತದ ಮೇಲೆ ಬಡ್ಡಿ ಖಾತೆ	900	ಯಿಂದ, ಮೀಸಲು ನಿಧಿ ಖಾತೆ	5,000
ಗೆ, ವಾರಸುದಾರನ ಸಾಲದ ಖಾತೆ	38,600	ಯಿಂದ, ಲಾಭ ನಷ್ಟದ ಖಾತೆ	3,000
(ಶಿಲ್ಕು ವರ್ಗಾಯಿಸಿದೆ.)		ಯಿಂದ, ಅನಿಶ್ಚಿತ ಲಾಭ ನಷ್ಟದ ಖಾತೆ	2,500
		ಯಿಂದ, ಕೀರ್ತಿ ಮೌಲ್ಯದ ಖಾತೆ	10,000
		ಯಿಂದ, ಬಂಡವಾಳದ ಮೇಲೆ ಬಡ್ಡಿ ಖಾತೆ	1,000
		ಯಿಂದ, ದಳ್ಳಾಲಿ ಖಾತೆ	6,000
		ಯಿಂದ, ಜಂಟಿ ವಿಮಾ ಪತ್ರದ ಖಾತೆ	10,000
	57,500		**57,500**

ಖರ್ಚು **ಜಾನ್‌ಸನ್ ವಾರಸುದಾರರ ಸಾಲದ ಖಾತೆ** ಜಮ

ದಿನಾಂಕ	ವಿವರ	₹	ದಿನಾಂಕ	ವಿವರ	₹
30-9-09	ಗೆ ನಗದು ಖಾತೆ	8,600	30-9- 09	ಯಿಂದ, ಬಂಡವಾಳದ ಖಾತೆ	38,600
30-9-09	ಗೆ ಅಂತಿಮ ಶಿಲ್ಕು	30,000			
		38,600			**38,600**

30-9-10	ಗೆ ನಗದು ಖಾತೆ	13,600	01-10-09	ಯಿಂದ, ಪ್ರಾರಂಭದ ಶಿಲ್ಕು	30,000
30-9-10	ಗೆ ಅಂತಿಮ ಶಿಲ್ಕು	20,000	30-9-10	ಯಿಂದ, ಸಾಲದ ಮೇಲೆ ಬಡ್ಡಿ ಖಾತೆ	3,600
		33,600			**33,600**
30-9-11	ಗೆ ನಗದು ಖಾತೆ	12,400	01-10-10	ಯಿಂದ, ಪ್ರಾರಂಭದ ಶಿಲ್ಕು	20,000
30-9-11	ಗೆ ಅಂತಿಮ ಶಿಲ್ಕು	10,000	30-9-11	ಯಿಂದ, ಸಾಲದ ಮೇಲೆ ಬಡ್ಡಿ ಖಾತೆ	2,400
		22,400			**22,400**
30-9-12	ಗೆ ನಗದು ಖಾತೆ	11,200	1-10-11	ಯಿಂದ, ಪ್ರಾರಂಭದ ಶಿಲ್ಕು	10,000
			30-9-12	ಯಿಂದ, ಸಾಲದ ಮೇಲೆ ಬಡ್ಡಿ ಖಾತೆ	1,200
		11,200			**11,200**

ಟಿಪ್ಪಣಿ :

ಜಾನ್‌ಸನ್ ಪಾಲನ್ನು ಲೆಕ್ಕಹಾಕುವುದು:

a) ಮೀಸಲು ನಿಧಿ = $30,000 \times \frac{1}{6}$ = ₹ 5,000.

b) ಲಾಭ ನಷ್ಟದ ಖಾತೆ = $18,000 \times \frac{1}{6}$ = ₹ 3,000.

c) ಅನಿಶ್ಚಿತ ಲಾಭ ನಷ್ಟದ ಖಾತೆ = ಹಿಂದಿನ ವರ್ಷದ ಲಾಭ × ಕಾಲ × ಅನುಪಾತ ಅಥವಾ ಪಾಲು

$= 30,000 \times \frac{6}{12} \times \frac{1}{6}$ = ₹2,500.

d) ಕೀರ್ತಿ ಮೌಲ್ಯ = 4 ವರ್ಷಗಳ ಸರಾಸರಿ ಲಾಭ × 2 × ಅವರ ಪಾಲು

$= 40,000+30,000+20,000+30,000 \div 4 \times 2 \times \frac{1}{6}$ = ₹ 10,000.

e) ಬಂಡವಾಳದ ಮೇಲಿನ ಬಡ್ಡಿ = ಬಂಡವಾಳ × ಕಾಲ × ರೇಟು

$= 20,000 \times \frac{6}{12} \times \frac{10}{100}$ = ₹ 1,000.

f) ದಳಾಲ್ಲಿ = $12,000 \times \frac{6}{12}$ = ₹ 6,000.

g) ಜಂಟಿ ವಿಮಾ ಪತ್ರ = ವಿಮಾ ಮೊತ್ತ × ಪಾಲು

$= 60,000 \times \frac{1}{6}$ = ₹ 10,000

ಸಂಕ್ಷಿಪ್ತ ನೋಟ

- ಯಾವಾಗ ಒಬ್ಬ ಪಾಲುದಾರ ಮತ್ತು ಸಂಸ್ಥೆಯ ನಡುವಿನ ಇರುವ ಸಂಬಂದ ಸಮಾಪ್ತಿ ಅಥವಾ ಕೊನೇಗೊಳ್ಳುತ್ತದಿಯೋ, ಅವಾಗ ಒಬ್ಬ ಪಾಲುದಾರನು ಸಂಸ್ಥೆಯಿಂದ ನಿವೃತ್ತನಾಗಿದ್ದಾನೆ ಎನ್ನಲಾಗುತ್ತದೆ.
- ಗಳಿಕೆಯ ಅನುಪಾತ = ಹೊಸ ಅನುಪಾತ – ಹಳೇ ಅನುಪಾತ
- ಹೊಸ ಲಾಭ ಹಂಚಿಕೆಯ ಅನುಪಾತ = ಹಳೇ ಅನುಪಾತ + ಗಳಿಸಿರುವ ಪಾಲು.
- ಸಂಸ್ಥೆಯ ಆಸ್ತಿ ಮತ್ತು ಹೊಣೆಗಾರಿಕೆಗಳ ಪುನರ್ ಮೌಲ್ಯಮಾಪನದ ಲಾಭ ಅಥವ ನಷ್ಟ **(ಹಳೆ ಅನುಪಾತ)**
- ಮೀಸಲು ಮತ್ತು ಹಂಚಿಕೊಳ್ಳದಿರುವ ಲಾಭ ಮತ್ತು ನಷ್ಟಗಳ ಹಂಚಿಕೆ **(ಹಳೆ ಅನುಪಾತ)**
- ಕೀರ್ತಿ ಮೌಲ್ಯದ ಉಪಚಾರಗಳು :
  - ➢ ಇದರ ಪೂರ್ಣ ಮೌಲ್ಯ ಸೃಷ್ಠಿಸಿ ಅದನ್ನು ಉಳಿಸಿಕೊಂಡಾಗ **(ಹಳೆ ಅನುಪಾತ)**
  - ➢ ಇದರ ಪೂರ್ಣ ಮೌಲ್ಯ ಸೃಷ್ಠಿಸಿ ಅದನ್ನು ತೆಗೆದು ಹಾಕಿದಾಗ **(ಹಳೆ ಅನುಪಾತ ಮತ್ತು ಹೊಸ ಅನುಪಾತ)**
  - ➢ ನಿವೃತ್ತ ಪಾಲುದಾರನ ಪಾಲಿನ ಕೀರ್ತಿ ಮೌಲ್ಯ ಸೃಷ್ಟಿಸಿ ಮತ್ತು ತೊಡೆದು ಹಾಕಿದಾಗ **(ಹಳೆ ಮತ್ತು ಗಳಿಸಿದ ಅನುಪಾತ)**
  - ➢ ನಿವೃತ್ತ ಪಾಲುದಾರನ ಪಾಲಿನ ಕೀರ್ತಿ ಮೌಲ್ಯವನ್ನು ಸೃಷ್ಟಿಸಿ ಮತ್ತು ಕೀರ್ತಿ ಮೌಲ್ಯ ಖಾತೆ ತೆಗೆಯದೆ ಅದನ್ನು ತೊಡೆದು ಹಾಕಿದಾಗ **(ಹಳೆ ಅನುಪಾತ ಮತ್ತು ಗಳಿಕೆ ಅನುಪಾತ)**
- ನಿವೃತ್ತ ಪಾಲುದಾರನಿಗೆ ನೀಡಬೇಕಾಗಿರುವ ಹಣವನ್ನು ಚುಕ್ತ ಮಾಡುವ ವಿಧಾನ :
  - ➢ ನಗದು ಅಥವಾ ಬ್ಯಾಂಕು ಮೀರೆಳಿತದ ಮೂಲಕ ಚುಕ್ತಾ
  - ➢ ಸಾಲದ ಖಾತೆಗೆ ವರ್ಗಾವಣೆ
  - ➢ ಭಾಗಶಃ ನಗದು ಮತ್ತು ಉಳಿದ ಶಿಲ್ಕು ಸಾಲದ ಖಾತೆಗೆ ವರ್ಗಾವಣೆ
  - ➢ ಸಹಿತ ಕಂತುಗಳಲ್ಲಿ ಪಾವತಿ ಬಡ್ಡಿ
- ಉಳಿದ ಪಾಲುದಾರರ ಬಂಡವಾಳದ ಹೊಂದಾಣಿಕೆಗಳು – **ನಗದು ಹೊಂದಾಣಿಕೆಗಳು ಮಾತ್ರ**
- **ಅನುಮಾನಾಸ್ಪದ ಸಾಲಕ್ಕೆ ಕಾಯ್ದಿರಿಸಿದ್ದು :**
  - ➢ ಅನುಮಾನಾಸ್ಪದ ಸಾಲಕ್ಕೆ ಕಾಯ್ದಿರಿಸಿದ್ದು – **ಪುನರ್ ಮೌಲ್ಯ ಮಾಪನದ ನಷ್ಟ ಲಾಭ**
  - ➢ ಕರಡು ಸಾಲ ಮತ್ತು ಅನುಮಾನಾಸ್ಪದ ಸಾಲಕ್ಕೆ ಕಾಯ್ದಿರಿಸಿದ್ದು – **ಪುನರ್ ಮೌಲ್ಯ ಮಾಪನದ ನಷ್ಟ**
  - ➢ ಅನುಮಾನಾಸ್ಪದ ಸಾಲಕ್ಕೆ ಕಾಯ್ದಿರಿಸಿದ್ದು ಹೆಚ್ಚಿಸಿದಾಗ (ರಷ್ಟು) – **ಪುನರ್ ಮೌಲ್ಯ ಮಾಪನದ ನಷ್ಟ**
  - ➢ ಅನುಮಾನಾಸ್ಪದ ಸಾಲಕ್ಕೆ ಕಾಯ್ದಿರಿಸಿದ್ದು ಹೆಚ್ಚಿಸಿದಾಗ (ಗೆ) – **ಪುನರ್ ಮೌಲ್ಯ ಮಾಪನದ ನಷ್ಟ**
  - ➢ ಅನುಮಾನಾಸ್ಪದ ಸಾಲಕ್ಕೆ ಕಾಯ್ದಿರಿಸಿದ್ದು ಕಡಿಮೆಯಾದಾಗ (ರಷ್ಟು) – **ಪುನರ್ ಮೌಲ್ಯ ಮಾಪನದ ಲಾಭ**
  - ➢ ಅನುಮಾನಸ್ಪದ ಸಾಲಕ್ಕೆ ಕಾಯ್ದಿರಿಸಿದ್ದು ಕಡಿಮೆಯಾದಾಗ (ಗೆ) – **ಪುನರ್ ಮೌಲ್ಯ ಮಾಪನದ ಲಾಭ**
  - ➢ ಅನುಮಾನಾಸ್ಪದ ಸಾಲಕ್ಕೆ ಕಾಯ್ದಿರಿಸಿದ್ದು ಅಗತ್ಯವಿಲ್ಲದ್ದಿದಾಗ – **ಪುನರ್ ಮೌಲ್ಯ ಮಾಪನದ ಲಾಭ**

ಪಾಲುದಾರನ ನಿಧನ

ನಿಧನ ಪಾಲುದಾರನ ಬಂಡವಾಳ ಖಾತೆ/ವಾರಸುದಾರರ ಖಾತೆ

ವಿವರ	₹	ವಿವರ	₹
ಗೆ, ಹಿಂತೆಗೆತ ಗೆ, ಹಿಂತೆಗೆತದ ಮೇಲೆ ಬಡ್ಡಿ	ಪೂರ್ಣ ಧರ × ಕಾಲ ಅಥವಾ ನೀಡಿದ ಬಡ್ಡಿ	ಯಿಂದ, ಪ್ರಾರಂಬದ ಶಿಲ್ಕು ಯಿಂದ, ಮೀಸಲು ನಿಧಿ ಯಿಂದ, ಲಾಭ ನಷ್ಟ ಖಾತೆ ಯಿಂದ ಕೀರ್ತಿ ಮೌಲ್ಯ ಖಾತೆ ಯಿಂದ, ಮರು ಮೌಲ್ಯ ಮಾಪನ ಲಾಭ	ಬಂಡವಾಳ × ಪಾಲು × ಪಾಲು × ಪಾಲು × ಪಾಲು
ಗೆ, ಲಾಭ ನಷ್ಟದ ಖಾತೆ (ನಷ್ಟ)	× ಪಾಲು	ಯಿಂದ ಲಾಭ ನಷ್ಟದ ಅನಿಶ್ಚಿತ ಖಾತೆ (ಲಾಭದ ಪಾಲು)	× ಪಾಲು × ಕಾಲ
ಗೆ, ಮರು ಮೌಲ್ಯ ಮಾಪನ ನಷ್ಟ	× ಪಾಲು	ಯಿಂದ, ಬಂಡವಾಳದ ಮೇಲೆ ಬಡ್ಡಿ ಯಿಂದ, ವೇತನ/ದಲ್ಲಾಳಿ.	×ಧರ×ಕಾಲ ×ಧರ×ಕಾಲ
	XXXX		XXXX

ಅಭ್ಯಾಸಗಳು

ವಿಭಾಗ – ಎ

ಪಾಲುದಾರನ ನಿವೃತ್ತಿ

I. ಎರಡು ಅಂಕಗಳ ಪ್ರಶ್ನೆಗಳು :

1. ಪಾಲುದಾರನ ನಿವೃತ್ತಿ ಎಂದರೇನು?
2. ಪಾಲುದಾರನ ನಿವೃತ್ತಿಗೆ ಸಂಬಂಧ ಪಟ್ಟಂತೆ ಯಾವುದಾದರು ಎರಡು ಸನ್ನಿವೇಶಗಳನ್ನು ಬರೆಯಿರಿ.
3. ಗಳಿಕೆಯ ಅನುಪಾತ ಎಂದರೇನು? ಇದರ ಅಗತ್ಯವೇನು?
4. ಪಾಲುದಾರನ ನಿವೃತ್ತಿ ಸಮಯದಲ್ಲಿ ಗಳಿಕೆಯ ಅನುಪಾತವನ್ನು ಹೇಗೆ ಕಂಡುಹಿಡಿಯುವಿರಿ?
5. ಪಾಲುದಾರನ ನಿವೃತ್ತಿ ಸಮಯದಲ್ಲಿ ಹೊಸ ಲಾಭ ಹಂಚಿಕೆಯ ಅನುಪಾತವನ್ನು ಹೇಗೆ ಕಂಡುಹಿಡಿಯುವಿರಿ?
6. ಹೊಸ ಲಾಭ ಹಂಚಿಕೆ ಅನುಪಾತವನ್ನು ಕಂಡುಹಿಡಿಯಲು ಯಾವುದಾದರು ಎರಡು ಉದ್ದೇಶಗಳನ್ನು ತಿಳಿಸಿ.
7. ಪಾಲುದಾರನ ನಿವೃತ್ತಿಯ ಸಮಯದಲ್ಲಿ ಪುನರ್ ಮೌಲ್ಯ ಮಾಪನ ಖಾತೆಯನ್ನು ಹೇಗೆ ಮುಕ್ತಾಯಗೊಳಿಸುವಿರಿ?
8. ಪಾಲುದಾರನ ನಿವೃತ್ತಿಯ ಸಮಯದಲ್ಲಿ ಕೀರ್ತಿಯ ಮೌಲ್ಯವನ್ನು ಉಪಚರಿಸುವ ಎರಡು ವಿಧಾನಗಳನ್ನು ಬರೆಯಿರಿ.
9. ಕೀರ್ತಿಯ ಮೌಲ್ಯ ವರ್ಧಿಸದಿದ್ದಾಗ ನಿವೃತ್ತ ಪಾಲುದಾರನ ಕೀರ್ತಿಯ ಮೌಲ್ಯದ ಭಾಗವನ್ನು ಹೊಂದಾಣಿಕೆ ಮಾಡಲು ರೋಜು ದಾಖಲೆಯನ್ನು ಬರೆಯಿರಿ.
10. ನಿವೃತ್ತ ಪಾಲುದಾರನಿಗೆ ಚುಕ್ತಾಗೊಳಿಸಲು, ಯಾವುದಾದರು ಎರಡು ಪಾವತಿಯ ಮಾರ್ಗಗಳನ್ನು ತಿಳಿಸಿ.
11. ನಿವೃತ್ತ ಪಾಲುದಾರನ ಬಂಡವಾಳ ಖಾತೆಯನ್ನು ಮುಕ್ತಾಯಗೊಳಿಸಲು ರೋಜು ದಾಖಲೆಯನ್ನು ಕೊಡಿ.
   a) ತಕ್ಷಣ ಸಂದಾಯ ಮಾಡಿದಾಗ

b) ಸಾಲದ ಖಾತೆಗೆ ವರ್ಗಾಯಿಸಿದಾಗ.

12. ಪುನರ್ ಮೌಲ್ಯ ಮಾಪನ ಖಾತೆಯನ್ನು ಮುಕ್ತಾಯಗೊಳಿಸಲು ರೋಜುದಾಖಲೆಯನ್ನು ಕೊಡಿ.
    a) ಲಾಭವಿದ್ದಾಗ
    b) ನಷ್ಟವಿದ್ದಾಗ

ಪಾಲುದಾರನ ಮರಣ

13. ವಾರಸುದಾರ ಎಂದರೆ ಯಾರು?
14. ವಾರಸುದಾರರ ಖಾತೆಯನ್ನು ಯಾವಾಗ ತಯಾರಿಸುವಿರಿ.
15. ಗಳಿಕೆ ಲಾಭ/ನಷ್ಟದ (accrued profit) ಅರ್ಥವನ್ನು ಕೊಡಿ.
16. ಮರಣದೊಂದಿರುವ ಪಾಲುದಾರನ ಖಾತೆಯನ್ನು ಮುಕ್ತಾಯಗೊಳಿಸಲು ರೋಜು ದಾಖಲೆಯನ್ನು ಬರೆಯಿರಿ.
17. ಪಾಲುದಾರನ ನಿವೃತ್ತಿ ಮತ್ತು ಮರಣ ನಡುವಿನ ಲೆಕ್ಕ ಬರವಣಿಗೆಯ ವ್ಯತ್ಯಾಸಗಳನ್ನು ತಿಳಿಸಿ.

ವಿಭಾಗ – ಬಿ

ಪಾಲುದಾರನ ನಿವೃತ್ತಿ

II. ಐದು ಅಂಕಗಳ ಪ್ರಶ್ನೆಗಳು :

1. ತ್ಯಾಗದ ಅನುಪಾತ ಮತ್ತು ಗಳಿಕೆಯ ಅನುಪಾತ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.

2. ಪಾಲುದಾರನ ನಿವೃತ್ತಿಯ ಸಮಯದಲ್ಲಿ ಮಾಡಬೇಕಾದ ವಾಡಿಕೆಯ ಹೊಂದಾಣಿಕೆಗಳು ಯಾವುದು?

3. ನಿವೃತ್ತ ಪಾಲುದಾರನ ಚುಕ್ತಗೊಳಿಸಲು, ಸಂದಾಯಮಾಡುವ ವಿವಿಧ ಮಾರ್ಗಗಳನ್ನು ತಿಳಿಸಿ.

4. ಪಾಲುದಾರನ ನಿವೃತ್ತಿಯ ಸಮಯದಲ್ಲಿ ಕೀರ್ತಿಯ ಮೌಲ್ಯವನ್ನು ಉಪಚರಿಸುವ ವಿವಿಧ ಪದ್ದತಿಗಳನ್ನು ತಿಳಿಸಿ.

5. ಹೊಸ ಲಾಭ ಹಂಚಿಕೆ ಅನುಪಾತವನ್ನು ಕಂಡುಹಿಡಿಯುವ ಅವಶ್ಯಕತೆಗಳನ್ನು ಬರೆಯಿರಿ.

6. A, B ಮತ್ತು C ಒಂದು ಸಂಸ್ಥೆಯಲ್ಲಿ ಪಾಲುದಾರರಾಗಿದ್ದು ಲಾಭ ನಷ್ಟಗಳನ್ನು 2:2:1 ಅನುಪಾತದಲ್ಲಿ ಹಂಚಿಕೊಳ್ಳುವರು. ಅವರ ಗಳಿಕೆಯ ಅನುಪಾತವನ್ನು ಕಂಡುಹಿಡಿಯಿರಿ.

A) ನಿವೃತ್ತನಾದರೆ **B)** ನಿವೃತ್ತನಾದರೆ **C)** ನಿವೃತ್ತನಾದರೆ

ಉತ್ತರ : A) 2:1, B) 5:2, C) 2:2

7. X, Y ಮತ್ತು Z ಪಾಲುದಾರರಾಗಿದ್ದು, ಲಾಭ ನಷ್ಟಗಳನ್ನು 5:3:2 ಅನುಪಾತದಲ್ಲಿ ಹಂಚಿಕೊಳ್ಳುತಿದ್ದರು ಅವರ ಗಳಿಕೆಯ ಅನುಪಾತವನ್ನು ಕಂಡುಹಿಡಿಯಿರಿ.

A) X ನಿವೃತ್ತನಾದಾಗ **B)** Y ನಿವೃತ್ತನಾದಾಗ **C)** Z ನಿವೃತ್ತನಾದಾಗ

ಉತ್ತರ : A.3:2, B. 5:2, C.5:3

8. M, N ಮತ್ತು O ಪಾಲುದಾರರಾಗಿದ್ದು ಲಾಭ ನಷ್ಟಗಳನ್ನು 5:3:2 ಪ್ರಮಾಣದಲ್ಲಿ ಹಂಚಿಕೊಳ್ಳುತ್ತಿದ್ದರು. N ನಿವೃತ್ತನಾಗಿರುತ್ತಾನೆ. M ಮತ್ತು O ಭವಿಷ್ಯದಲ್ಲಿ ತಮ್ಮ ಲಾಭವನ್ನು 5/8 ಮತ್ತು 3/8 ಅನುಪಾತದಲ್ಲಿ ಕ್ರಮವಾಗಿ ಹಂಚಿಕೊಳ್ಳುವರು. ಗಳಿಕೆ ಅನುಪಾತವನ್ನು ಕಂಡುಹಿಡಿಯಿರಿ.

ಉತ್ತರ : ಗಳಿಕೆಯ ಅನುಪಾತ 5:7

9. P, Q ಮತ್ತು R ಪಾಲುದಾರರಾಗಿದ್ದು ಲಾಭ ನಷ್ಟಗಳನ್ನು 1/2, 1/3 ಮತ್ತು 1/6 ಪ್ರಮಾಣದಲ್ಲಿ ಕ್ರಮವಾಗಿ ಹಂಚಿಕೊಳ್ಳುವರು. ಅನಾರೋಗ್ಯದಿಂದ P ನಿವೃತ್ತನಾಗಿರುತ್ತಾನೆ. Q ಮತ್ತು R ಮುಂದೆ ಸಮಪಾಲುದಾರರಾಗಿ ಮುಂದುವರಿಯಲು ನಿರ್ದರಿಸುರುತ್ತಾರೆ. ಗಳಿಕೆಯ ಅನುಪಾತವನ್ನು ಕಂಡುಹಿಡಿಯಿರಿ.

ಉತ್ತರ : ಗಳಿಕೆಯ ಅನುಪತ 1:2

10. ಸೂರ್ಯ, ಚಂದ್ರ ಮತ್ತು ನಕ್ಷತ್ರ ಪಾಲುದಾರರಾಗಿದ್ದು, ಲಾಭ ನಷ್ಟಗಳನ್ನು 4:3:2 ಅನುಪಾತದಲ್ಲಿ ಹಂಚಿಕೊಳ್ಳುವರು. ಚಂದ್ರ ಸಂಸ್ಥೆಯಿಂದ ನಿವೃತ್ತಿನಾಗಿರುತ್ತಾನೆ, ಸೂರ್ಯ ಮತ್ತು ನಕ್ಷತ್ರರವರ ಹೊಸ ಲಾಭ ಹಂಚಿಕೆಯ ಅನುಪಾತ 5:3 ಆಗಿರುತ್ತದೆ. ಗಳಿಕೆಯ ಅನುಪಾತ ಕಂಡುಹಿಡಿಯಿರಿ.

ಉತ್ತರ : ಗಳಿಕೆಯ ಅನುಪಾತ 13:11

11. ಸಮುದ್ರ, ನದಿ ಮತ್ತು ಕಾಲುವೆ ಪಾಲುದಾರರಾಗಿದ್ದು ಲಾಭ ನಷ್ಟಗಳನ್ನು 4:3:2 ಅನುಪಾತದಲ್ಲಿ ಕ್ರಮವಾಗಿ ಹಂಚಿಕೊಳ್ಳುವರು. ಕಾಲುವೆ ನಿವೃತ್ತನಾಗಿದ್ದು ಮತ್ತು ಉಳಿದಿರುವ ಪಾಲುದಾರರು ಭವಿಷ್ಯತ್ತುನಲ್ಲಿ ಬರುವ ಲಾಭವನ್ನು ಸಮವಾಗಿ ಹಂಚಿಕೊಳ್ಳುತ್ತಾರೆ. ಉಳಿದರುವ ಪಾಲುದಾರರ ಗಳಿಕೆಯ ಅನುಪಾತವನ್ನು ಕಂಡುಹಿಡಿಯಿರಿ.

ಉತ್ತರ : ಗಳಿಕೆಯ ಅನುಪಾತ 1:3.

12. ಪ್ರಕಾಶ್, ಬಾಸ್ಕರ್ ಮತ್ತು ಕಿರಣ್ ಪಾಲುದಾರರಾಗಿದ್ದು ಲಾಭ ನಷ್ಟಗಳನ್ನು 5:4:3 ಪ್ರಮಾಣದಲ್ಲಿ ಹಂಚಿಕೊಳ್ಳುತ್ತಿದ್ದರು. ಅವರ ಹೊಸ ಲಾಭ ಹಂಚಿಕೆ ಪ್ರಮಾಣವನ್ನು ಕಂಡುಹಿಡಿಯಿರಿ. **A)** ಪ್ರಕಾಶ್ ನಿವೃತ್ತರಾದರೆ **B)** ಭಾಸ್ಕರ್ ನಿವೃತ್ತರಾದರೆ **C)** ಕಿರಣ್ ನಿವೃತ್ತರಾದರೆ.

ಉತ್ತರ : A. 4:3, B. 5:3, C. 5:4.

13. ರೀನಾ, ಮೀನಾ ಮತ್ತು ಟೀನಾ ರವರು ಒಂದು ಸಂಸ್ಥೆಯಲ್ಲಿ ಪಾಲುದಾರರಾಗಿದ್ದು ಲಾಭ ನಷ್ಟಗಳನ್ನು 1/4, 1/8, ಮತ್ತು 1/6 ಅನುಪಾತದಲ್ಲಿ ಕ್ರಮವಾಗಿ ಹಂಚಿಕೊಳ್ಳುತ್ತಿದ್ದರು ಅದರ ಹೊಸ ಲಾಭ ಹಂಚಿಕೆಯ ಅನುಪಾತವನ್ನು ಕಂಡುಹಿಡಿಯಿರಿ. **A)** ರೀನಾ ನಿವೃತ್ತರಾದರೆ **B)** ಮೀನಾ ನಿವೃತ್ತರಾದರೆ **C)** ಟೀನಾ ನಿವೃತ್ತರಾದರೆ

ಉತ್ತರ : A 2:10, B 4:10, C 4:2

14. ಜಹೀರ್, ಅಮೀನ್ ಮತ್ತು ಸಿಕಂದರ್ ಪಾಲುದಾರರಾಗಿದು ಲಾಭ ನಷ್ಟಗಳನ್ನು 3:2:1 ಪ್ರಮಾಣದಲ್ಲಿ ಹಂಚಿಕೊಳ್ಳುತ್ತಿದ್ದರು. ಸಿಕಂದರ್ ನಿವೃತ್ತನಾಗಿರುತ್ತಾನೆ, ಮತ್ತು ಅವರ ಭಾಗವನ್ನು ಜಹೀರ್ ಮತ್ತು ಅಮೀನ್ 1/8 ಮತ್ತು 1/24 ಪ್ರಮಾಣದಲ್ಲಿ ಗಳಿಸಿರುತ್ತಾರೆ. ಹೊಸ ಲಾಭ ಹಂಚಿಕೆ ಪ್ರಮಾಣವನ್ನು ಕಂಡುಹಿಡಿಯಿರಿ.

ಉತ್ತರ : ಹೊಸ ಲಾಭ ಹಂಚಿಕೆ ಪ್ರಮಾಣ 15:9.

15. X, Y ಮತ್ತು Z ಪಾಲುದಾರರಾಗಿದ್ದು ಲಾಭ ನಷ್ಟಗಳನ್ನು 2:1;1 ಪ್ರಮಾಣದಲ್ಲಿ ಹಂಚಿಕೊಳ್ಳುತಿದ್ದರು Y ನಿವೃತ್ತನಾಗಿರುತ್ತಾನೆ ಮತ್ತು ಅವರ ಭಾಗವನ್ನು X ಮತ್ತು Z 2/3 ಮತ್ತು 1/3 ಪ್ರಮಾಣದಲ್ಲಿ ತೆಗೆದುಕೊಂಡಿರುತ್ತಾನೆ. ಹೊಸ ಲಾಭ ಹಂಚಿಕೆ ಅನುಪಾತವನ್ನು ಕಂಡುಹಿಡಿಯಿರಿ.

ಉತ್ತರ : ಹೊಸ ಲಾಭ ಹಂಚಿಕೆ ಪ್ರಮಾಣ 2:1.

16. ರಮೇಶ್, ಪ್ರಕಾಶ್, ಸುರೇಶ್ ಮತ್ತು ದಿನೇಶ್ ಪಾಲುದಾರರಾಗಿದ್ದು ಲಾಭ ನಷ್ಟಗಳನ್ನು 3:2:1:4 ಅನುಪಾತದಲ್ಲಿ ಹಂಚಿಕೊಳ್ಳುತ್ತಿದ್ದರು. ರಮೇಶ್ ನಿವೃತ್ತನಾಗಿರುತ್ತಾನೆ ಮತ್ತು ಅವರ ಭಾಗವನ್ನು ಪ್ರಕಾಶ್ ಮತ್ತು ಸುರೇಶ್ 3:2 ಅನುಪಾತದಲ್ಲಿ ಪಡೆದಿರುತ್ತಾರೆ ಉಳಿದ ಪಾಲುದಾರರ ಹೊಸ ಲಾಭ ಹಂಚಿಕೆಯ ಅನುಪಾತವನ್ನು ಕಂಡುಹಿಡಿಯಿರಿ.

ಉತ್ತರ : ಹೊಸ ಲಾಭದ ಅನುಪಾತ 9:11:20.

17. A, B, C ಮತ್ತು D ಪಾಲುದಾರರಾಗಿದ್ದು ಲಾಭ ನಷ್ಟಗಳನ್ನು 5:4:3:2 ಅನುಪಾತದಲ್ಲಿ ಹಂಚಿಕೊಳ್ಳುವರು. A ಸಂಸ್ಥೆಯಿಂದ ನಿವೃತ್ತನಾಗಿರುತ್ತಾನೆ, ಅವರ ಭಾಗವನ್ನು B ಮತ್ತು C ಸಮವಾಗಿ ಪಡೆದಿರುತ್ತಾರೆ. ಹೊಸ ಲಾಭ ಹಂಚಿಕೆಯ ಅನುಪಾತವನ್ನು ಕಂಡುಹಿಡಿಯಿರಿ.

ಉತ್ತರ : ಹೊಸ ಲಾಭ ಹಂಚಿಕೆಯ ಅನುಪಾತ 13:11:4.

ಪಾಲುದಾರನ ಮಾರಣ/ನಿಧನ

18. ಕೇಶವ, ಮುಖೇಶ್ ಮತ್ತು ಅನಿಲ್ ಒಂದು ಸಂಸ್ಥೆಯಲ್ಲಿ ಪಾಲುದಾರರಾಗಿದ್ದು ಲಾಭ ನಷ್ಟಗಳನ್ನು 5:3:2 ಅನುಪಾತದಲ್ಲಿ ಹಂಚಿಕೊಳ್ಳುತ್ತಿದ್ದರು. ದಿನಾಂಕ 31–3–2012ಕ್ಕೆ ಅವರ ಅಢಾವೆ ಪತ್ರಿಕೆ ಈ ಕೆಳಗಿನಂತಿದೆ.

ದಿನಾಂಕ 31–3–2012ರ ಅಢಾವೆ ಪತ್ರಿಕೆ

ಹೊಣೆಗಾರಿಕೆಗಳು	₹	₹	ಆಸ್ತಿಗಳು	₹	₹
ಧಣಿಗಳು		14,000	ನಗದು		8,000
ಸಂಚಿತ ನಿಧಿ		6,000	ಋಣಿಗಳು		11,000
ಬಂಡವಾಳಗಳು :			ಪೇಟೆಂಟ್ಸ್ (ಹಕ್ಕುಗಳು)		11,000
ಕೇಶವ್	30,000		ಸರಕು		10,000
ಮುಖೇಶ್	25,000		ಯಂತ್ರೋಪಕರಣ		30,000
ಅನಿಲ್	15,000	70,000	ಕಟ್ಟಡ		20,000
		90,000			**90,000**

ಕೇಶವ ರವರು ದಿನಾಂಕ 30–09–2012 ರಂದು ನಿಧನರಾದರು, ಇವರ ಉತ್ತರಾಧಿಕಾರಿಗಳು ಮತ್ತು ಬದುಕಿರುವ ಪಾಲುದಾರರು ಒಪ್ಪಿರುವುದೇನೆಂದರೆ.

a) ಕೀರ್ತಿಯ ಮೌಲ್ಯವನ್ನು 4 ವರ್ಷಗಳ ಸರಾಸರಿ ಲಾಭದ $2\frac{1}{2}$ ವರ್ಷಗಳ ಖರಿದಿಗೆ ಸಮ ಎಂದು ಪರಿಗಣಿಸಿ:
2008-09 ₹ 12,000; 2009-10 ₹ 20,000; 2010-11 ₹ 13,000, 2011-12 ₹ 15,000.

b) ಹಿಂದಿನ ದಿನಾಂಕದ ಅಢಾವೆ ಪತ್ರಿಕೆದಿಂದ ನಿಧನ ಹೊಂದಿರುವ ದಿನಾಂಕದವರೆಗು ಅವರ ಪಾಲಿನ ಲಾಭವನ್ನು ಹಿಂದಿನ ವರ್ಷದ ಲಾಭವನ್ನು ಆಧರಿಸಿ ಕಂಡುಹಿಡಿಯಿರಿ.

c) ಬಂಡವಾಳದ ಮೇಲಿನ ಬಡ್ಡಿ ವಾರ್ಷಿಕ ಶೇ 12.

d) ಪುನರ್ ಮೌಲ್ಯಮಾಪನ ಖಾತೆಯ ಶಿಲ್ಕುನಲ್ಲಿ ಅವರ ಪಾಲು ₹5,000(ಜಮ)

e) ಕೇಶವನಿಗೆ ನೀಡಬೇಕಾಗಿರುವ ಹಣದಲ್ಲಿ ₹ 7,000 ತಕ್ಷಣ ವಾರಸುದಾರರಿಗೆ ನೀಡಬೇಕು ಮತ್ತು ಉಳಿದ ಹಣವನ್ನು ಅವರ ಸಾಲದ ಖಾತೆಗೆ ವರ್ಗಾಯಿಸಬೇಕು.

ಕೇಶವರವರ ಬಂಡವಾಳದ ಖಾತೆ ಮತ್ತು ಅವರ ಉತ್ತಾರಾಧಿಕಾರಿಗಳ ಸಾಲದ ಖಾತೆಯನ್ನು ತಯಾರಿಸಿ.

ಉತ್ತರ : ₹ 55, 300.

19. ನವಾಬ್, ಜಯರಾಮ್ ಮತ್ತು ಮಹಾವೀರ್ ರವರು ಪಾಲುದಾರರಾಗಿದ್ದು ಲಾಭ ನಷ್ಟಗಳನ್ನು 2:1:1 ಪ್ರಮಾಣದಲ್ಲಿ ಹಂಚಿಕೊಳ್ಳುತ್ತಿದ್ದರು. ದಿನಾಂಕ 31–03–2013 ಕ್ಕೆ ಅವರ ಅಢಾವೆ ಪತ್ರಿಕೆ ಈ ಕೆಳಗಿನಂತಿದೆ.

ಹೊಣೆಗಾರಿಕೆಗಳು	₹	₹	ಆಸ್ತಿಗಳು	₹	₹
ಸಾಹುಕಾರರು		25,000	ನಗದು		6,000
ಸಂಚಿತ ನಿಧಿ		20,000	ಸರಕು / ದಾಸ್ತಾನು		12,000
ಬಂಡವಾಳ :			ಬರತಕ್ಕ ಹುಂಡಿಗಳು		6,000
ನವಾಬ್	15,000		ಸಾಲಗಾರರು		15,000
ಜಯರಾಮ್	10,000		ಹೂಡಿಕೆಗಳು		15,000
ಮಹಾವೀರ್	10,000	35,000	ಕಟ್ಟಡ		26,000
		80,000			**80,000**

ದಿನಾಂಕ 01–07–2013 ರಂದು ಮಹಾವೀರ್ ರವರು ನಿಧನ ಹೊಂದಿರುತ್ತಾರೆ, ಪಾಲುದಾರಿಕೆಯ ಕರಾರು ಪತ್ರದ ಪ್ರಕಾರ ಪಾಲುದಾರನು ನಿಧನ ಹೊಂದಿದಾಗ ಅವರ ವಾರಸುದಾರರಿಗೆ ಈ ಕೆಳಗಿನವುಗಳನ್ನು ನೀಡಬೇಕಾಗಿರುತ್ತದೆ.

a) ಅವನ ಬಂಡವಾಳ ಹಿಂದಿನ ವರ್ಷದ ಆಢಾವೆ ಪತ್ರಿಕೆಯಂತೆ

b) ಅವರ ಪಾಲಿನ ಸಂಚಿತ ನಿಧಿ

c) ಪಾಲುದಾರನ ನಿಧನದ ದಿನಾಂಕದವರೆಗಿನ ಲಾಭದಲ್ಲಿನ ಪಾಲನ್ನು ಹಿಂದಿನ 3 ವರ್ಷಗಳ ಸರಾಸರಿ ಲಾಭದ ಆಧಾರದ ಮೇಲೆ ಲೆಕ್ಕ ಹಾಕುವುದು ಹಿಂದಿನ 3 ವರ್ಷಗಳ ಲಾಭ ಈ ಕೆಳಗಿನಂತಿದೆ.

2010-11-₹ 16,000; 2011-12- ₹ 16,000.2012-13 ₹ 15,520.

ನಿಧನ ಹೊಂದಿದ ದಿನಾಂಕದವರೆಗೆ ಮಹಾವೀರನು ಸ್ವಂತ ವೆಚ್ಚಕ್ಕೆ ಉಪಯೋಗಿಸಿದ ಹಣ ₹ 5000.

ಮಹಾವೀರ್ ರವರ ಬಂಡವಾಳ ಖಾತೆ ಮತ್ತು ಅವರ ವಾರಸುದಾರರ ಖಾತೆಯನ್ನು ತಯಾರಿಸಿ.

ಉತ್ತರ : ರೂ. 18,910.

20. ರೆಡ್ಡಿ, ರಮೇಶ್ ಮತ್ತು ಫಯಾಜ್ ಒಂದು ಸಂಸ್ಥೆಯಲ್ಲಿ ಪಾಲುದಾರರಾಗಿದ್ದು ಲಾಭ ನಷ್ಟಗಳನ್ನು 2:2:1 ಪ್ರಮಾಣದಲ್ಲಿ ಕ್ರಮವಾಗಿ ಹಂಚಿಕೊಳ್ಳುತ್ತಿದ್ದರು. ದಿನಾಂಕ 31–03–2013 ಕ್ಕೆ ಅವರ ಆಢಾವೆ ಪತ್ರಿಕೆ ಈ ಕೆಳಗಿನಂತಿದೆ.

ಹೊಣೆಗಾರಿಕೆಗಳು	₹	₹	ಆಸ್ತಿಗಳು	₹	₹
ಧಣಿಗಳು		40,000	ಬ್ಯಾಂಕಿನಲ್ಲಿ ನಗದು		30,000
ಕೊಡತಕ್ಕ ಹುಂಡಿಗಳು		10,000	ಬರತಕ್ಕ ಹುಂಡಿಗಳು		15,000
ಸಂಚಿತ ನಿಧಿ		20,000	ಋಣಿಗಳು		40,000
ಬಂಡವಾಳಗಳು :			ದಾಸ್ತಾನು		30,000
ರೆಡ್ಡಿ	50,000		ಪೀಠೋಪಕರಣಗಳು		10,000
ರಮೇಶ್	30,000		ಕಟ್ಟಡ		45,000
ಫಯಾಜ್	20,000	1,00,000			
		1,70,000			**1,70,000**

ದಿನಾಂಕ 31–07–2013ರಂದು ರಮೇಶ್ ನಿಧನರಾಗಿರುತ್ತಾರೆ. ಪಾಲುಗಾರಿಕೆ ಒಪ್ಪಂದವು ಈ ಕೆಳಗಿನವುಗಳನ್ನು ಒಳಗೊಂಡಿದೆ.

a) ನಿಧನ ಪಾಲುದಾರನು ಹಿಂದಿನ ಅಢಾವೆ ಪತ್ರಿಕೆಯಲ್ಲಿರುವ ಬಂಡವಾಳದ ಜೊತೆಗೆ ಸಂಚಿತ ನಿಧಿಯಲ್ಲಿ ಪಾಲನ್ನು ಪಡೆಯಲು ಅರ್ಹನಾಗಿರುತ್ತಾನೆ.

b) ನಿಧನ ದಿನಾಂಕದವರೆಗೆ ಅವರ ಪಾಲಿನ ಲಾಭ ಹಿಂದಿನ ವರ್ಷದ ಲಾಭವನ್ನು ಆಧರಿಸಿ ಕಂಡುಹಿಡಿಯಬೇಕು.

c) ಅವರ ಪಾಲಿನ ಕೀರ್ತಿಯ ಮೌಲ್ಯವನ್ನು 4 ವರ್ಷಗಳ ಸರಾಸರಿಯ 3 ವರ್ಷಗಳ ಖರೀದಿಯ ಆಧಾರದ ಮೇಲೆ ಕಂಡುಹಿಡಿಯಿರಿ. ಹಿಂದಿನ 4 ವರ್ಷಗಳ ಲಾಭ ಈ ಕೆಳಗಿನಂತಿದೆ.

2009-10 ₹ 50,000; 2010-11 ₹ 80,000; 2011-12 ₹ 40,000 ಮತ್ತು 2012-13 ₹ 30,000.

d) ಬಂಡವಾಳದ ಮೇಲಿನ ಬಡ್ಡಿ ವಾರ್ಷಿಕ ಶೇಕಡಾ 6.

e) ನಿಧನ ಹೊಂದಿರುವ ದಿನಾಂಕದವರೆಗೂ ರಮೇಶ್ ರವರು ತಮ್ಮ ಸ್ವಂತ ವೆಚ್ಚ ಉಪಯೋಗಿಸಿದ ಹಣ ₹ 3,000.

f) ಬದುಕಿರುವ ಪಾಲುದಾರರು ₹ 19,600 ರಮೇಶ್‌ರವರ ವಾರಸುದಾರರಿಗೆ ತಕ್ಷಣ ನೀಡಿ ಉಳಿದ ಹಣವನ್ನು ಅವರ ಸಾಲದ ಖಾತೆಗೆ ವರ್ಗಾಯಿಸಲು ಒಪ್ಪಿರುತ್ತಾರೆ.

ರಮೇಶ್ ಬಂಡವಾಳ ಖಾತೆ ಮತ್ತು ವಾರಸುದಾರರ ಖಾತೆಯನ್ನು ತೋರಿಸಿ.

ಉತ್ತರ : ರೂ. 80,000.

21. ಪ್ರಭಾಕರ್, ರಾಜಶೇಖರ್ ಮತ್ತು ವಸಂತ್ ಪಾಲುದಾರರಾಗಿದ್ದು ಲಾಭ ನಷ್ಟಗಳನ್ನು 5:3:2 ಅನುಪಾತದಲ್ಲಿ ಹಂಚಿಕೊಳ್ಳುತ್ತಿದ್ದರು ದಿನಾಂಕ 31–03–2013ಕ್ಕೆ ಅವರ ಅಢಾವೆ ಪತ್ರಿಕೆ ಈ ಕೆಳಗಿನಂತಿದೆ.

ಹೊಣೆಗಾರಿಕೆಗಳು	₹	₹	ಆಸ್ತಿಗಳು	₹	₹
ಧಣಿಗಳು		30,000	ನಗದು ಕೈಯಲ್ಲಿ		13,000
ಕೊಡತಕ್ಕ ಹುಂಡಿಗಳು		18,000	ನಗದು ಬ್ಯಾಂಕಿನಲ್ಲಿ		22,000
ಬಂಡವಾಳಗಳು :			ದಾಸ್ತಾನು		27,500
ಪ್ರಭಾಕರ್	50,000		ಬರತಕ್ಕ ಹುಂಡಿಗಳು		12,500
ರಾಜಶೇಖರ್	30,000		ಋಣಿಗಳು		25,000
ವಸಂತ್	20,000	1,00,000	ಪೀಠೋಪಕರಣ		30,000
ಲಾಭ ನಷ್ಟಗಳ ಖಾತೆ		12,000	ಉಪಕರಣಗಳು		30,000
		1,60,000			**1,60,000**

ದಿನಾಂಕ 30–09–2013 ರಂದು ವಸಂತ್ ನಿಧನರಾದರು ಮತ್ತು ಅವರ ವಾರಸುದಾರರು ಈ ಕೆಳಗಿನವುಗಳನ್ನು ಪಡಿಯಲು ಅರ್ಹರಾಗಿರುತ್ತಾರೆ.

a) ಹಿಂದಿನ ಅಢಾವೆ ಪತ್ರಿಕೆಯ ಪ್ರಕಾರ ಅವರ ಬಂಡವಾಳ

b) ಲಾಭ ನಷ್ಟ ಖಾತೆಯಲ್ಲಿ ಅವರ ಪಾಲು

c) ಅವನ ಭಾಗದ ಕೀರ್ತಿ ಮೌಲ್ಯ ಸಂಸ್ಥೆಯ ಕೀರ್ತಿಮೌಲ್ಯವನ್ನು ಹಿಂದಿನ ಮೂರು ವರ್ಷಗಳ ಸರಾಸರಿ ಲಾಭದ 2 ವರ್ಷದ ಖರೀದಿಗೆ ಸಮ ಎಂದು ನಿರ್ಧರಿಸಬೇಕು. ಲಾಭಗಳು ಹೀಗಿವೆ:

2010-11 ₹ 15,000; 2011-12 ₹ 18,000 ಮತ್ತು 2012–13 ₹ 12,000.

d) ಆಸ್ತಿಗಳು ಮತ್ತು ಹೊಣೆಗಾರಿಕೆಗಳ ಪುನರ್ ಮೌಲ್ಯ ಮಾಪನ ಲಾಭ ನಷ್ಟದಲ್ಲಿ ಪಾಲು. ಪುನರ್ ಮೌಲ್ಯ ಮಾಪನದ ಒಟ್ಟು ನಷ್ಟದ ಮೊತ್ತ ₹ 6,500.

e) ವಸಂತ್ ರವರು ವಾರ್ಷಿಕ ದಲ್ಲಾಳಿ ₹ 7,000 ಗೆ ಅರ್ಹರಾಗಿರುತ್ತಾರೆ.

ವಸಂತ್‌ರವರ ವಾರಸುದಾರರ ಖಾತೆಯನ್ನು ತಯಾರಿಸಿ.

ಉತ್ತರ : ರೂ. 30,600.

22. ಮುರಳಿ, ನಾಗು ಮತ್ತು ರಾಮು ಒಂದು ಸಂಸ್ಥೆಯಲ್ಲಿ ಪಾಲುದಾರರಾಗಿದ್ದು ಲಾಭ ನಷ್ಟಗಳನ್ನು 2:2:1 ಪ್ರಮಾಣದಲ್ಲಿ ಹಂಚಿಕೊಳ್ಳುತ್ತಿದರು. ದಿನಾಂಕ 31–03–2014ಕ್ಕೆ ಅವರ ಅಢಾವೆ ಪತ್ರಿಕೆ ಈ ಕೆಳಗಿನಂತಿದೆ.

ಹೊಣೆಗಾರಿಕೆಗಳು	₹	₹	ಆಸ್ತಿಗಳು	₹	₹
ಕೊಡತಕ್ಕ ಹುಂಡಿಗಳು		16,000	ನಗದು ಕೈಯಲ್ಲಿ		15,000
ಸಾಹುಕಾರರು		19,000	ವ್ಯವಾಪರದಲ್ಲಿ ದಾಸ್ತಾನು		10,000
ಬಂಡವಾಳ :			ಬರತಕ್ಕ ಹುಂಡಿಗಳು		25,000
ಮುರಳಿ	40,000		ಗಣಕ ಯಂತ್ರ		30,000
ನಾಗು	35,000		ಪೀಠೋಪಕರಣ		15,000
ರಾಮು	20,000		ಯಂತ್ರೋಪಕರಣ		25,000
		95,000	ಲಾಭ ನಷ್ಟದ ಖಾತೆ		10,000
		1,30,000			**1,30,000**

30–06–2014 ರಂದು ರಾಮು ನಿಧನರಾದರು ಅವರ ವಾರಸುದಾರರು ಈ ಕೆಳಗಿನವುಗಳನ್ನು ಪಡಿಯಲು ಅರ್ಹರಾಗಿರುತ್ತಾರೆ.

a) ಮರಣದ ದಿನಾಂಕದ ಅದರ ಬಂಡವಾಳ

b) ಲಾಭ ನಷ್ಟದ ಖಾತೆಯಲ್ಲಿ ಅವರ ಪಾಲು

c) ಬಂಡವಾಳದ ಮೇಲೆ ಬಡ್ಡಿ ವಾರ್ಷಿಕ ಶೇಕಡ 10.

d) ಒಂದು ತಿಂಗಳಿಗೆ ₹ 800 ರಂತೆ ವೇತನ.

e) ನಿಧನದ ದಿನಾಂಕದವರೆಗೂ ಅವರ ಲಾಭದ ಪಾಲು. ಚಾಲ್ತಿ ವರ್ಷದ ಸಂಸ್ಥೆಯ ಅಂದಾಜು ಲಾಭ ₹ 20,000.

ರಾಮು ರವರ ಉತ್ತರಾಧಿಕಾರಿ ಖಾತೆಯನ್ನು ತಯಾರಿಸಿ.

ಉತ್ತರ : ರೂ. 21,900.

23. ಇಂದ್ರ, ಚಂದ್ರ ಮತ್ತು ರುದ್ರ ಒಂದು ಸಂಸ್ಥೆಯಲ್ಲಿ ಪಾಲುದಾರರಾಗಿದ್ದು ಲಾಭ ನಷ್ಟಗಳನ್ನು 2:1:2 ಅನುಪಾತದಲ್ಲಿ ಹಂಚಿಕೊಳ್ಳುತ್ತಿದ್ದರು. ದಿನಾಂಕ 31–03–2013ಕ್ಕೆ ಅವರ ಅಢಾವೆ ಪತ್ರಿಕೆ ಈ ಕೆಳಗೆ ನೀಡಿರುತ್ತಾರೆ.

ಹೊಣೆಗಾರಿಕೆಗಳು	₹	₹	ಆಸ್ತಿಗಳು	₹	₹
ಧಣಿಗಳು		10,000	ಬ್ಯಾಂಕಿನಲ್ಲಿ ನಗದು		24,000
ಬಂಡವಾಳ :			ಋಣಿಗಳು		48,000
ಇಂದ್ರ	60,000		ದಾಸ್ತಾನು		32,000
ಚಂದ್ರ	40,000		ಸ್ಥಾವರ ಮತ್ತು ಯಂತ್ರ		57,000
ರುದ್ರ	50,000	1,50,000	ಚಂದ್ರ ರವರ ಚಾಲ್ತಿ ಖಾತೆ		14,000
ಚಾಲ್ತಿ ಖಾತೆಗಳು :					
ಇಂದ್ರ	9,000				
ರುದ್ರ	6,000	15,000			
		1,75,000			**1,75,000**

ಚಂದ್ರ ರವರು ದಿನಾಂಕ 01–07–2013 ರಂದು ನಿಧನ ಹೊಂದಿದರು. ಪಾಲುಗಾರಿಕೆಯ ಒಪ್ಪಂದಕ್ಕನುಗುಣವಾಗಿ, ಅವರ ವಾರಸುದಾರರಿಗೆ ಸಲ್ಲಿಸಬೇಕಾದುದು ಈ ಕೆಳಗಿನಂತಿದೆ.

a) ಅವರ ಬಂಡವಾಳ ಮತ್ತು ಚಾಲ್ತಿ ಖಾತೆಯ ಶಿಲ್ಕು
b) ಬಂಡವಾಳದ ಬಡ್ಡಿ ವಾರ್ಷಿಕ ಶೇ. 6
c) ಚಂದ್ರರವರು ಒಂದು ತಿಂಗಳಿಗೆ ₹ 600 ರಂತೆ ವೇತನ ಪಡೆಯುತ್ತಿದರು.
d) ಪಾಲುದಾರನ ನಿಧನದ ದಿನಾಂಕದವರೆಗಿನ ಲಾಭದಲ್ಲಿನ ಪಾಲನ್ನು ಹಿಂದಿನ 2 ವರ್ಷಗಳ ಸರಾಸರಿ ಲಾಭದ ಆಧಾರದ ಮೇಲೆ ಲೆಕ್ಕ ಹಾಕುವುದು.
e) ಕೀರ್ತಿ ಮೌಲ್ಯದ ಪಾಲನ್ನು 3 ವರ್ಷಗಳ ಸರಾಸರಿ ಲಾಭದ 2 ವರ್ಷಗಳ ಖರೀದಿಯ ಆಧಾರದ ಮೇಲೆ ಕಂಡುಹಿಡಿಯಿರಿ.

ಲಾಭಗಳು : 2010-11 ರೂ. 60,000, 2011-12 ರೂ. 50,000 ಮತ್ತು 2012-13 ರೂ. 40,000.

ಚಂದ್ರ ರವರ ಬಂಡವಾಳ ಖಾತೆಯನ್ನು ತಯಾರಿಸಿ ಅವರ ವಾರಸುದಾರರಿಗೆ ನೀಡಬೇಕಾದ ಮೊತ್ತವನ್ನು ಕಂಡುಹಿಡಿಯಿರಿ.

ಉತ್ತರ : ರೂ. 50, 650.

24. ಸಿರಾಜ್, ರೆಹಮಾನ್ ಮತ್ತು ಮಲ್ಲಿಕ್ ಪಾಲುದಾರರಾಗಿದ್ದು ಲಾಭ ನಷ್ಟಗಳನ್ನು 2:2:1 ಪ್ರಮಾಣದಲ್ಲಿ ಹಂಚಿಕೊಳ್ಳುತ್ತಿದ್ದರು. ದಿನಾಂಕ 31–03–2013 ರಂದು ಸಂಸ್ಥೆಯ ಅಢಾವೆ ಪತ್ರಿಕೆ ಈ ಕೆಳಗಿನಂತಿದೆ.

ಹೊಣೆಗಾರಿಕೆಗಳು	₹	₹	ಆಸ್ತಿಗಳು	₹	₹
ಸಾಹುಕಾರರು		9,000	ಬ್ಯಾಂಕಿನಲ್ಲಿ ನಗದು		12,000
ಕೊಡತಕ್ಕ ಹುಂಡಿಗಳು		6,000	ದಾಸ್ತಾನು		8,000
			ಸಾಲಗಾರರು		20,000
ಗೋಪಾಲ್ ರವರ ಸಾಲ		15,000	ಬರತಕ್ಕ ಹುಂಡಿಗಳು		5,000
ಸಾಮಾನ್ಯ ನಿಧಿ		5,000	ಪೀಠೋಪಕರಣಗಳು		30,000
ಬಂಡವಾಳಗಳು :			ಕಟ್ಟಡಗಳು		50,000
ಸಿರಾಜ್	40,000				
ರಹಮಾನ್	35,000				
ಮಲ್ಲಿಕ್	15,000	90,000			
		1,25,000			**1,25,000**

ದಿನಾಂಕ 01–10–2013 ರಂದು ಮಲ್ಲಿಕ್ ನಿಧನರಾದರು. ಅವರ ವಾರಸುದಾರರು ಈ ಕೆಳಗಿನವುಗಳನ್ನು ಪಡಿಯಲು ಅರ್ಹರಾಗಿರುತ್ತಾರೆ.

1. ನಿಧನ ದಿನಾಂಕದ ಅವರ ಬಂಡವಾಳ
2. ಸಮಾನ್ಯ ನಿಧಿಯಲ್ಲಿ ಅವರ ಪಾಲು
3. ಅವರ ಪಾಲಿನ ಕೀರ್ತಿ ಮೌಲ್ಯ ಸಂಸ್ಥೆಯ ಕೀರ್ತಿ ಮೌಲ್ಯದ ಮೊತ್ತ ₹ 50,000.
4. ಬಂಡವಾಳದ ಮೇಲಿನ ಬಡ್ಡಿ ವಾರ್ಷಿಕ ಶೇ. 12.
5. ನಿಧನ ದಿನಾಂಕದ ವರಗಿನ ಲಾಭವನ್ನು ಹಿಂದಿನ ವರ್ಷದ ಲಾಭದ ಆಧಾರದ ಮೇಲೆ ಲೆಕ್ಕಹಾಕಿರಿ. ಹಿಂದಿನ ವರ್ಷದ ಲಾಭ ₹ 20,000.
6. ನಿಧನದ ದಿನಾಂಕದವರೆಗೂ ದಲ್ಲಾಳಿ ವರ್ಷದ ದಲ್ಲಾಳಿ ₹ 6,000.

ಮಲ್ಲಿಕ್ ರವರ ಬಂಡವಾಳ ಖಾತೆಯನ್ನು ತಯಾರಿಸಿ ಅವರ ವಾರಸುದಾರರಿಗೆ ಪಾವತಿಸಬೇಕಾದ ಮೊತ್ತವನ್ನು ಕಂಡುಹಿಡಿಯಿರಿ.

ಉತ್ತರ : ರೂ. 31,900.

25. ಅಗ್ನಿ, ಆಕಾಶ್, ಮತ್ತು ಪೃಥ್ವಿ ಪಾಲುದರರಾಗಿದ್ದು ಲಾಭ ನಷ್ಟಗಳನ್ನು ಅವರ ಬಂಡವಾಳದ ಅನುಪಾತದಲ್ಲಿ ಹಂಚಿಕೊಳ್ಳುತ್ತಿದರು. ದಿನಾಂಕ 31–3–2013ಕ್ಕೆ ಅವರ ಅಢಾವೆ ಪತ್ರಿಕೆ ಈ ಕೆಳಗಿನಂತ್ತಿದೆ.

ಹೊಣೆಗಾರಿಕೆಗಳು	₹	₹	ಆಸ್ತಿಗಳು	₹	₹
ಧಣಿಗಳು		15,000	ಬ್ಯಾಂಕಿನಲ್ಲಿ ನಗದು		20,000
ಕೊಡತಕ್ಕ ಹುಂಡಿಗಳು		10,000	ಋಣಿಗಳು		15,000
ಮೀಸಲು		15,000	ದಾಸ್ತಾನು		20,000
ಬಂಡವಾಳಗಳು :			ಪೀಠೋಪಕರಣ		15,000
ಅಗ್ನಿ	40,000		ಹೂಡಿಕೆಗಳು		25,000
ಆಕಾಶ್	30,000		ಕಟ್ಟಡಗಳು		30,000
ಪೃಥ್ವಿ	30,000	1,00,000	ಕೀರ್ತಿಮೌಲ್ಯ		15,000
		1,40,000			**1,40,000**

ದಿನಾಂಕ 31–12–2013ರಂದು ಅಗ್ನಿ ನಿಧನರಾದರು. ಪಾಲುಗಾರಿಕೆಯ ಒಪ್ಪಂದದಂತೆ ಈ ಕೆಳಗಿನವುಗಳನ್ನು ಪಡೆಯುವರು.

a) ಹಿಂದಿನ ಅಢಾವೆ ಪತ್ರಿಕೆಯಲ್ಲಿನ ಅವರ ಬಂಡವಾಳ
b) ಮೀಸಲುನಲ್ಲಿ ಅವರ ಪಾಲು
c) ನಿಧನ ಹೊಂದಿದ ದಿನಾಂಕದ ವರೆಗೂ ಲಾಭದ ಪಾಲನ್ನು ಹಿಂದಿನ ವರ್ಷದ ಲಾಭದ ಆಧಾರದ ಮೇಲೆ ಲೆಕ್ಕ ಹಾಕಿ. 2013ರ ಲಾಭ ₹ 22,000.
d) ಜಂಟಿ ವಿಮಾ ಪತ್ರದಲ್ಲಿ ಪಾಲು. ಜಂಟಿ ವಿಮಾ ಪತ್ರದ ಮೌಲ್ಯ ₹ 50,000.
e) ಬಂಡವಾಳದ ಮೇಲಿನ ಬಡ್ಡಿ ವಾರ್ಷಿಕ ಶೇ 6. ಸ್ವಂತ ವೆಚ್ಚದ ಮೇಲೆ ಬಡ್ಡಿ ವಾರ್ಷಿಕ ಶೇ. 8.
f) ದಿನಾಂಕ 30–06–2013 ರಂದು ಅಗ್ನಿರವರು ಬಳಸಿದ ಸ್ವಂತ ವೆಚ್ಚದ ಹಣ ₹ 8,000.

ಅಗ್ನಿ ವಾರಸುದಾರರಿಗೆ ಪಾವತಿಸಬೇಕಾದ ಮೊತ್ತವನ್ನು ಕಂಡುಹಿಡಿಯಿರಿ.

ಉತ್ತರ : ರೂ. 66,080.

ವಿಭಾಗ – ಸಿ

I. 14 ಅಂಕಗಳ ಪ್ರಶ್ನೆಗಳು :

1. ಹರಿ, ಗಿರಿ ಮತ್ತು ಸೂರಿ ಪಾಲುದಾರರಾಗಿದ್ದು ಲಾಭ ನಷ್ಟಗಳನ್ನು 5:2:1 ಅನುಪಾತದಲ್ಲಿ ಕ್ರಮವಾಗಿ ಹಂಚಿಕೊಳ್ಳುತ್ತಿದ್ದರು. ದಿನಾಂಕ 31–03–2013ಕ್ಕೆ ಅವರ ಅಢಾವೆ ಪತ್ರಿಕೆ ಈ ಕೆಳಗಿನಂತಿದೆ.

ಜವಾಬ್ದಾರಿಗಳು	₹	₹	ಆಸ್ತಿಗಳು	₹	₹
ಧಣಿಗಳು		15,000	ಬ್ಯಾಂಕಿನಲ್ಲಿ ನಗದು		5,000
ಕೊಡತಕ್ಕ ಹುಂಡಿಗಳು		9,000	ಬರತಕ್ಕ ಹುಂಡಿಗಳು		12,600
ಮೀಸಲು ನಿಧಿ		16,000	ಋಣಿಗಳು	30,000	
ಬಂಡವಾಳಗಳು :			– ಕಾಯ್ದಿಟ್ಟ ನಿಧಿ	1,600	28,400
ಹರಿ	50,000		ಸರಕು		20,000
ಗಿರಿ	30,000		ಯಂತ್ರೋಪಕರಣಗಳು		50,000
ಸೂರಿ	10,000	90,000	ಮೋಟಾರು ಕಾರು		14,000
		1,30,000			**1,30,000**

ಸೂರಿ ನಿವೃತ್ತನಾಗುತ್ತಾನೆ. ಈ ಕೆಳಗಿನ ಹೊಂದಾಣಿಕೆಗಳನ್ನು ಮಾಡಲಾಗುವುದು.

1) ಸರಕಿನ ಮೌಲ್ಯವನ್ನು ಶೇಕಡ 20ರಷ್ಟು ಹೆಚ್ಚಿಸಲಾಯಿತು.
2) ಋಣಿಗಳ ಮೇಲೆ ಸಂಶಯಾತ್ಮಕ ಸಾಲ ಶೇಕಡ 10 ರಷ್ಟು ಕಾಯ್ದಿರಿಸಿ.
3) ಯಂತ್ರ ಮತ್ತು ಮೋಟಾರು ಕಾರಿನ ಮೌಲ್ಯದ ಮೇಲೆ ಕ್ರಮವಾಗಿ ಶೇ. 5 ಮತ್ತು ಶೇ. 10 ರಷ್ಟು ಸವಕಳಿಗಳನ್ನು ತೆಗೆಯಿರಿ.
4) ವಿದ್ಯುತ್ ಚಾರಿಗಳ ಬಾಕಿ ₹ 1,100.
5) ಸಂಸ್ಥೆಯ ಕೀರ್ತಿ ಮೌಲ್ಯವನ್ನು ₹ 35,000 ರಷ್ಟು ಸೃಷ್ಟಿಸಿ ಮತ್ತು ಸೂರಿಯವರ ನಿವೃತ್ತಿಯ ನಂತರ ತಕ್ಷಣವೇ ತೆಗೆದು ಹಾಕಲಾಯಿತು.

ತಯಾರಿಸಿ :

a) ಪುನರ್ ಮೌಲ್ಯಮಾಪನದ ಖಾತೆ

b) ಪಾಲುದಾರರ ಬಂಡವಾಳದ ಖಾತೆಗಳು

c) ಹೊಸ ಸಂಸ್ಥೆಯ ಅಢಾವೆ ಪತ್ರಿಕೆ

ಉತ್ತರ : ಪುನರ್ ಮೌಲ್ಯಮಾಪನದ ನಷ್ಟ ₹ 2,400, ಸೂರಿ ಸಾಲದ ಖಾತೆ ₹ 16,075, ಬಂಡವಾಳ ಖಾತೆಗಳ ಶಿಲ್ಕು : ಹರಿ ₹ 55,375, ಗಿರಿ ₹ 32,150, ಅಢಾವೆ ಪತ್ರಿಕೆಯ ಮೊತ್ತ : ₹ 1,28,700, ಹೊಸ ಲಾಭ ಹಂಚಿಕೆಯ ಅನುಪಾತ 5:2 (5:2:(1))

2. ತಂದೆ, ತಾಯಿ ಮತ್ತು ಮಗ ಪಾಲುದಾರರಾಗಿದ್ದು ಲಾಭ ನಷ್ಟಗಳನ್ನು 2:2:1 ಅನುಪಾತದಲ್ಲಿ ಹಂಚಿಕೊಳ್ಳುತ್ತಿದ್ದರು. ದಿನಾಂಕ 31–03–2014 ಕ್ಕೆ ಅವರ ಅಢಾವೆ ಪತ್ರಿಕೆ ಈ ಕೆಳಗಿನಂತಿದೆ.

ಹೊಣೆಗಾರಿಕೆಗಳು	₹	₹	ಆಸ್ತಿಗಳು	₹	₹
ಬಂಡವಾಳಗಳು			ಬ್ಯಾಂಕು		15,200
ತಂದೆ	45,000		ಪೀಠೋಪಕರಣಗಳು		8,000
ತಾಯಿ	35,000		ಸ್ಥಾವರ		36,000
ಮಗ	20,000	1,00,000	ಸಾಲಗಾರರು		24,000
ಸಾಹುಕಾರರು		17,000	ಸರಕುಗಳು		22,000
ಕೊಡತಕ್ಕ ಹುಂಡಿಗಳು		13,000	ಬರತಕ್ಕ ಹುಂಡಿಗಳು		6,000
ಬಾಕಿ ಖರ್ಚು		1,200	ಕಟ್ಟಡ		40,000
ಲಾಭ ನಷ್ಟ ಖಾತೆ		20,000			
		1,51,200			**1,51,200**

ಅನಾರೋಗ್ಯದಿಂದ ತಂದೆಯವರು ನಿವೃತ್ತನಾದರು, ಮತ್ತು ಈ ಕೆಳಕಂಡ ಹೊಂದಾಣಿಕೆಗಳನ್ನು ಮಾಡಲಾಯಿತು.

1) ಸಂಸ್ಥೆಯ ಕೀರ್ತಿ ಮೌಲ್ಯ ₹ 30,000 ಯಂದು ಮೌಲ್ಯ ಮಾಡಲಾಯಿತು. ತಂದೆ ಪಾಲಿನ ಕೀರ್ತಿಮೌಲ್ಯವನ್ನು ಸೃಷ್ಟಿಸಿ, ಕೀತಿಮೌಲ್ಯ ಖಾತೆಯನ್ನು ತೆರಿಯದೇ ತೆಗೆದು ಹಾಕಲಾಯಿತು.

2) ಪೀಠೋಪಕರಣ ಮತ್ತು ಸ್ಥಾವರ ಒಂದೊಂದರ ಮೇಲೆ ಶೇ 10ರಷ್ಟು ಸವಕಳಿಯನ್ನು ತೆಗೆಯಿರಿ.

3) ಕಟ್ಟಡದ ಮೌಲ್ಯ ಶೇ. 20ರಷ್ಟು ಹೆಚ್ಚಿಸಲಾಯಿತು ಮತ್ತು ಸರಕುಗಳ ಮೌಲ್ಯ ₹24,000.

4) ಸಾಲಗಾರರ ಮೇಲೆ ಶೇ. 5ರಷ್ಟು ಕರಡು ಸಲ ಮೀಸಲು ತೆಗೆದಿರಿಸಿ.

5) ಸಾಹುಕಾರರ ಮೊತ್ತದಲ್ಲಿ ಕೂಡಿದ ₹ 600 ರಷ್ಟು ಹೊಣೆ ಸಂದಾಯ ಮಾಡಲಬೇಕಾಗಿಲ್ಲ, ಅದನ್ನು ತೆಗೆದುಹಾಕಬೇಕು.

6) ಬ್ಯಾಂಕು ಮೀರೆಳತ ಮೂಲಕ ನಿವೃತ್ತ ಪಾಲುದಾರನಿಗೆ ಚುಕ್ತಾ ಮಾಡಬೇಕು.

ತಯಾರಿಸಿ :

ಎ) ಪುನರ್ ಮೌಲ್ಯಮಾಪನದ ಖಾತೆ

ಬಿ) ಪಾಲುದಾರರ ಬಂಡವಾಲ ಖಾತೆಗಳು

ಸಿ) ಮುಂದುವರೆದ ಪಾಲುದಾರರ ಅಢಾವೇ ಪತ್ರಿಕೆ.

* **ಯಾವಾಗ ಬ್ಯಾಂಕು ಖಾತೆ ಜಮಾ ಶಿಲ್ಕನ್ನು ತೋರುತ್ತದಿಯೋ ಅವಾಗ ಅದು ಬ್ಯಾಂಕು ಮೀರೆಳತ ಎಂದು ಪರಿಗಣಿಸಬೇಕು.**

ಉತ್ತರ : ಪುನರ್ ಮೌಲ್ಯಮಾಪನದ ಮೌಲ್ಯ ರೂ.5,000, ಬ್ಯಾಂಕು ಮೀರೆಳತದ ಖಾತೆ ರೂ. 51,800, ಬಂಡವಾಳ ಖಾತೆಗಳ ಶಿಲ್ಕು : ತಾಯಿ ರೂ. 37,000, ಮಗ ರೂ. 21,000, ಅಢಾವೇ ಪತ್ರಿಕೆಯ ಮೊತ್ತ ರೂ. 1,40,400/–.

3. ವನಜ, ಗಿರಿಜ ಮತ್ತು ಜಲಜ ಪಾಲುದಾರರಾಗಿದ್ದು ಲಾಭನಷ್ಟಗಳನ್ನು 3:2:1 ಅನುಪಾತದಲ್ಲಿ ಹಂಚಿಕೊಳ್ಳುವರು. ದಿನಾಂಕ 31–03–2014 ಕ್ಕೆ ಅವರ ಅಢಾವೆ ಪತ್ರಿಕೆ ಈ ಕೆಳಗಿನಂತಿದೆ.

ಜವಾಬ್ದಾರಿಗಳು	₹	₹	ಆಸ್ತಿಗಳು	₹	₹
ಧನಿಗಳು		32,000	ಕೈಯಲ್ಲಿ ನಗದು		24,000
ಕೊಡತಕ್ಕ ಹುಂಡಿಗಳು		24,000	ಬರತಕ್ಕ ಹುಂಡಿಗಳು		22,000
ಸಾಮಾನ್ಯ ಮೀಸಲು		36,000	ಋಣಿಗಳು	42,000	
ಬಂಡವಾಳಗಳು :			ಕಾಯ್ದಿಟ್ಟ ಸಾಲ	2,000	40,000
ವನಜ	70,000		ಸರಕುಗಳು		38,000
ಗಿರಿಜ	50,000		ಪೀಠೋಪಕರಣ		24,000
ಜಲಜ	30,000	1,50,000	ಯಂತ್ರೋಪಕರಣ		40,000
ಲಾಭ ನಷ್ಟದ ಖಾತೆ		6,000	ಕಟ್ಟಡ		60,000
		2,48,000			**2,48,000**

ಮನೆ ಬದಲಾಯಿಸಿದ ಕಾರಣ ಗಿರಿಜ ರವರು ನಿವೃತ್ತರಾದರು, ಮತ್ತು ಕೆಳಕಂಡ ಹೊಂದಾಣಿಕೆಗಳನ್ನು ಮಾಡಲಾಯಿತು.

1) ಸಂಸ್ಥೆಯ ಕೀರ್ತಿಮೌಲ್ಯ ₹ 30,000 ಯಂದು ಮೌಲ್ಯ ಮಾಡಲಾಯಿತು. ಅದನ್ನು ವ್ಯವಹಾರದಲ್ಲೇ ಉಳಿಸಿಕೊಳ್ಳಲಾಯಿತು.

2) ಋಣಿಗಳ ಕಾಯ್ದಿಟ್ಟ ನಿಧಿಯನ್ನು ₹ 1,600 ರಷ್ಟು ಹೆಚ್ಚುಮಾಡಿ.

3) ಕಟ್ಟಡ ಮೌಲ್ಯಮಾಡಿದಾಗ ₹ 62,000 ಮತ್ತು ಸರಕುಗಳನ್ನು ಮರುಮೌಲ್ಯ ಮಾಡಿದಾಗ ₹ 36,500.

4) ಯಂತ್ರೋಪಕರಣದ ಮೇಲೆ ಶೇ. 10 ರಷ್ಟು ಸವಕಳಿಯನ್ನು ತೆಗೆಯಿರಿ ಮತ್ತು ಪೀಠೋಪಕರಣದ ಮೌಲ್ಯ ₹ 22,700.

5) ಪುಸ್ತಕಗಳಲ್ಲಿ ನಮೂದಿಸಿದ ಹೊಡಿಕೆಯ ಮೊತ್ತ ₹ 1,000 ಖಾತೆಗೆ ತೆಗೆದು ಕೊಳ್ಳುವುದು.

6) ನಿವೃತ್ತಿಯ ನಂತರ ₹ 20,000 ಗಳನ್ನು ಗಿರಿಜರವರಿಗೆ ತಕ್ಷಣ ಪಾವತಿಸಬೇಕು ಮತ್ತು ಉಳಿದ ಶಿಲ್ಕುನ್ನು ಸಾಲದ ಖಾತೆಗೆ ವರ್ಗಾಯಿಸಬೇಕು.

ತಯಾರಿಸಿ :

ಎ) ಪುನರ್ ಮೌಲ್ಯಮಾಪನದ ಖಾತೆ

ಬಿ) ಪಾಲುದಾರರ ಬಂಡವಾಲ ಖಾತೆಗಳು

ಸಿ) ಹೊಸ ಸಂಸ್ಥೆಯ ಅಢಾನೇ ಪತ್ರಿಕೆ.

ಉತ್ತರ : ಪುನರ್ ಮೌಲ್ಯಮಾಪನದ ನಷ್ಟ ರೂ. 5,400, ಗಿರಿಜ ಸಾಲದ ಖಾತೆ ರೂ. 52,200 ಬಂಡವಾಳ ಖಾತೆಗಳ ಶಿಲ್ಕು : ವನಜ ರೂ. 1,03,300 ಜಲಜ ರೂ. 41,100 ಅಢಾನೇ ಪತ್ರಿಕೆ ಒಟ್ಟು ರೂ. 2,52,600.

4. ದಿನಾಂಕ 31–03–2014 ಕ್ಕೆ ರಮೇಶ್, ಮಹೇಶ್ ಮತ್ತು ಸುರೇಶ್ ರವರ ಅಢಾವೇ ಪತ್ರಿಕೆ ಈ ಕೆಳಗಿನಂತ್ತಿದೆ.

ಹೊಣೆಗಾರಿಕೆಗಳು	₹	₹	ಆಸ್ತಿಗಳು	₹	₹
ಧನಿಗಳು		30,000	ನಗದು		5,500
ಕೊಡತಕ್ಕ ಹುಂಡಿಗಳು		8,000	ಪೀಠೋಪಕರಣಗಳು		10,000
ಬ್ಯಾಂಕು ಸಾಲ		14,000	ಸರಕುಗಳು		16,000
ಬಂಡವಾಳಗಳು :			ಋಣಿಗಳು	28,000	
ರಮೇಶ್	25,000		–ಕಾಯ್ದಿಟ್ಟ ಅನುಮಾನಸ್ಪದ ಸಾಲ	1,500	26,500
ಮಹೇಶ್	20,000		ಸ್ಥಾವರ ಮತ್ತು ಯಂತ್ರ		25,000
ಸುರೇಶ್	15,000	60,000	ಕಟ್ಟಡಗಳು		35,000
			ಲಾಭನಷ್ಟ ಖಾತೆ		6,000
ಮೀಸಲು ನಿಧಿ		12,000			
		1,24,000			**1,24,000**

ಸುರೇಶ್ ವ್ಯವಹಾರದಿಂದ ನಿವೃತ್ತನಾದರು ಮತ್ತು ಈ ಕೆಳಕಂಡ ಹೊಂದಾಣಿಕೆಗಳನ್ನು ಮಾಡಬೇಕು.

1) ಯಂತ್ರಗಳ ಮೇಲೆ ಶೇ. 5 ರಷ್ಟು ಮತ್ತು ಸರಕುಗಳ ಮೇಲೆ ಶೇ. 10 ರಷ್ಟು ಸವಕಳಿಯನ್ನು ತೆಗೆಯಿರಿ.
2) ಕಟ್ಟಡದ ಮೌಲ್ಯವನ್ನು ಶೇ. 20ರಷ್ಟು ಹೆಚ್ಚಿಸಿ ಮತ್ತು ಪೀಠೋಪಕರಣದ ಮೌಲ್ಯ ₹ 12,500.
3) ಕಾಯ್ದಿಟ್ಟ ಕರಡು ಸಾಲವನ್ನು ₹ 1750ಗೆ ಹೆಚ್ಚುಮಾಡಿ.
4) ಬ್ಯಾಂಕು ಸಾಲದ ಬಡ್ಡಿ ಶೇ. 10ರಷ್ಟು 6 ತಿಂಗಳಿಗೆ ಬಾಕಿ ಇರುತ್ತದೆ.
5) ಸುರೇಶ್ ಪಾಲಿನ ಕೀರ್ತಿಮೌಲ್ಯ ₹ 15,000 ರಷ್ಟು ಸೃಷ್ಟಿಸಿ ಮತ್ತು ತಕ್ಷಣವೇ ತೆಗೆದುಹಾಕಿ.
6) ನಿವೃತ್ತ ಪಾಲುದಾರನಿಗೆ ₹ 3900 ತಕ್ಷಣ ಪಾವತಿಸಿ, ಮತ್ತು ಉಳಿದ ಶಿಲ್ಕನ್ನು ವರ್ಷದ ಶೇ. 6 ರಷ್ಟು ಬಡ್ಡಿಯಂತೆ ವರ್ಷದ ಮೂರು ಸಮ ಕಂತುಗಳಲ್ಲಿ ಪಾವತಿಸುವುದು.

ತಯಾರಿಸಿ :

ಎ) ಪುನರ್ ಮೌಲ್ಯಮಾಪನದ ಖಾತೆ ಬಿ) ಪಾಲುದಾರರ ಬಂಡವಾಲ ಖಾತೆಗಳು

ಸಿ) ಅಢಾನೇ ಪತ್ರಿಕೆ ಡಿ) ಸುರೇಶ್ ಸಾಲದ ಖಾತೆ

ಉತ್ತರ : ಪುನರ್ ಮೌಲ್ಯಮಾಪನದ ಲಾಭ ರೂ. 5700, ಸುರೇಶ್ ಸಾಲದ ಖಾತೆ ರೂ. 30,000, ಬಂಡವಾಳ ಖಾತೆಗಳ ಶಿಲ್ಕುಗಳು : ಮಹೇಶ್ ರೂ. 16,400, ಹಮೇಶ್ ರೂ. 21,400, ಅಢಾನೇ ಪತ್ರಿಕೆ ಒಟ್ಟು ರೂ. 1,20,500.

5. ಉದಯ, ಸುವರ್ಣ ಮತ್ತು ಕಸ್ತೂರಿ ಪಾಲುದಾರರಾಗಿದ್ದು ಲಾಭ ನಷ್ಟಗಳನ್ನು ಅವರ ಬಂಡವಾಳದ ಅನುಪಾತದಲ್ಲಿ ಹಂಚಿಕೊಳ್ಳುವರು. ದಿನಾಂಕ 31–03–2014 ಕ್ಕೆ ಅವರ ಅಢಾವೇ ಪತ್ರಿಕೆ ಈ ಕೆಳಗಿನಂತಿದೆ.

ಹೊಣೆಗಾರಿಕೆಗಳು	₹	₹	ಆಸ್ತಿಗಳು	₹	₹
ಬಂಡವಾಳಗಳು:			ಬ್ಯಾಂಕ್		5,000
ಉದಯ	60,000		ಹೂಡಿಕೆಗಳು		12,000
ಸುವರ್ಣ	40,000		ಪೀಠೋಪಕರಣಗಳು		15,000
ಕಸ್ತೂರಿ	20,000	1,20,000	ವ್ಯಾಪರದಲ್ಲಿ ದಾಸ್ತಾನು		8,000

ಹೊಣೆಗಾರಿಕೆಗಳು	₹	₹	ಆಸ್ತಿಗಳು	₹	₹
ಕೊಡತಕ್ಕ ಹುಂಡಿಗಳು		18,000	ಋಣಿಗಳು		26,000
ಧನಿಗಳು		30,000	ಕಟ್ಟಡಗಳು		50,000
			ಯಂತ್ರೋಪಕರಣ		40,000
			ಲಾಭ ನಷ್ಟ ಖಾತೆ		12,000
		1,68,000			**1,68,000**

ದಿನಾಂಕ 01–04–2014 ರಂದು ಕಸ್ತೂರಿ ಯವರು ವ್ಯವಹಾರದಿಂದ ನಿವೃತ್ತಿಯಾದರು, ಮತ್ತು ಈ ಕೆಳಗಿನ ಹೊಂದಾಣಿಕೆಗಳು ಬೇಕಾಗುತ್ತವೆ.

1) ಸಂಸ್ಥೆಯ ಕೀರ್ತಿಮೌಲ್ಯವನ್ನು ಹಿಂದಿನ 5 ವರ್ಷಗಳ ಲಾಭದ ಸರಾಸರಿಯ 3 ವರ್ಷಗಳ ಕಾಲಕ್ಕೆ ಸಮ ಎಂದು ಪರಿಗಣಿಸಿ. ಲಾಭ ನಷ್ಟಗಳು ಒಂದು :

   31.03.2010 ಲಾಭ ₹ 30,000
   31.03.2011 ನಷ್ಟ ₹ 12,000
   31.03.2012 ಲಾಭ ₹ 20,000
   31.03.2013 ನಷ್ಟ ₹ 8,000
   31.03.2014 ಲಾಭ ₹ 20,000

2) ಕಸ್ತೂರಿ ಪಾಲಿನ ಕೀರ್ತಿಮೌಲ್ಯವನ್ನು ಸೃಷ್ಟಿಸಿ ಮತ್ತು ತಕ್ಷಣವೇ ತೆಗೆದುಹಾಕಬೇಕು.

3) ಕಟ್ಟಡ ಮತ್ತು ಸರಕು ಪುಸ್ತಕದ ಬೆಲೆಯು ಶೇ. 10 ರಷ್ಟು ಹೆಚ್ಚಿನ ಮೌಲ್ಯ ಬಂದಿದೆ. ಮತ್ತು ಯಂತ್ರೋಪಕರಣ ಮತ್ತು ಪೀಠೋಪಕರಣದ ಬೆಲೆಯು ಶೇ. 5 ರಷ್ಟು ಕಡಿಮೆ ಮೌಲ್ಯ ಬಂದಿದೆ.

4) ಹೂಡಿಕೆಗಳ ಪುನರ್ ಮೌಲ್ಯ ₹ 15,700

5) ಕರಡು ಸಾಲ ₹ 1,000 ಮತ್ತು ಅನುಮಾನಸ್ಪದ ಸಾಲ ಶೇ. 5 ರಷ್ಟು ಕಾಯ್ದಿರಿಸಿ.

6) ಬ್ಯಾಂಕು ಮೀರೆಳೆತದ ಮೂಲಕ ನಿವೃತ್ತ ಪಾಲುದಾರನ ಹಣವನ್ನು ಚುಕ್ತ ಮಾಡುವುದು.

ತಯಾರಿಸಿ : – ಎ) ಮರು ಮೌಲ್ಯ ಮಾಪನ ಖಾತೆ ಬಿ) ಪಾಲುದಾರರ ಬಂಡವಾಳ ಖಾತೆಗಳು ಸಿ) ಅಢಾವೇ ಪತ್ರಿಕೆ

ಉತ್ತರ : ಪುನರ್ ಮೌಲ್ಯಮಾಪನದ ಲಾಭ ₹ 4500, ಬ್ಯಾಂಕು ಮೀರೆಳತದ ಶಿಲ್ಕು ₹ 18750 ಬಂಡವಾಳ ಖಾತೆಗಳ ಶಿಲ್ಕುಗಳು : ಉದಯ ₹ 53,250, ಸುವರ್ಣ ₹ 35,500, ಅಢಾವೇ ಪತ್ರಿಕೆಯ ಶಿಲ್ಕು ₹ 1,55,500.

6. ಶೃತಿ, ಲಯ ಮತ್ತು ಪಲ್ಲವಿ ಪಾಲುದಾರರಾಗಿದ್ದು ಲಾಭನಷ್ಟಗಳನ್ನು 2:2:1 ಅನುಪಾತದಲ್ಲಿ ಹಂಚಿಕೊಳ್ಳುವರು. ದಿನಾಂಕ 31–03–2014 ಕ್ಕೆ ಅವರ ಅಢಾವೇ ಪತ್ರಿಕೆ ಈ ಕೆಳಗಿನಂತ್ತಿದೆ.

ಹೊಂದಾಣಿಕೆಗಳು	₹	₹	ಆಸ್ತಿಗಳು	₹	₹
ಸಾಹುಕಾರರು		40,000	ಬ್ಯಾಂಕು		25,000
ಕೊಡತಕ್ಕ ಹುಂಡಿಗಳು		25,000	ಕಟ್ಟಡಗಳು		40,000
ಮೀಸಲು		15,000	ಪೀಠೋಪಕರಣ		10,000
ಬಂಡವಾಳಗಳು :			ಹೂಡಿಕೆಗಳು		10,000
ಶೃತಿ	15,000		ಸಾಲಗಾರರು	35,000	
ಲಯ	25,000		– ಕಾಯ್ದಿಟ್ಟ ಕರಡು ಸಾಲ	2,800	32,200
ಪಲ್ಲವಿ	40,000	80,000	ಬರತಕ್ಕ ಹುಂಡಿಗಳು		20,000
ಖಾತೆ ಖರ್ಚು		1,200	ವ್ಯಾಪಾರದಲ್ಲಿ ಸರಕು		24,000
		1,61,200			**1,61,200**

ಮೇಲಿನ ದಿನಾಂಕದಂದು ಶೃತಿರವರು ವ್ಯವಹಾರದಿಂದ ನಿವೃತ್ತಿಯಾಗಿರುತ್ತಾರೆ. ಮತ್ತು ಈ ಕೆಳಗಿನ ಹೊಂದಾಣಿಕೆಗಳು ಮೂಡಲಾಯಿತು.

1) ಸಂಸ್ಥೆಯ ಕೀರ್ತಿ ಮೌಲ್ಯ ₹ 18,000 ರಷ್ಟು ಸೃಷ್ಟಿಸಿ ಮತ್ತು ತಕ್ಷಣವೇ ತೆಗೆದುಹಾಕಲಾಯಿತು.

2) ಕಟ್ಟಡದ ಪುಸ್ತಕದ ಬೆಲೆಯು ಶೇ. 15 ರಷ್ಟು ಹೆಚ್ಚಿನ ಮೌಲ್ಯ ಬಂದಿದೆ, ಮತ್ತು ಪೀಠೋಪಕರಣಗಳ ಪುಸ್ತಕದ ಬೆಲೆಯು ಶೇ. 10 ರಷ್ಟು ಕಡಿಮೆ ಮೌಲ್ಯ ಬಂದಿದೆ.

3) ಸರಕುಗಳ ಮೇಲೆ ಶೇ. 5 ರಷ್ಟು ಸವಕಳಿಯನ್ನು ತೆಗೆಯಿರಿ ಮತ್ತು ಹೂಡಿಕೆಗಳ ಮೌಲ್ಯ ₹ 12200.

4) ಕಾಯ್ದಿಟ್ಟ ಕರಡು ಸಾಲ ಮೀಸಲಿನ ಅಗತ್ಯವಿರುವುದಿಲ್ಲ.

5) ₹ 12,000 ರಷ್ಟು ಶೃತಿಯ ಸಾಲದ ಖಾತೆಗೆ ವರ್ಗಾಯಿಸಿ ಮತ್ತು ಉಳಿದ ಶಿಲ್ಕನ್ನು ಧನಾದೇಶದ ಮೂಲಕ ಪಾವತಿಮಾಡಲಾಯಿತು. (cheque)

ತಯಾರಿಸಿ :

ಎ) ಪುನರ್ ಮೌಲ್ಯಮಾಪನದ ಖಾತೆ

ಬಿ) ಪಾಲುದಾರರ ಬಂಡವಾಲ ಖಾತೆಗಳು

ಸಿ) ಉಳಿದ ಪಾಲುದಾರರ ಅಢಾವೇ ಪತ್ರಿಕೆ

ಉತ್ತರ : ಪುನರ್ ಮೌಲ್ಯಮಾಪನದ ಲಾಭ ರೂ. 8,800, ಬಂಡವಾಳದ ಖಾತೆಗಳ ಶಿಲ್ಕುಗಳು : ಲಯ ರೂ. 29,720, ಪಲ್ಲವಿ ರೂ. 42,360, ಅಢಾವೇ ಪತ್ರಿಕೆ ಒಟ್ಟು ರೂ. 1,50,280.

7. X, Y ಮತ್ತು Z ಪಾಲುದಾರರಾಗಿದ್ದ ಲಾಭ ನಷ್ಟಗಳನ್ನು 2/5, 2/5 ಮತ್ತು 1/5 ಪ್ರಮಾಣದಲ್ಲಿ ಕ್ರಮವಾಗಿ ಹಂಚಿಕೊಳ್ಳುತ್ತಿದ್ದರು. ದಿನಾಂಕ 31–03–2014 ಕ್ಕೆ ಅವರ ಅಢಾವೇ ಪತ್ರಿಕೆ ಈ ಕೆಳಗಿನಂತ್ತಿದೆ.

ಹೊಣೆಗಾರಿಕೆಗಳು	₹	₹	ಆಸ್ತಿಗಳು	₹	₹
ಧಣಿಗಳು		10,000	ಬ್ಯಾಂಕು		1,250
ಕೊಡತಕ್ಕ ಹುಂಡಿಗಳು		8,000	ಋಣಿಗಳು	8,000	
ಬಂಡವಾಳಗಳು :			– ಕಾಯ್ದಿಟ್ಟ ಕರಡು ಸಾಲ	250	7,750
X	12,500		ಸರಕುಗಳು		12,500
Y	15,000		ಯಂತ್ರೋಪಕರಣಗಳು		17,500
Z	20,000	47,500	ಮೋಟಾರು ವಾಹನ		4,000
			ಕಟ್ಟಡಗಳು		22,500
		65,500			**65,500**

ಮೇಲಿನ ದಿನಾಂಕದಂದು Y ನಿವೃತ್ತನಾಗಿರುತ್ತಾನೆ. ಈ ಕೆಳಗಿನ ಹೊಂದಾಣಿಕೆಗಳನ್ನು ಹೊರತುಪಡಿಸಿ :

1) ಸಂಸ್ಥೆಯ ಕೀರ್ತಿ ಮೌಲ್ಯ ₹ 9,000 ರಷ್ಟು ಮೌಲ್ಯಮಾಡಿ, ಮುಂದುವರೆದ ಪಾಲುದಾರರ ಅಢಾವೇ ಪತ್ರಿಕೆಯಲ್ಲಿ ತೋರಿಸಬೇಕು.

2) ಯಂತ್ರೋಪಕರಣ ಮತ್ತು ಮೋಟಾರು ವಾಹನದ ಮೇಲೆ ಶೇಕಡ 10 ಮತ್ತು ಶೇಕಡ 15 ರಷ್ಟು ಸವಕಳಿಯನ್ನು ತೆಗೆಯಿರಿ.

3) ಸರಕುಗಳು ಮತ್ತು ಕಟ್ಟಡಗಳ ಮೇಲೆ ಶೇ. 20 ಮತ್ತು ಶೇ. 10 ರಷ್ಟು ಹೆಚ್ಚಿಸಲಾಯಿತು.

4) ಕಾಯ್ದಿಟ್ಟ ಕರಡು ಸಾಲವನ್ನು ₹ 100 ಗಳಷ್ಟು ಕಡಿಮೆ ಮಾಡಿ.

5) ಸಂಸ್ಥೆಯ ಒಟ್ಟು ಬಂಡವಾಳ ₹ 48,000 ಎಂದು ನಿಶ್ಚಯಿಸಿ, X ಮತ್ತು Z ರವರು 3:2 ಹೊಸ ಲಾಭ ಹಂಚಿಕೆಯು ಅನುಪಾತದಲ್ಲಿ ಇರಬೇಕೆಂದು ಮತ್ತು ಇದಕ್ಕಾಗಿ ನಗದನ್ನು ತರಬೇಕು ಅಥವಾ ಕೊಡಬೇಕೆಂದು ನಿರ್ಧರಿಸಿದರು.

ತಯಾರಿಸಿ :

ಎ) ಪುನರ್ ಮೌಲ್ಯಮಾಪನದ ಖಾತೆ

ಬಿ) ಪಾಲುದಾರರ ಬಂಡವಾಲ ಖಾತೆಗಳು

ಸಿ) ಬ್ಯಾಂಕು ಖಾತೆ

ಡಿ) X ಮತ್ತು Z ರವರ ಅಢಾವೇ ಪತ್ರಿಕೆ.

ಉತ್ತರ : ಪುನರ್ ಮೌಲ್ಯಮಾಪನದ ಲಾಭ ರೂ. 2500, Y ಸಾಲದ ಖಾತೆಯ ಶಿಲ್ಕು ರೂ. 19,600 ಬಂಡವಾಳ ಖಾತೆಗಳ ಶಿಲ್ಕು : X ರೂ. 28,800, Z ರೂ. 19,200, ಬ್ಯಾಂಕು ಖಾತೆ ರೂ. 9850 ಅಢಾವೇ ಪತ್ರಿಕೆಯ ಒಟ್ಟು ರೂ. 85,600.

8. A,B ಮತ್ತು C ಒಂದು ಸಂಸ್ಥೆಯಲ್ಲಿ ಪಾಲುದಾರರಾಗಿದ್ದು ಲಾಭ ನಷ್ಟಗಳನ್ನು 5:3:2 ಅನುಪಾತದಲ್ಲಿ ಹಂಚಿಕೊಳ್ಳುವರು. ದಿನಾಂಕ 31–03–2013 ರಂದು ಅವರ ಅಢಾವೇ ಪತ್ರಿಕೆ ಈ ಕೆಳಗಿನಂತಿದೆ.

ಹೋಂದಾಣಿಕೆಗಳು	₹	₹	ಆಸ್ತಿಗಳು	₹	₹
ವ್ಯಾಪಾರದ ಧಣಿಗಳು		20,000	ಕಟ್ಟಡಗಳು		1,00,000
ಕೊಡತಕ್ಕ ಹುಂಡಿಗಳು		6,000	ಯಂತ್ರೋಪಕರಣಗಳು		48,000
ಸಾಮಾನ್ಯ ಮೀಸಲು		20,000	ಸರಕುಗಳು		18,000
ಬಂಡವಾಳಗಳು :			ವ್ಯಾಪಾರದ ಋಣಿಗಳು	20,000	
A	80,000		ಕಾಯ್ದಿಟ್ಟ ಕರಡು ಸಾಲವನ್ನು	1000	19,000
B	60,000		ಹೂಡಿಕೆಗಳು		12,000
C	40,000	1,80,000	ಮೋಟಾರು ವ್ಯಾನ್		15,000
			ನಗದು		14,000
		2,26,000			**2,26,000**

ವಯಸ್ಸಾದ ಕಾರಣದಿಂದ C ರವರು ನಿವೃತ್ತಿನಾಗಲು ನಿರ್ಧರಿಸಿದ್ದರು. A ಮತ್ತು B ಈ ಕೆಳಗಿನ ಹೊಂದಾಣಿಕೆಗಳನ್ನು ಮಾಡಲು ನಿರ್ಧರಿಸಿರುತ್ತಾರೆ.

1) ಯಂತ್ರೋಪಕರಣಗಳ ಮೇಲೆ ಶೇ. 10 ರಷ್ಟು ಸವಕಳಿ ತೆಗೆಯಿರಿ ಮತ್ತು ಕಟ್ಟಡಗಳ ಮೌಲ್ಯವನ್ನು ಶೇ. 15 ರಷ್ಟು ಹೆಚ್ಚಿಸಲಾಯಿತು.

2) ಸರಕುಗಳ ಪುಸ್ತಕದ ಬೆಲೆಯು ಶೇ. 10 ರಷ್ಟು ಹೆಚ್ಚಿನ ಮೌಲ್ಯ ಬಂದಿದೆ ಮತ್ತು ಮೋಟಾರ್ ವ್ಯಾನ್ ಪುಸ್ತಕದ ಬೆಲೆಯು ಶೇ. 5 ರಷ್ಟು ಕಡಿಮೆ ಬಂದಿದೆ.

3) ಹೂಡಿಕೆಗಳ ಮೌಲ್ಯ ₹ 13,200.

4) ಸಂಸ್ಥೆಯ ಕೀರ್ತಿಮೌಲ್ಯ ₹ 90,000 ಮೌಲ್ಯಮಾಡಲಾಯಿತು. C ಪಾಲಿನ ಕೀರ್ತಿಮೌಲ್ಯ A ಮತ್ತು B ಬಂಡವಾಳ ಖಾತೆಗಳ ವಿರುದ್ಧ ಹೊಂದಾಣಿಕೆಮಾಡಲಾಯಿತು.

5) ಸಂಸ್ಥೆಯ ಒಟ್ಟು ಬಂಡವಾಳ ₹ 180000 ರಷ್ಟು ಮೌಲ್ಯಮಾಡಲಾಯಿತು, A ಮತ್ತು B 2:1 ಹೊಸ ಅನುಪಾತದಲ್ಲಿ ತಮ್ಮ ಬಂಡವಾಳ ಖಾತೆಗಳಲ್ಲಿ ಹೊಂದಾಣಿಕೆಮಾಡಲು ನಿರ್ಧರಿಸಿರುತ್ತಾರೆ. ಹೊಂದಾಣಿಕೆಗಳನ್ನು ನಗದು ರೂಪದಲ್ಲಿ ಮಾಡಬೇಕು.

ತಯಾರಿಸಿ :

ಎ) ಪುನರ್ ಮೌಲ್ಯಮಾಪನದ ಖಾತೆ

ಬಿ) ಪಾಲುದಾರರ ಬಂಡವಾಲ ಖಾತೆಗಳು

ಸಿ) ನಗದು ಖಾತೆ

ಡಿ) ಪ್ರಾರಂಭದ ಅಢಾವೇ ಪತ್ರಿಕೆ.

ಉತ್ತರ : ಪುನರ್ ಮೌಲ್ಯಮಾಪನ ರೂ. 12450, C ರವರ ಸಾಲದ ಖಾತೆಯ ಶಿಲ್ಕು ರೂ. 64,490, ಬಂಡವಾಳ ಖಾತೆಗಳ ಶಿಲ್ಕುಗಳು : A ರೂ. 1,20,000 B ರೂ. 60,000, ಅಢಾವೇ ಪತ್ರಿಕೆ ಒಟ್ಟು ರೂ. 2,66,490.

9. ರಾಮ್, ರಾಬರ್ಟ್ ಮತ್ತು ರಹೀಂ ಪಾಲುದಾರರಾಗಿದ್ದು ಲಾಭನಷ್ಟಗಳನ್ನು ಸಮವಾಗಿ ಹಂಚಿಕೊಳ್ಳುತ್ತಿದ್ದರು. ದಿನಾಂಕ 31–03–2013 ಕ್ಕೆ ಅವರ ಅಢಾವೇ ಪತ್ರಿಕೆ ಈ ಕೆಳಗಿನಂತಿದೆ.

ಜವಾಬ್ದಾರಿಗಳು	₹	₹	ಆಸ್ತಿಗಳು	₹	₹
ಸಾಹುಕಾರರು		21,000	ಬ್ಯಾಂಕಿನಲ್ಲಿ ನಗದು		22,500
ಕೊಡತಕ್ಕ ಹುಂಡಿಗಳು		9,000	ಸಾಲಗಾರರು	20,000	
ಬಾಕಿ ಖರ್ಚು		2,500	– ಕಾಯ್ದಿಟ್ಟ ನಿಧಿ	1,000	19,000
ಮೀಸಲು ನಿಧಿ		24,000	ಸರಕುಗಳು		18,000
			ಸ್ಥಾವರ & ಯಂತ್ರೋಪಕರಣ		25,000
ಬಂಡವಾಳಗಳು :			ಕಟ್ಟಡ		50,000
ರಾಮ್	40,000		ಲಾಭ ನಷ್ಟದ ಖಾತೆ		12,000
ರಾಬರ್ಟ್	30,000				
ರಹೀಂ	20,000	90,000			
		1,46,500			**1,46,500**

ರಾಬರ್ಟ್ ವ್ಯವಹಾರದಿಂದ ನಿವೃತ್ತನಾಗುತ್ತಾನೆ, ಮತ್ತು ಈ ಕೆಳಕಂಡ ಹೊಂದಾಣಿಕೆಗಳನ್ನು ಮೊದಲಾಯಿತು.

1) ಕಟ್ಟಡದ ಮೌಲ್ಯ ಶೇ. 10 ರಷ್ಟು ಹೆಚ್ಚಿಸಲಾಯಿತು ಮತ್ತು ಸ್ಥಾವರ ಮತ್ತು ಯಂತ್ರೋಪಕರಣಗಳ ಮೌಲ್ಯದ ಮೇಲೆ ಶೇ. 15 ರಷ್ಟು ಸವಕಳಿಯನ್ನು ತೆಗೆಯಿರಿ.

2) ಸಾಲಗಾರರ ಮೇಲೆ ಕಾಯ್ದಿಟ್ಟ ಕರಡು ಸಾಲವನ್ನು ₹ 2,500ಗೆ ಹೆಚ್ಚಿಸಲಾಯಿತು.

3) ಬಾಕಿ ಖರ್ಚುಗಳ ಮೌಲ್ಯ ₹ 2,250.

4) ಸಂಸ್ಥೆಯ ಕೀರ್ತಿಮೌಲ್ಯ ₹ 1,26,000 ಎಂದು ಮೌಲ್ಯಮಾಡಲಾಯಿತು. ರಾಬರ್ಟ್ ಸಾಲಿನ ಕೀರ್ತಿಮೌಲ್ಯವನ್ನು ಸೃಷ್ಟಿಮಾಡಿ, ಕೀರ್ತಿಮೌಲ್ಯದ ಖಾತೆಯನ್ನು ತೆಗೆಯದೆ ಅದನ್ನು ತೆಗೆದುಹಾಕಿರಿ.

5) ರಾಬರ್ಟ್‌ನಿಗೆ ₹ 10,000 ಪಾವತಿಸಿ ಮತ್ತು ಉಳಿದ ಶಿಲ್ಕನ್ನು ಅವರ ಸಾಲದ ಖಾತೆಗೆ ವರ್ಗಾಯಿಸಿರಿ.

ತಯಾರಿಸಿ :

ಎ) ಪುನರ್ ಮೌಲ್ಯಮಾಪನದ ಖಾತೆ

ಬಿ) ಪಾಲುದಾರರ ಬಂಡವಾಲ ಖಾತೆಗಳು

ಸಿ) ಪ್ರಾರಂಭದ ಅಢಾವೇ ಪತ್ರಿಕೆ.

ಉತ್ತರ : ಪುನರ್ ಮೌಲ್ಯಮಾಪನ ನಷ್ಟ ರೂ. 3000, ರಾಬರ್ಟ್ ಸಾಲದ ಖಾತೆಯ ಶಿಲ್ಕು ರೂ. 37,000, ಬಂಡವಾಲ ಖಾತೆಯ ಶಿಲ್ಕುಗಳು : ರೂ. 36,000, ರಹೀಂ ರೂ. 16,000, ಅಢಾವೇ ಪತ್ರಿಕೆ ಒಟ್ಟು ರೂ. 1,21,250.

10. ಗೂಳಿ, ಕರಡಿ ಮತ್ತು ಸಾರಂಗ ಪಾಲುದಾರರಾಗಿದ್ದು ಲಾಭನಷ್ಟಗಳನ್ನು 2:2:1 ಅನುಪಾತದಲ್ಲಿ ಕ್ರಮವಾಗಿ ಹಂಚಿಕೊಳ್ಳುತ್ತಿದ್ದರು. ದಿನಾಂಕ 31–03–2013 ಕ್ಕೆ ಅವರ ಅಢಾವೇ ಪತ್ರಿಕೆ ಈ ಕೆಳಗಿನಂತ್ತಿದೆ.

ಹೊಣೆಗಾರಿಕೆಗಳು	₹	₹	ಆಸ್ತಿಗಳು	₹	₹
ಧಣಿಗಳು		15,000	ನಗದು ಕೈಯಲ್ಲಿ		4,000
ಕೊಡತಕ್ಕ ಹುಂಡಿಗಳು		7,500	ಬರತಕ್ಕ ಹುಂಡಿಗಳು		13,000
ಬ್ಯಾಂಕು ಸಾಲ		12,000	ಪೇಟೆಂಟ್ಸ್		8,000
ಬಂಡವಾಳಗಳು :			ಋಣಿಗಳು	23,000	
ಗೂಳಿ	55,000		ಕಾಯ್ದಿಟ್ಟ ಕರಡು ಸಾಲವನ್ನು	3,000	20,000
ಕರಡಿ	45,000		ಪೀಠೋಪಕರಣ		12,500
ಸಾರಂಗ	25,000	1,25,000	ಹೂಡಿಕೆಗಳು		15,000
			ಯಂತ್ರೋಪಕರಣ		25,000
			ಕಟ್ಟಡ		62,000
		1,59,500			**1,59,500**

ಮೇಲಿನ ದಿನಾಂಕದೆಂದು ಇತರ ಪಾಲುದಾರರ ನಡುವಿನ ಭಿನ್ನಾಭಿಪ್ರಾಯಗಳ ಕಾರಣ ಸಾರಂಗ ವ್ಯವಹಾರದಿಂದ ನಿವೃತ್ತನಾದರು ಮತ್ತು ಈ ಕೆಳಗಿನ ಹೊಂದಾಣಿಕೆಗಳು ಬೇಕಾಗುತ್ತದೆ.

1) ಸಂಸ್ಥೆಯ ಕೀರ್ತಿಮೌಲ್ಯ ₹ 50,000 ರಷ್ಟು ಮೌಲ್ಯಮಾಡಲಾಯಿತು. ಸಾರಂಗ ಪಾಲಿನ ಕೀರ್ತಿಮೌಲ್ಯವನ್ನು ಸೃಷ್ಟಿಸಿ ಮತ್ತು ತಕ್ಷಣ ತೆಗೆದುಹಾಕಿರಿ.

2) ಯಂತ್ರೋಪಕರಣದ ಮೌಲ್ಯ ₹ 20,500 ಮತ್ತು ಪೀಠೋಪಕರಣಗಳ ಪುಸ್ತಕದ ಬೆಲೆಯು ಶೇ. 10ರಷ್ಟು ಕಡಿಮೆ ಬಂದಿದೆ.

3) ಕಟ್ಟಡದ ಮೌಲ್ಯ ಶೇ. 10 ರಷ್ಟು ಹೆಚ್ಚಿಸಲಾಯಿತು ಮತ್ತು ಬರಕ್ಕ ಹುಂಡಿಗಳ ಮೀಸಲು ಶೇ. 10.

4) ಕಾಯ್ದಿಟ್ಟ ಕರಡು ಸಾಲ ₹ 500 ರಷ್ಟು ಕಡಿಮೆಮಾಡಿರಿ.

5) ಬ್ಯಾಂಕ್ ಸಾಲದ ಬಡ್ಡಿ ಶೇ. 5ರಷ್ಟು 6 ತಿಂಗಳು ಬಾಕಿಯಿರುತ್ತದೆ.

ತಯಾರಿಸಿ :

ಎ) ಪುನರ್ ಮೌಲ್ಯಮಾಪನದ ಖಾತೆ

ಬಿ) ಪಾಲುದಾರರ ಬಂಡವಾಲ ಖಾತೆಗಳು

ಸಿ) ಅಢಾವೇ ಪತ್ರಿಕೆ.

ಉತ್ತರ : ಪುನರ್ ಮೌಲ್ಯಮಾಪನದ ಲಾಭ ಅಥವ ನಷ್ಟ – ಇಲ್ಲ –, ಸಾರಂಗ ಸಾಲದ ಖಾತೆ ರೂ. 35,000, ಬಂಡವಾಳ ಖಾತೆಯ ಶಿಲ್ಕುಗಳು : ಗೂಳಿ ರೂ. 50,000, ಕರಡಿ ರೂ. 40,000, ಅಢಾವೇ ಪತ್ರಿಕೆ ಒಟ್ಟು ರೂ. 1,59,800.

ವಿಭಾಗ – ಡಿ (SECTION – D)

ಪ್ರಾಯೋಗಿಕ ಪ್ರಶ್ನೆ

I. 5 ಅಂಕಗಳ ಪ್ರಶ್ನೆ

1. ಎರಡು ವಾರ್ಷಿಕ ಸಮನಾದ ಕಂತುಗಳ ಮೂಲಕ ಬಡ್ಡಿ ಸಹಿತ ಕೊನೆಗೊಳ್ಳುವಂತೆ ಕಾಲ್ಪನಿಕ ಮೊಬಲಗುಗಳ ಸಹಾಯದಿಂದ ವಾರಸುದಾರನ ಸಾಲ ಖಾತೆಯನ್ನು ತಯಾರಿಸಿ.

❖ ❖ ❖ ❖ ❖

ಅಧ್ಯಾಯ – 5

ಪಾಲುದಾರಿಕೆ ಸಂಸ್ಥೆಯ ವಿಸರ್ಜನೆ

ಕಲಿಕೆಯ ಉದ್ದೇಶಗಳು :

ಈ ಅಧ್ಯಾಯವನ್ನು ಅಭ್ಯಾಸ ಮಾಡಿದ ಮೇಲೆ ನೀವು :

- ಪಾಲುಗಾರಿಕೆ ಅರ್ಥವನ್ನು ತಿಳಿಸುವಿರಿ
- ಪಾಲುದಾರಿಕೆ ಸಂಸ್ಥೆ ವಿಸರ್ಜನೆಯ ಅರ್ಥ ತಿಳಿಸುವಿರಿ.
- ಪಾಲುದಾರಿಕೆಯ ವಿಸರ್ಜನೆ ಮತ್ತು ಪಾಲುದಾರಿಕೆ ಸಂಸ್ಥೆ ವಿಸರ್ಜನೆಯ ನಡುವಿನ ವ್ಯತ್ಯಾಸಗಳನ್ನು ತಿಳಿಸುವಿರಿ.
- ಪಾಲುದಾರರ ಕ್ಲೈಮುಗಳನ್ನು ಚುಕ್ತ ಮಾಡಲು ಸಂಬಂಧಿಸಿದ ನಿಯಮಗಳನ್ನು ವಿವರಿಸುವಿರಿ.
- ವಿಲೇವಾರಿ ಖಾತೆಯನ್ನು ತಯಾರಿಸುವಿರಿ
- ಸಂಸ್ಥೆಯ ಲೆಕ್ಕದ ಪುಸ್ತಕಗಳನ್ನು ಮುಚ್ಚಲು ಮತ್ತು ಪಾಲುದಾರರ ಕ್ಲೈಮುಗಳನ್ನು ಚುಕ್ತ ಮಾಡಲು ಸಂಬಂಧಿಸಿದ ರೋಜು ದಾಖಲೆಗಳನ್ನು ಬರೆಯುವಿರಿ ಮತ್ತು ಅವಶ್ಯಕ ಖಾತೆಗಳನ್ನು ತಯಾರಿಸುವಿರಿ.

ಪೀಠಿಕೆ

ಪಾಲುದಾರನೊಬ್ಬನ ಪ್ರವೇಶ, ನಿವೃತ್ತಿ ಅಥವಾ ನಿಧನದ ಸಂಧರ್ಭದಲ್ಲಿ ಪಾಲುದಾರಿಕೆ ಸಂಸ್ಥೆ ಪುನರ್‌ರಚನೆ ಆಗುತ್ತದೆ ಎಂಬುದನ್ನು ನೀವು ಕಲಿತಿದ್ದೀರಿ. ಅಂತಹ ಸಂಧರ್ಭಗಳಲ್ಲಿ ಪಾಲುದಾರಿಕೆ ವಿಸರ್ಜನೆಯಾಗಿ, ಪಾಲುದಾರರು ಬಯಸಿದರೆ ಅದೇ ಹೆಸರಿನಡಿಯಲ್ಲಿ ಸಂಸ್ಥೆ ಮುಂದುವರಿಯಬಹುದು.ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಅದು ಪಾಲುದಾರಿಕೆಯ ವಿಸರ್ಜನೆಗೆ ಕಾರಣವಾಗುತ್ತದೆಯೇ, ಹೊರತು ಪಾಲುದಾರಿಕೆ ಸಂಸ್ಥೆಯ ವಿಸರ್ಜನೆಗೆ ಅಲ್ಲ. ಪಾಲುದಾರಿಕೆ ಕಾಯ್ದೆ, 1932 ರ ಪ್ರಕಾರ ಎಲ್ಲಾ ಪಾಲುದಾರರ ಸಂಬಂಧವು ಕಡಿದು ಹೋಗುವುದಕ್ಕೂ ಮತ್ತು ಕೆಲವೇ ಪಾಲುದಾರರು ಸಂಬಂಧವನ್ನು ಕಡಿದುಕೊಳ್ಳುವುದಕ್ಕೂ ವ್ಯತ್ಯಾಸವಿದೆ. ಎಲ್ಲಾ ಪಾಲುದಾರ ನಡುವಿನ ಸಂಬಂಧ ಕಡಿದು ಹೋಗುವುದಕ್ಕೆ ಪಾಲುದಾರಿಕೆ ಸಂಸ್ಥೆಯ ವಿಸರ್ಜನೆ ಎನ್ನುವರು. ಇದರಿಂದಾಗಿ ಸಂಸ್ಥೆಯ ಅಸ್ತಿತ್ವ ಕೊನೆಗೊಂಡು, ಸಂಸ್ಥೆಯ ಆಸ್ತಿಗಳನ್ನು ಮಾರಿ, ಸಂಸ್ಥೆಯ ಹೊಣೆಗಾರಿಕೆಗಳನ್ನು ಪಾವತಿಸಿ, ಪಾಲುದಾರರಿಗೆ ಅಂತಿಮ ಹಣ ಸಂದಾಯಕ್ಕೆ ಸಂಬಂಧಿಸಿದ ವ್ಯವಹಾರಗಳನ್ನು ಹೊರತುಪಡಿಸಿ ಬೇರೆ ಯಾವುದೇ ವ್ಯವಹಾರ ನಡೆಯುವುದಿಲ್ಲ.

5.1 ಪಾಲುದಾರಿಕೆಯ ವಿಸರ್ಜನೆಯ ಅರ್ಥ:

ಪಾಲುದಾರಿಕೆಯ ವಿಸರ್ಜನೆ ಎಂದರೆ ಕೆಲವೇ ಪಾಲುದಾರರು ಸಂಸ್ಥೆಯ ಜೊತೆಗಿನ ತಮ್ಮ ಸಂಬಂಧವನ್ನು ಕಡಿದುಕೊಳ್ಳುತ್ತಾರೆ ಮತ್ತು ಉಳಿದ ಪಾಲುದಾರರು ಸಂಸ್ಥೆಯ ವ್ಯವಹಾರವನ್ನು ಅದೇ ಹೆಸರಿನಡಿಯಲ್ಲಿ ಒಪ್ಪಂದ ಮಾಡಿಕೊಂಡು ಮುಂದುವರೆಸುತ್ತಾರೆ. ಇನ್ನೊಂದು ಮಾತಿನಲ್ಲಿ ಹೇಳುವುದಾದರೆ, ಪಾಲುದಾರನ ನಿವೃತ್ತಿಯಿಂದ, ನಿಧನದಿಂದ ಅಥವಾ ಪ್ರವೇಶದ ಕಾರಣದಿಂದ ಪಾಲುದಾರರ ನಡುವಿನ ಸಂಬಂಧದಲ್ಲಿ ಬದಲಾವಣೆ ಆಗುವುದಕ್ಕೆ ಪಾಲುದಾರಿಕೆ ವಿಸರ್ಜನೆ ಎನ್ನುವರು.

5.2 ಪಾಲುದಾರಿಕೆ ಸಂಸ್ಥೆಯ ವಿಸರ್ಜನೆಯ ಅರ್ಥ :

ಸೆಕ್ಷನ್ 39, ಭಾರತೀಯ ಪಾಲುದಾರಿಕೆ ಕಾಯ್ದೆ, 1932 ರ ಪ್ರಕಾರ "ಸಂಸ್ಥೆಯ ಎಲ್ಲಾ ಪಾಲುದಾರರ ನಡುವಿನ ಪಾಲುದಾರಿಕೆಯ ವಿಸರ್ಜನೆಯೇ ಪಾಲುದಾರಿಕೆ ಸಂಸ್ಥೆಯ ವಿಸರ್ಜನೆ"

ಮೇಲಿನ ವ್ಯಾಖ್ಯಾನದಿಂದ ತಿಳಿದು ಬರುವುದೇನೆಂದರೆ ಎಲ್ಲಾ ಪಾಲುದಾರರ ನಡುವಿನ ಸಂಬಂಧವು ಕಡಿದು ಹೋಗಿ ಸಂಸ್ಥೆಯ ವ್ಯವಹಾರವು ಪೂರ್ಣವಾಗಿ ಮುಚ್ಚಲ್ಪಡುವುದಕ್ಕೆ, ಪಾಲುದಾರಿಕೆ ಸಂಸ್ಥೆಯ ವಿಸರ್ಜನೆ ಎನ್ನುವರು.

5.3 ಪಾಲುದಾರಿಕೆಯ ವಿಸರ್ಜನೆ ಮತ್ತು ಪಾಲುದಾರಿಕೆ ಸಂಸ್ಥೆ ವಿಸರ್ಜನೆಯ ನಡುವಿನ ವ್ಯತ್ಯಾಸಗಳು :

ಆಧಾರ	ಪಾಲುದಾರಿಕೆ ವಿಸರ್ಜನೆ	ಪಾಲುದಾರಿಕೆ ಸಂಸ್ಥೆಯ ವಿಸರ್ಜನೆ
1. ವ್ಯವಹಾರದ ಸ್ಥಗಿತ	ಸಂಸ್ಥೆಯ ವ್ಯವಹಾರ ಸ್ಥಗಿತವಾಗುವುದಿಲ್ಲ	ಸಂಸ್ಥೆಯ ವ್ಯವಹಾರ ಸ್ಥಗಿತವಾಗುತ್ತದೆ
2. ಆಸ್ತಿಗಳು ಮತ್ತು ಹೊಣೆಗಾರಿಕೆಗಳು	ಆಸ್ತಿಗಳನ್ನು ಮತ್ತು ಹೊಣೆಗಾರಿಕೆಗಳನ್ನು ಮರು ಮೌಲ್ಯ ಮಾಪನ ಮಾಡಿ ಹೊಸ ಆಢಾವೆ ಪತ್ರಿಕೆ ತಯಾರಿಸಲಾಗುತ್ತಿದೆ.	ಆಸ್ತಿಗಳನ್ನು ಮಾರಿ, ಹೊಣೆಗಾರಿಕೆಗಳನ್ನು ಪಾವತಿಸಿಲಾಗುತ್ತಿದೆ.
3. ನ್ಯಾಯಾಲಯದ ಮಧ್ಯ ಪ್ರವೇಶ	ಪಾಲುದಾರಿಕೆ ಪರಸ್ಪರ ಒಪ್ಪಂದದಿಂದ ವಿಸರ್ಜನೆಯಾಗುತ್ತದೆ. ನ್ಯಾಯಾಲಯ ಮಧ್ಯ ಪ್ರವೇಶವಿರುವುದಿಲ್ಲ.	ನ್ಯಾಯಾಲಯದ ಮಧ್ಯ ಪ್ರವೇಶದಿಂದ ಸಹ ಸಂಸ್ಥೆ ವಿಸರ್ಜನೆಯಾಗುವುದು.
4. ವ್ಯವಹಾರಿಕ ಸಂಬಂಧ	ಬದಲಾದ ಸ್ವರೂಪದಲ್ಲಿ ಪಾಲುದಾರರ ನಡುವಿನ ವ್ಯವಹಾರಿಕ ಸಂಬಂಧ ಮುಂದುವರೆಯುತ್ತದೆ	ಪಾಲುದಾರರ ನಡುವಿನ ವ್ಯವಹಾರಿಕ ಸಂಬಂಧ ಕೊನೆಗೊಳ್ಳುತ್ತದೆ.
5. ಪುಸ್ತಕಗಳ ಮುಚ್ಚುವಿಕೆ	ಲೆಕ್ಕದ ಪುಸ್ತಕಗಳನ್ನು ಮುಚ್ಚುವುದಿಲ್ಲ.	ಲೆಕ್ಕದ ಪುಸ್ತಕಗಳನ್ನು ಮುಚ್ಚಲಾಗುತ್ತದೆ.
6. ವಿಸರ್ಜನೆಯ ವ್ಯಾಪ್ತಿ	ಇದು ಸಂಸ್ಥೆಯ ವಿಸರ್ಜನೆಯನ್ನು ಒಳಗೊಳ್ಳಬಹುದು ಅಥವಾ ಒಳಗೊಳ್ಳದೆ ಇರಬಹುದು	ಇದು ಕಡ್ಡಾಯವಾಗಿ ಪಾಲುದಾರಿಕೆಯ ವಿಸರ್ಜನೆಯನ್ನು ಒಳಗೊಂಡಿದೆ.
7. ಖಾತೆಗಳ ತಯಾರಿಕೆ	ಮರುಮೌಲ್ಯ ಮಾಪನ ಖಾತೆ ಪಾಲುದಾರರ ಬಂಡವಾಳ ಖಾತೆಗಳು ಮತ್ತು ಹೊಸ ಆಢಾವೆಪತ್ರಿಕೆ ತಯಾರಿಸಲಾಗುವುದು.	ವಿಲೇವಾರಿ ಖಾತೆ, ಪಾಲುದಾರರ ಬಂಡವಾಳ ಖಾತೆಗಳು ಮತ್ತು ನಗದು/ ಬ್ಯಾಂಕು ಖಾತೆಗಳನ್ನು ತಯಾರಿಸಲಾಗುವುದು.

5.4 ಸಂಸ್ಥೆಯ ವಿಸರ್ಜನೆಗೆ ಕಾರಣವಾಗುವ ಸಂಧರ್ಭಗಳು (ವಿಸರ್ಜನಾ ವಿಧಗಳು)

ಪಾಲುದಾರಿಕಾ ಸಂಸ್ಥೆಯನ್ನು ಈ ಕೆಳಗಿನ ಸಂಧರ್ಭದಲ್ಲಿ ವಿಸರ್ಜಿಸಲಾಗುವುದು.

1. ಒಪ್ಪಂದದಿಂದ ವಿಸರ್ಜನೆ:

a) ಎಲ್ಲಾ ಪಾಲುದಾರರ ಒಪ್ಪಿಗೆಯಿಂದ

b) ಪಾಲುದಾರರ ನಡುವಿನ ಒಪ್ಪಂದದ ಅನ್ವಯ ಸಂಸ್ಥೆಯನ್ನು ವಿಸರ್ಜಿಸಲಾಗುವುದು.

2. ಕಡ್ಡಾಯ ವಿಸರ್ಜನೆ :

ಸಂಸ್ಥೆಯನ್ನು ಈ ಕೆಳಗಿನ ಸಂಧರ್ಭದಲ್ಲಿ ಕಡ್ಡಾಯವಾಗಿ ವಿಸರ್ಜಿಸಲಾಗುವುದು:

a) ಎಲ್ಲಾ ಪಾಲುದಾರರು ಅಥವಾ ಒಬ್ಬನನ್ನು ಬಿಟ್ಟು ಉಳಿದ ಎಲ್ಲಾ ಪಾಲುದಾರರು ದಿವಾಳಿಯಾದರೆ:

b) ಸಂಸ್ಥೆಯ ವ್ಯವಹಾರ ಕಾನೂನು ಬಾಹಿರವಾಗಿದ್ದರೆ.

c) ಪಾಲುದಾರರ ಸಂಸ್ಥೆ ಸಾಮಾನ್ಯ ವ್ಯವಹಾರದಲ್ಲಿ 20 ನ್ನು ಹಾಗೂ ಬ್ಯಾಂಕಿಂಗ್ ವ್ಯವಹಾರದಲ್ಲಿ 10 ನ್ನು ಮೀರಿದರೆ:

3. ಕೆಲವು ನಿರ್ಧಿಷ್ಟ ಘಟನೆಗಳು ಜರುಗಿದಾಗ :

ಅನ್ಯ ಒಪ್ಪಂದ ಇಲ್ಲದಿದ್ದಾಗ ಸಂಸ್ಥೆಯ ಈ ಕೆಳಗಿನ ಯಾವುದಾದರೂ ಘಟನೆ ಜರುಗಿದಾಗ ವಿಸರ್ಜನೆಯಾಗುವುದು:

a) ನಿರ್ಧಿಷ್ಟ ಅವಧಿ ಮುಕ್ತಾಯವಾಗಿದ್ದರೆ.

b) ನಿರ್ಧಿಷ್ಟ ಉದ್ದೇಶಗಳು ಪೂರ್ಣವಾಗಿದ್ದರೆ

c) ಪಾಲುದಾರನೊಬ್ಬ ನಿಧನ ಹೊಂದಿದ್ದರೆ.

d) ಪಾಲುದಾರನೊಬ್ಬನನ್ನು ದಿವಾಳಿ ಎಂದು ಘೋಷಿಸಿದ್ದರೆ.

4. ನೋಟಿಸಿನ ಮೂಲಕ ವಿಸರ್ಜನೆ:

ಪಾಲುದಾರಿಕೆಯನ್ನು ಇಚ್ಛೆಪಟ್ಟಾಗ ವಿಸರ್ಜಿಸಬೇಕೆಂಬ ಕರಾರಿನಿಂದ ಪ್ರಾರಂಭಿಸಿದರೆ ಪಾಲುದಾರನೊಬ್ಬ ಇತರ ಪಾಲುದಾರರಿಗೆ ಪಾಲುದಾರಿಕೆಯನ್ನು ವಿಸರ್ಜಿಸಬೇಕೆಂದು ನೋಟಿಸು ಕೊಟ್ಟರೆ ಸಂಸ್ಥೆಯನ್ನು ವಿಸರ್ಜಿಸಬಹುದು.

5. ನ್ಯಾಯಾಲಯದಿಂದ ವಿಸರ್ಜನೆ:

ಪಾಲುದಾರನೊಬ್ಬ ನ್ಯಾಯಾಲಯಕ್ಕೆ ದೂರು ನೀಡಿದರೆ ನ್ಯಾಯಾಲಯ ಈ ಕೆಳಗಿನ ಸಂಧರ್ಭಗಳಲ್ಲಿ ಸಂಸ್ಥೆಯನ್ನು ವಿಸರ್ಜಿಸಲು ಆಜ್ಞೆ ಹೊರಡಿಸಬಹುದು :

a) ಪಾಲುದಾರನು ಮತಿಭ್ರಮಣೆಗೊಂಡರೆ

b) ಪಾಲುದಾರನು ಶ್ಯಾಶ್ವತವಾಗಿ ತನ್ನ ಕರ್ತವ್ಯ ನಿರ್ವಹಿಸಲು ಅಸಮರ್ಥನಾದರೆ

c) ಪಾಲುದಾರನು ಸಂಸ್ಥೆಯ ವ್ಯವಹಾರಕ್ಕೆ ಧಕ್ಕೆ ಬರುವಂತ ಅಪರಾಧ ಮಾಡಿದರೆ

d) ಪಾಲುದಾರನು ಉದ್ದೇಶ ಪೂರ್ವಕವಾಗಿ ಪಾಲುದಾರಿಕೆ ಒಪ್ಪಂದದ ಕರಾರುಗಳನ್ನು ಉಲ್ಲಂಘಿಸುತ್ತಿದ್ದರೆ.

e) ಪಾಲುಗಾರಿಕೆ ಸಂಸ್ಥೆಯ ವ್ಯವಹಾರ ನಷ್ಟದಿಂದಲ್ಲದೆ ನಡೆಸುವುದು ಅಸಾಧ್ಯವಾಗಿದ್ದರೆ.

f) ಪಾಲುದಾರನು ಇತರ ಪಾಲುದಾರರ ಸಮ್ಮತಿ ಇಲ್ಲದೆ ಸಂಸ್ಥೆಯಲ್ಲಿನ ತನ್ನ ಪಾಲನ್ನು ಅನ್ಯ ವ್ಯಕ್ತಿಗೆ ವರ್ಗಾಯಿಸಿದರೆ.

g) ಇನ್ನಾವುದೇ ನ್ಯಾಯ ಬದ್ಧವಾದ ಮತ್ತು ಯೋಗ್ಯವಾದ ಆಧಾರಗಳ ಮೇಲೆ ಪಾಲುದಾರಿಕೆ ಸಂಸ್ಥೆಯನ್ನು ವಿಸರ್ಜಿಸಲು ನ್ಯಾಯಾಲಯ ಆಜ್ಞೆ ನೀಡಿದಾಗ.

5.5 ಪಾಲುದಾರಿಕಾ ಸಂಸ್ಥೆ ವಿಸರ್ಜನೆಯಾದಾಗ ಲೆಕ್ಕಗಳನ್ನು ಚುಕ್ತ ಮಾಡುವುದು:

ಪಾಲುದಾರಿಕೆ ಸಂಸ್ಥೆ ವಿಸರ್ಜನೆಯಾದಾಗ ತನ್ನ ವ್ಯವಹಾರವನ್ನು ನಿಲ್ಲಿಸಬೇಕು ಮತ್ತು ಲೆಕ್ಕಗಳನ್ನು ಚುಕ್ತಮಾಡಬೇಕು. ಅದು ತನ್ನ ಆಸ್ತಿಗಳನ್ನು ಮಾರಬೇಕು ಮತ್ತು ಹೊಣೆಗಾರಿಕೆಗಳನ್ನು ಪಾವತಿಸಬೇಕು. ಪಾಲುದಾರರಲ್ಲಿ ಯಾವುದೇ ಒಪ್ಪಂದವಿಲ್ಲದಿರುವಾಗಿ, ಪಾಲುದಾರಿಕೆ ಕಾಯ್ದೆ 1932 ಸೆಕ್ಷನ್ 48 ರ ನಿಯಮಾವಳಿಗಳನ್ನು ಅನುಸರಿಸಬೇಕು:

1. ನಷ್ಟಗಳನ್ನು, ಪರಿಗಣಿಸುವಿಕೆ

ನಷ್ಟಗಳನ್ನು ಬಂಡವಾಳದ ಕೊರತೆಯನ್ನು ಒಳಗೊಂಡಂತೆ ಈ ಕೆಳಗಿನ ರೀತಿಯಲ್ಲಿ ತುಂಬಿಕೊಡಬೇಕು:

a) ಪ್ರಥಮವಾಗಿ ಲಾಭದೊಳಗಿನಿಂದ

b) ನಂತರ ಬಂಡವಾಳದೊಳಗಿನಿಂದ

c) ಕೊನೆಯದಾಗಿ ಅವಶ್ಯವೆನಿಸದರೆ ಪಾಲುದಾರರು ತಮ್ಮ ಲಾಭ ಹಂಚಿಕೆಯ ಪ್ರಮಾಣದಲ್ಲಿ ತುಂಬಿ ಕೊಡಬೇಕು.

2. ಆಸ್ತಿಗಳನ್ನು ಉಪಯೋಗಿಸುವುದು:

ಪಾಲುದಾರಿಕಾ ಸಂಸ್ಥೆಯ ಎಲ್ಲಾ ಆಸ್ತಿಗಳನ್ನು ಮತ್ತು ಬಂಡವಾಳದ ಕೊರತೆಯನ್ನು ತುಂಬಿಕೊಡಲು ಪಾಲುದಾರರು ತಂದ ಹಣವನ್ನು ಈ ಕೆಳಗಿನ ಪ್ರಕಾರ ಅನುಕ್ರಮವಾಗಿ ಉಪಯೋಗಿಸಬೇಕು:

a) ಸಂಸ್ಥೆಯ ಹೊರಗಿನವರಿಗೆ ಕೊಡಬೇಕಾದ ಸಾಲಗಳನ್ನು ಕೊಡುವುದಕ್ಕೆ

b) ಪಾಲುದಾರರು ಪಾಲುದಾರಿಕೆ ಸಂಸ್ಥೆಗೆ ಸಾಲವನ್ನು ಕೊಟ್ಟಿದ್ದರೆ ಆ ಸಾಲವನ್ನು ಮರುಪಾವತಿ ಮಾಡುವುದಕ್ಕೆ.

c) ಪಾಲುದಾರರ ಬಂಡವಾಳವನ್ನು ಮರುಪಾವತಿ ಮಾಡುವುದಕ್ಕೆ.

d) ಹಣ ಉಳಿದಿದ್ದರೆ ಅದನ್ನು ಪಾಲುದಾರರು ಲಾಭ ಹಂಚಿಕೆಯ ಪ್ರಮಾಣದಲ್ಲಿ ಹಂಚಿಕೊಳ್ಳಬೇಕು.

ಸಂಸ್ಥೆಯ ಸಾಲಗಳು ಮತ್ತು ಪಾಲುದಾರರು ಖಾಸಗಿ ಸಾಲಗಳು:–

ಸಂಸ್ಥೆಯ ಸಾಲಗಳ ಜೊತೆಗೆ ಪಾಲುದಾರರ ಖಾಸಗಿ ಸಾಲಗಳು ಸಹ ಇದ್ದರೆ ಪಾಲುದಾರಿಕೆ ಕಾಯ್ದೆ 1932ರ ಸೆಕ್ಷನ್ 49 ರ ನಿಯಮಗಳನ್ನು ಅನುಸರಿಸಬೇಕು.

1. ಸಂಸ್ಥೆಯ ಆಸ್ತಿಗಳನ್ನು :

a) ಪ್ರಥಮವಾಗಿ ಸಂಸ್ಥೆಯ ಸಾಲಗಳನ್ನು ಪಾವತಿಸಲು ಉಪಯೋಗಿಸಬೇಕು.

b) ನಂತರ ಉಳಿದ ಹೆಚ್ಚುವರಿ ಹಣವನ್ನು ಲಾಭ ಹಂಚಿಕೆ ಪ್ರಮಾಣದಲ್ಲಿ ಪಾಲುದಾರರಿಗೆ ಹಂಚಬೇಕು.

2. ಪಾಲುದಾರನ ಖಾಸಗಿ ಆಸ್ತಿಯನ್ನು:–

a) ಪ್ರಥಮವಾಗಿ ಅವನ ಖಾಸಗಿ ಸಾಲವನ್ನು ಪಾವತಿಸಲು ಉಪಯೋಗಿಸಬೇಕು.

a) ಉಳಿದ ಹೆಚ್ಚುವರಿ ಹಣವನ್ನು ಸಂಸ್ಥೆಯ ಸಾಲ ನೀಡಲು (ಸಂಸ್ಥೆಯ ಸಾಲ ಅದರ ಆಸ್ತಿಗಿಂತ ಅಧಿಕವಾಗಿದ್ದರೆ) ಉಪಯೋಗಿಸಬೇಕು.

5.6 ವಿಸರ್ಜನಾ ಖಾತೆಗಳು :

ಸಂಸ್ಥೆಯ ವಿಸರ್ಜನೆ ಎರಡು ಹಂತಗಳನ್ನು ಒಳಗೊಂಡಿದೆ ಅವುಗಳೆಂದರೆ :–

a) ಸಂಸ್ಥೆಯ ಆಸ್ತಿಗಳ ವಿಲೇವಾರಿ ಮತ್ತು ಹೊಣೆಗಾರಿಕೆಗಳ ಪಾವತಿ.

b) ಪಾಲುದಾರರ ಖಾತೆಗಳನ್ನು ಇತ್ಯರ್ಥಪಡಿಸುವುದು

ಪಾಲುದಾರಿಕೆ ಸಂಸ್ಥೆಯ ವಿಸರ್ಜನೆಯ ವೇಳೆಯಲ್ಲಿ ತಯಾರಿಸಲಾಗುವ ಮುಖ್ಯವಾದ ಖಾತೆಗಳು ಯಾವುವೆಂದರೆ :

a) ವಿಲೇವಾರಿ ಖಾತೆ.

b) ಪಾಲುದಾರರ ಬಂಡವಾಳ ಖಾತೆಗಳು.

c) ನಗದು ಅಥವಾ ಬ್ಯಾಂಕು ಖಾತೆ.

ಪಾಲುದಾರಿಕೆ ಸಂಸ್ಥೆಯ ವಿಸರ್ಜನೆಯ ಸಮಯದಲ್ಲಿ ಮಾಡಬೇಕಾದ ರೋಜು ದಾಖಲೆಗಳು :

1. **ವಿಲೇವಾರಿಯಾಗಬಹುದಾದ ಆಸ್ತಿಗಳನ್ನು ಅವುಗಳ ಪುಸ್ತಕದ ಬೆಲೆಗೆ ವಿಲೇವಾರಿ ಖಾತೆಗೆ ವರ್ಗಾವಣೆ ಮಾಡಿದಾಗ :**

ವಿಲೇವಾರಿ ಖಾತೆ	ಖರ್ಚು
ಆಯಾ ಆಸ್ತಿಯ ಖಾತೆಗೆ	

2. **ಹೊರಗಿನವರಿಗೆ ನೀಡಬೇಕಾಗಿರುವ ಹೊಣೆಗಾರಿಕೆಗಳನ್ನು ಅವುಗಳ ಪುಸ್ತಕದ ಬೆಲೆಗೆ ವಿಲೇವಾರಿ ಖಾತೆಗೆ ವರ್ಗಾವಣೆ ಮಾಡಿದಾಗ :**

ಆಯಾ ಹೊಣೆಗಾರಿಕೆಯ ಖಾತೆ ಖರ್ಚು
ವಿಲೇವಾರಿ ಖಾತೆಗೆ

3. **ಆಸ್ತಿಗಳನ್ನು ಮಾರಾಟ ಮಾಡಿದಾಗ (ದಾಖಲೆಯಾಗದ ಆಸ್ತಿಗಳನ್ನು ಸೇರಿ) :**

ನಗದು / ಬ್ಯಾಂಕು ಖಾತೆ ಖರ್ಚು
ವಿಲೇವಾರಿ ಖಾತೆಗೆ

4. **ಹೊಣೆಗಾರಿಕೆಗಳನ್ನು ಪಾವತಿ ಮಾಡಿದಾಗ (ದಾಖಲೆಯಾಗದ ಹೊಣೆಗಾರಿಕೆಗಳು ಸೇರಿ) :**

ವಿಲೇವಾರಿ ಖಾತೆ ಖರ್ಚು
ನಗದು / ಬ್ಯಾಂಕು ಖಾತೆಗೆ

5. **ಪಾಲುದಾರನು ಆಸ್ತಿಗಳನ್ನು ತೆಗೆದುಕೊಂಡಾಗ :**

ಪಾಲುದಾರನ ಬಂಡವಾಳ ಖಾತೆ ಖರ್ಚು
ವಿಲೇವಾರಿ ಖಾತೆಗೆ

6. **ಪಾಲುದಾರನು ಹೊಣೆಗಾರಿಕೆಗಳನ್ನು ತೆಗೆದುಕೊಂಡಾಗ :**

ವಿಲೇವಾರಿ ಖಾತೆ ಖರ್ಚು
ಪಾಲುದಾರನ ಬಂಡವಾಳ ಖಾತೆಗೆ

7. **ವಿಲೇವಾರಿ ವೆಚ್ಚವನ್ನು ಸಂದಾಯ ಮಾಡಿದಾಗ :**

ವಿಲೇವಾರಿ ಖಾತೆ ಖರ್ಚು
ನಗದು / ಬ್ಯಾಂಕು ಖಾತೆಗೆ

8. **ವಿಲೇವಾರಿ ಖಾತೆಯ ಲಾಭವನ್ನು ವರ್ಗಾವಣೆ ಮಾಡಿದಾಗ :**

ವಿಲೇವಾರಿ ಖಾತೆ ಖರ್ಚು
ಪಾಲುದಾರರ ಬಂಡವಾಳ ಖಾತೆಗಳಿಗೆ
(ಲಾಭ ಹಂಚಿಕೆ ಪ್ರಮಾಣದಲ್ಲಿ)

9. **ವಿಲೇವಾರಿ ಖಾತೆಯ ನಷ್ಟವನ್ನು ವರ್ಗಾವಣೆ ಮಾಡಿದಾಗ :**

ಪಾಲುದಾರರ ಬಂಡವಾಳ ಖಾತೆಗಳು ಖರ್ಚು
(ಲಾಭ ಹಂಚಿಕೆ ಪ್ರಮಾಣದಲ್ಲಿ)
ವಿಲೇವಾರಿ ಖಾತೆಗೆ

10. **ಸಾಮಾನ್ಯ ನಿಧಿ / ಮೀಸಲು ನಿಧಿಯನ್ನು ವರ್ಗಾವಣೆ ಮಾಡಿದಾಗ :**

ಮೀಸಲು ನಿಧಿ ಖಾತೆ ಖರ್ಚು
ಪಾಲುದಾರರ ಬಂಡವಾಳ ಖಾತೆಗಳಿಗೆ
(ಲಾಭ ಹಂಚಿಕೆಯ ಪ್ರಮಾಣದಲ್ಲಿ)

11. **ಲಾಭ / ನಷ್ಟದ ಖಾತೆಯ ಜಮಾ ಶಿಲ್ಕನ್ನು ವರ್ಗಾವಣೆ ಮಾಡಿದಾಗ :**

ಲಾಭ / ನಷ್ಟದ ಖಾತೆ ಖರ್ಚು
ಪಾಲುದಾರರ ಬಂಡವಾಳ ಖಾತೆಗಳಿಗೆ
(ಲಾಭ ಹಂಚಿಕೆಯ ಪ್ರಮಾಣದಲ್ಲಿ)

12. ಲಾಭ / ನಷ್ಟದ ಖಾತೆಯ ಖರ್ಚಿನ ಶಿಲ್ಕನ್ನು ವರ್ಗಾವಣೆ ಮಾಡಿದಾಗ :

ಪಾಲುದಾರರ ಬಂಡವಾಳ ಖಾತೆಗಳು ಖರ್ಚು ಲಾಭ / ನಷ್ಟದ ಖಾತೆಗೆ (ಲಾಭ ಹಂಚಿಕೆಯ ಪ್ರಮಾಣದಲ್ಲಿ)

13. ಪಾಲುದಾರನ ಸಾಲವನ್ನು ಸಂದಾಯ ಮಾಡಿದಾಗ :

ಪಾಲುದಾರರ ಬಂಡವಾಳ ಖಾತೆಗಳು ಖರ್ಚು ನಗದು / ಬ್ಯಾಂಕು ಖಾತೆಗೆ

14. ಪಾಲುದಾರರ ಬಂಡವಾಳವನ್ನು ಸಂದಾಯ ಮಾಡಿದಾಗ :

ಪಾಲುದಾರರ ಬಂಡವಾಳ ಖಾತೆಗಳು ಖರ್ಚು ನಗದು / ಬ್ಯಾಂಕು ಖಾತೆಗೆ

15. ಪಾಲುದಾರನು ಕೊರತೆ ಬಂಡವಾಳವನ್ನು ಭರ್ತಿ ಮಾಡಲು ಹಣ ತಂದಿದ್ದಕ್ಕೆ :

ನಗದು / ಬ್ಯಾಂಕು ಖಾತೆ ಖರ್ಚು ಪಾಲುದಾರನ ಬಂಡವಾಳ ಖಾತೆಗೆ

ವಿಲೇವಾರಿ ಖಾತೆ :

ವಿಲೇವಾರಿ ಖಾತೆಯು ಒಂದು ಖಾತೆಯಾಗಿದ್ದು, ಅದನ್ನು ಪಾಲುದಾರಿಕಾ ಸಂಸ್ಥೆಯ ವಿಸರ್ಜನೆಯ ಸಮಯದಲ್ಲಿ ಆಸ್ತಿಗಳ ಮಾರಾಟ ಹಾಗೂ ಹೊಣೆಗಾರಿಕೆಗಳ ಪಾವತಿಯಿಂದ ಬಂದ ಲಾಭ ಅಥವಾ ನಷ್ಟ ಕಂಡುಹಿಡಿಯಲು ತಯಾರಿಸಲಾಗುವುದು.

ವಿಲೇವಾರಿ ಖಾತೆಯ ಉದ್ದೇಶಗಳು :

ವಿಲೇವಾರಿ ಖಾತೆಗೆ ಎರಡು ಪ್ರಮುಖ ಉದ್ದೇಶಗಳಿವೆ. ಅವುಗಳೆಂದರೆ :

ಅ) ಸಂಸ್ಥೆಯ ಪುಸ್ತಕಗಳಲ್ಲಿ ದಾಖಲಾದ ವಿವಿಧ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ಖಾತೆಗಳನ್ನು ಮುಚ್ಚಲು.

ಆ) ಸಂಸ್ಥೆಯ ಆಸ್ತಿಗಳ ಮಾರಾಟ ಮತ್ತು ಹೊಣೆಗಾರಿಕೆಗಳ ಪಾವತಿಯಿಂದ ಬಂದ ಲಾಭ ಅಥವಾ ನಷ್ಟ ಕಂಡುಹಿಡಿಯಲು.

ವಿಲೇವಾರಿ ಖಾತೆಯನ್ನು ತಯಾರಿಸುವುದು :

ವಿಲೇವಾರಿ ಖಾತೆಯಲ್ಲಿ, ಎಲ್ಲಾ ವಿಲೇವಾರಿ ಆಗಬಹುದಾದ, ಸಂಸ್ಥೆಯ ಪುಸ್ತಕದಲ್ಲಿ ದಾಖಲೆಯಾದ ಆಸ್ತಿಗಳನ್ನು ಅವುಗಳ ಪುಸ್ತಕ ಬೆಲೆಯಲ್ಲಿ ಖರ್ಚಿನ ಭಾಗದಲ್ಲಿ ದಾಖಲಿಸಲಾಗುತ್ತದೆ. ಹೊರಗಿನವರಿಗೆ ಕೊಡಬೇಕಾದ, ಸಂಸ್ಥೆಯ ಪುಸ್ತಕದಲ್ಲಿ ದಾಖಲಾದ ಹೊಣೆಗಾರಿಕೆಗಳನ್ನು ಅವುಗಳ ಪುಸ್ತಕದ ಬೆಲೆಯಲ್ಲಿ ಜಮಾ ಭಾಗದಲ್ಲಿ ದಾಖಲಿಸಲಾಗುತ್ತದೆ.

ಆಸ್ತಿಗಳನ್ನು ಮಾರಿದಾಗ ಬಂದ ನಗದನ್ನು ವಿಲೇವಾರಿ ಖಾತೆಯ ಜಮಾ ಭಾಗದಲ್ಲಿ ನಮೂದಿಸಲಾಗುತ್ತದೆ. ಯಾವುದಾದರೂ ಆಸ್ತಿಯನ್ನು ಪಾಲುದಾರರು ತೆಗೆದುಕೊಂಡಿದ್ದರೆ, ಅದನ್ನು ಸಹ ವಿಲೇವಾರಿ ಖಾತೆಯ ಜಮಾ ಭಾಗದಲ್ಲಿ ನಮೂದಿಸಬೇಕು.

ಹೊರಗಿನವರಿಗೆ ಹೊಣೆಗಾರಿಕೆಗಳನ್ನು ಪಾವತಿ ಮಾಡಿದ ನಗದನ್ನು ಹಾಗೂ ಯಾವುದೇ ಪಾಲುದಾರನು ಹೊಣೆಗಾರಿಕೆಯನ್ನು ವಹಿಸಿಕೊಂಡಿದ್ದರೆ, ಅದಕ್ಕೆ ಸಂಬಂಧಿಸಿದಂತೆ ಸಂಸ್ಥೆ ಅವನಿಗೆ ಕೊಡಬೇಕಾದ ಹಣವನ್ನು ವಿಲೇವಾರಿ ಖಾತೆಯ ಖರ್ಚಿನ ಭಾಗದಲ್ಲಿ ದಾಖಲೆ ಮಾಡಬೇಕು. ಸಂಸ್ಥೆ ಖರ್ಚು ಮಾಡಿದ ವಿಸರ್ಜನಾ ವೆಚ್ಚವನ್ನು ಸಹ ವಿಲೇವಾರಿ ಖಾತೆಯ ಖರ್ಚಿನ ಭಾಗದಲ್ಲಿ ಬರೆಯಬೇಕು. ಮೇಲಿನ ದಾಖಲೆಗಳನ್ನು ಮಾಡಿದ ನಂತರ ವಿಲೇವಾರಿ ಖಾತೆಯ ಎರಡು ಬದಿಗಳನ್ನು ಕೂಡಿಸಬೇಕು ಮತ್ತು ಶಿಲ್ಕನ್ನು ಕಂಡುಹಿಡಿಯಬೇಕು. ವಿಲೇವಾರಿ ಖಾತೆಯ ಶಿಲ್ಕು ಲಾಭವಾಗಿರಬಹುದು ಅಥವಾ ನಷ್ಟವಾಗಿರಬಹುದು.

ವಿಲೇವಾರಿ ಖಾತೆಯ ಖರ್ಚಿನ ಬದಿಯ ಮೊತ್ತಕ್ಕಿಂತ ಜಮಾ ಬದಿಯ ಮೊತ್ತವು ಹೆಚ್ಚಾಗಿದ್ದರೆ ಅದನ್ನು ಲಾಭವೆಂದು ಪರಿಗಣಿಸಲಾಗುವುದು. ಒಂದು ವೇಳೆ ಜಮೆಯ ಬದಿಗಿಂತ ಖರ್ಚಿನ ಬದಿಯ ಮೊತ್ತ ಹೆಚ್ಚಾಗಿದ್ದರೆ

ಅದನ್ನು ನಷ್ಟ ಎಂದು ಪರಿಗಣಿಸಲಾಗುವುದು. ವಿಲೇವಾರಿ ಖಾತೆಯ ಲಾಭ ಅಥವಾ ನಷ್ಟವನ್ನು ಪಾಲುದಾರರ ಬಂಡವಾಳ ಖಾತೆಗಳಿಗೆ ಅವರ ಲಾಭ ಹಂಚಿಕೆಯ ಪ್ರಮಾಣದಲ್ಲಿ ವರ್ಗಾವಣೆ ಮಾಡಲಾಗುವುದು.

ಪಾಲುದಾರರ ಬಂಡವಾಳ ಖಾತೆಗಳು :

ವಿಲೇವಾರಿ ಖಾತೆಯನ್ನು ಮುಚ್ಚಿದ ನಂತರ, ಸಂಸ್ಥೆಯಿಂದ ಪಾಲುದಾರರಿಗೆ ಅಥವಾ ಪಾಲುದಾರರಿಂದ ಸಂಸ್ಥೆಗೆ ಸಂದಾಯ ಮಾಡಬೇಕಾದ ಮೊತ್ತವನ್ನು ಕಂಡುಹಿಡಿಯಲು ಪಾಲುದಾರರ ಬಂಡವಾಳ ಖಾತೆಗಳನ್ನು ತಯಾರಿಸಬೇಕು.

ಸಂಸ್ಥೆಯಿಂದ ಪಾಲುದಾರರಿಗೆ ಸಂದಾಯ ಮಾಡಬೇಕಾದ ಮೊತ್ತವನ್ನು ಕಂಡುಹಿಡಿಯಲು ಬಂಡವಾಳ ಖಾತೆಯ ಶಿಲ್ಕು, ಮೀಸಲು ನಿಧಿ, ಹಂಚಿಕೆಯಾಗದ ಲಾಭ/ನಷ್ಟ, ವಿಲೇವಾರಿ ಖಾತೆಯ ಲಾಭ/ನಷ್ಟ, ಕ್ಲೈಮುಗಳಿಲ್ಲದ ಯಾವುದಾದರು ನಿಧಿ ಇತ್ಯಾದಿಗಳನ್ನು ಬಂಡವಾಳ ಖಾತೆಗಳಿಗೆ ವರ್ಗಾವಣೆ ಮಾಡಬೇಕು. ಅಲ್ಲದೇ ಪಾಲುದಾರರು ತೆಗೆದುಕೊಂಡಿರುವ ಆಸ್ತಿಗಳು ಬಂಡವಾಳ ಖಾತೆಗಳ ಖರ್ಚಿನ ಭಾಗದಲ್ಲೂ ಮತ್ತು ಪಾಲುದಾರರು ತೆಗೆದುಕೊಂಡಿರುವ ಹೊಣೆಗಾರಿಕೆಗಳನ್ನು ಜಮಾ ಭಾಗದಲ್ಲಿ ದಾಖಲೆ ಮಾಡಬೇಕು. ಪಾಲುದಾರರಿಗೆ ನೀಡಬೇಕಾದ ಅಂತಿಮ ಬಾಕಿಯನ್ನು ಕಂಡುಹಿಡಿದ ಮೇಲೆ ಅವರ ಖಾತೆಗಳನ್ನು ಚುಕ್ತ ಮಾಡಬೇಕು. ಪಾಲುದಾರರ ಸಾಲದ ಖಾತೆಗಳನ್ನು ಚುಕ್ತ ಮಾಡಿದ ನಂತರ ಪಾಲುದಾರರ ಬಂಡವಾಳ ಖಾತೆಗಳನ್ನು ಚುಕ್ತ ಮಾಡಬೇಕು.

ನಗದು / ಬ್ಯಾಂಕು ಖಾತೆ :

ಅಂತಿಮವಾಗಿ, ಸಂಸ್ಥೆಯ ವ್ಯವಹಾರಗಳನ್ನು ಮುಚ್ಚಲು ಮತ್ತು ಪಾಲುದಾರರಿಗೆ ಅಂತಿಮ ಹಣ ಸಂದಾಯ ಮಾಡಲು ಸಂಬಂಧಿಸಿದ ಎಲ್ಲಾ ನಗದು ವ್ಯವಹಾರಗಳನ್ನು ತೋರಿಸಲು ನಗದು / ಬ್ಯಾಂಕು ಖಾತೆಯನ್ನು ತಯಾರಿಸಬೇಕು. ಈ ಖಾತೆಯನ್ನು ತಯಾರಿಸುವಾಗ ಆಢಾವೆ ಪತ್ರಿಕೆಯಲ್ಲಿರುವ ನಗದು ಮತ್ತು ಬ್ಯಾಂಕು ಶಿಲ್ಕನ್ನು, ಮೊದಲು ವರ್ಗಾವಣೆ ಮಾಡಬೇಕು. ನಂತರ ಆಸ್ತಿಗಳ ವಿಲೇವಾರಿಯನ್ನು ಖರ್ಚಿನ ಭಾಗದಲ್ಲಿ, ಹೊಣೆಗಾರಿಕೆಗಳ ಪಾವತಿ, ವಿಸರ್ಜನಾ ವೆಚ್ಚದ ಪಾವತಿ, ಪಾಲುದಾರರ ಸಾಲ ಮತ್ತು ಬಂಡವಾಳದ ಪಾವತಿಯನ್ನು ಜಮಾ ಭಾಗದಲ್ಲಿ ದಾಖಲೆ ಮಾಡಬೇಕು. ಪಾಲುದಾರರು ತಮ್ಮ ಬಂಡವಾಳ ಖಾತೆಯ ಕೊರತೆಯನ್ನು ಭರ್ತಿ ಮಾಡಲು ನಗದು ತಂದರೆ ಅದನ್ನು ಖರ್ಚಿನ ಭಾಗದಲ್ಲಿ ಬರೆಯಬೇಕು.

ಸುಲಭವಾಗಿ ಅರ್ಥಮಾಡಿಕೊಳ್ಳಲು, ವಿಲೇವಾರಿ ಖಾತೆ, ಪಾಲುದಾರರ ಬಂಡವಾಳ ಖಾತೆ ಮತ್ತು ನಗದು/ ಬ್ಯಾಂಕು ಖಾತೆಯ ಮಾದರಿಯನ್ನು ಈ ಕೆಳಗೆ ನೀಡಲಾಗಿದೆ :

ಖರ್ಚು **ವಿಲೇವಾರಿ ಖಾತೆ** ಜಮಾ

ವಿವರಗಳು	₹	ವಿವರಗಳು	₹
ಗೆ ವಿಲೇವಾರಿ ಆಗಬಲ್ಲ ಆಸ್ತಿಗಳು (ಪುಸ್ತಕದ ಬೆಲೆಯಲ್ಲಿ)	xxx	ಯಿಂದ ಹೊರಗಿನ ಹೊಣೆಗಾರಿಕೆಗಳು (ಪುಸ್ತಕದ ಬೆಲೆಯಲ್ಲಿ)	xxx
ಗೆ ಹೊಣೆಗಾರಿಕೆಗೆ ಮೀಸಲು, ಇದ್ದರೆ	xxx	ಯಿಂದ ಆಸ್ತಿಗೆ ಮೀಸಲು, ಇದ್ದರೆ	xxx
ಗೆ ನಗದು/ಬ್ಯಾಂಕು ಖಾತೆ (ಹೊಣೆಗಾರಿಕೆಗಳನ್ನು ಪಾವತಿಸಿದ್ದಕ್ಕೆ)	xxx	ಯಿಂದ ನಗದು/ಬ್ಯಾಂಕು ಖಾತೆ (ಆಸ್ತಿಗಳನ್ನು ವಿಲೇವಾರಿ ಮಾಡಿದ್ದಕ್ಕೆ)	xxx
ಗೆ ಪಾಲುದಾರನ ಬಂಡವಾಳ ಖಾತೆ (ಹೊಣೆಗಾರಿಕೆಗಳನ್ನು ತೆಗೆದುಕೊಂಡಿದ್ದಕ್ಕೆ)	xxx	ಯಿಂದ ಪಾಲುದಾರನ ಬಂಡವಾಳ ಖಾತೆ (ಆಸ್ತಿಗಳನ್ನು ತೆಗೆದುಕೊಂಡಿದ್ದಕ್ಕೆ)	xxx
ಗೆ ನಗದು/ಬ್ಯಾಂಕು ಖಾತೆ (ವಿಸರ್ಜನೆ ವೆಚ್ಚ ಪಾವತಿಸಿದ್ದಕ್ಕೆ)	xxx	ಯಿಂದ ಪಾಲುದಾರರ ಬಂಡವಳ ಖಾತೆಗಳು (ನಷ್ಟ ವರ್ಗಾಯಿಸಿದ್ದಕ್ಕೆ)	xxx
ಗೆ ಪಾಲುದಾರರ ಬಂಡವಾಳ ಖಾತೆಗಳು (ಲಾಭ ವರ್ಗಾಯಿಸಿದ್ದಕ್ಕೆ)	xxx		
	xxxx		xxxx

ಖರ್ಚು **ಪಾಲುದಾರನ ಬಂಡವಾಳ ಖಾತೆ** ಜಮಾ

ವಿವರಗಳು	₹	ವಿವರಗಳು	₹
ಗೆ ಆರಂಭದ ಶಿಲ್ಕು (ಖರ್ಚಿನ ಶಿಲ್ಕು)	xxx	ಯಿಂದ ಆರಂಭದ ಶಿಲ್ಕು (ಜಮಾ ಶಿಲ್ಕು)	xxx
ಗೆ ಲಾಭ–ನಷ್ಟ ಖಾತೆ (ಖರ್ಚಿನ ಶಿಲ್ಕು)	xxx	ಯಿಂದ ಮೀಸಲು ನಿಧಿ ಖಾತೆ	xxx
ಗೆ ವಿಲೇವಾರಿ ಖಾತೆ (ಆಸ್ತಿ ತೆಗೆದುಕೊಂಡಿದ್ದಕ್ಕೆ)	xxx	ಯಿಂದ ಲಾಭ/ನಷ್ಟದ ಖಾತೆ (ಜಮಾ ಶಿಲ್ಕು)	xxx
ಗೆ ವಿಲೇವಾರಿ ಖಾತೆ (ನಷ್ಟದ ವರ್ಗಾವಣೆ)	xxx	ಯಿಂದ ವಿಲೇವಾರಿ ಖಾತೆ (ಹೊಣೆಗಾರಿಕೆ ವಹಿಸಿಕೊಂಡಿದ್ದಕ್ಕೆ)	xxx
ಗೆ ನಗದು ಬ್ಯಾಂಕು ಖಾತೆ (ಅಂತಿಮ ಸಂದಾಯ)	xxx	ಯಿಂದ ವಿಲೇವಾರಿ ಖಾತೆ (ಲಾಭದ ವರ್ಗಾವಣೆ)	xxx
		ಯಿಂದ ನಗದು/ಬ್ಯಾಂಕು ಖಾತೆ (ಕೊರತೆ ಹಣ ತಂದಿದ್ದಕ್ಕೆ)	xxx
	xxxx		xxxx

ಖರ್ಚು **ನಗದು ಬ್ಯಾಂಕ್ ಖಾತೆ** ಜಮಾ

ವಿವರಗಳು	₹	ವಿವರಗಳು	₹
ಗೆ ಆರಂಭದ ಶಿಲ್ಕು	xxx	ಯಿಂದ ವಿಲೇವಾರಿ ಖಾತೆ (ಹೊಣೆಗಾರಿಕೆಯನ್ನು ಪಾವತಿಸಿದ್ದಕ್ಕೆ)	xxx
ಗೆ ವಿಲೇವಾರಿ ಖಾತೆ (ಆಸ್ತಿಗಳನ್ನು ಮಾರಿದ್ದಕ್ಕೆ)	xxx	ಯಿಂದ ವಿಲೇವಾರಿ ಖಾತೆ (ವಿಸರ್ಜನಾ ವೆಚ್ಚ ಪಾವತಿಸಿದ್ದಕ್ಕೆ)	xxx
ಗೆ ಪಾಲುದಾರನ ಬಂಡವಾಳ ಖಾತೆಗಳು (ಕೊರತೆ ಹಣ ತಂದಿದ್ದಕ್ಕೆ)	xxx	ಯಿಂದ ಪಾಲುದಾರನ ಸಾಲದ ಖಾತೆ	xxx
		ಯಿಂದ ಪಾಲುದಾರರ ಬಂಡವಾಳ ಖಾತೆಗಳು (ಅಂತಿಮ ಹಣ ಸಂದಾಯ)	xxx
	xxxx		xxxx

ವಿಸರ್ಜನೆ ಸಮಯದಲ್ಲಿ ಕೆಲವು ಪ್ರಮುಖ ವಿಷಯಗಳನ್ನು ಪರಿಗಣಿಸುವ ವಿಧಾನ

1. **ದಾಖಲೆ ಆಗಿಲ್ಲದ ಆಸ್ತಿಗಳು ಮತ್ತು ಹೊಣೆಗಾರಿಕೆಗಳು :**

   ದಾಖಲೆ ಆಗಿಲ್ಲದ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ವಿಲೇವಾರಿ ಖಾತೆಗೆ ವರ್ಗಾವಣೆ ಮಾಡಬೇಕಾಗಿಲ್ಲ. ಆದರೆ ಅಂತಹ ಆಸ್ತಿಗಳ ಮಾರಾಟದಿಂದ ಬಂದ ನಗದನ್ನು ಮತ್ತು ಅಂತಹ ಹೊಣೆಗಾರಿಕೆಗಳಿಗೆ ಪಾವತಿಸಿದ ನಗದನ್ನು ವಿಲೇವಾರಿ ಖಾತೆಯಲ್ಲಿ ದಾಖಲೆ ಮಾಡಬೇಕು.

2. **ಕಣ್ಣಿಗೆ ಕಾಣದ ಆಸ್ತಿಗಳ ವಿಲೇವಾರಿ ಮೌಲ್ಯ :**

   ಕಣ್ಣಿಗೆ ಕಾಣದ ಆಸ್ತಿಗಳಾದ ಕೀರ್ತಿ ಮೌಲ್ಯ, ಪೇಟೆಂಟ್ಸ್ ಇತ್ಯಾದಿಗಳ ವಿಲೇವಾರಿ ಮೌಲ್ಯವನ್ನು ಲೆಕ್ಕದಲ್ಲಿ ನೀಡಿರದಿದ್ದರೆ ಅಂತಹ ಆಸ್ತಿಗಳಿಂದ ಯಾವುದೇ ಹಣ ಬಂದಿಲ್ಲ, ಅವು ಮೌಲ್ಯ ರಹಿತ ಆಸ್ತಿಗಳು ಎಂದು ಪರಿಗಣಿಸಬೇಕು.

3. **ಕಣ್ಣಿಗೆ ಕಾಣುವ ಆಸ್ತಿಗಳ ವಿಲೇವಾರಿ ಮೌಲ್ಯ :**

   ಕಣ್ಣಿಗೆ ಕಾಣುವ ಆಸ್ತಿಗಳಾದ ಪೀಠೋಪಕರಣ, ಯಂತ್ರಗಳು ಇತ್ಯಾದಿಗಳ ವಿಲೇವಾರಿ ಮೌಲ್ಯವನ್ನು ಲೆಕ್ಕದಲ್ಲಿ ನೀಡಿರದಿದ್ದರೆ, ಅಂತಹ ಆಸ್ತಿಗಳು ಪುಸ್ತಕದ ಮೌಲ್ಯಕ್ಕೆ ಮಾರಾಟವಾಗಿವೆ ಎಂದು ಪರಿಗಣಿಸಬೇಕು.

4. ಅಢಾವೆ ಪತ್ರಿಕೆಯಲ್ಲಿ ನೀಡಿರುವ ಮುಂಗಡ ಪಾವತಿಗಳು :

ಅಢಾವೆ ಪತ್ರಿಕೆಯಲ್ಲಿರುವ ಮುಂಗಡ ಪಾವತಿಗಳನ್ನು ವಿಲೇವಾರಿ ಖಾತೆಗೆ ವರ್ಗಾಯಿಸಬೇಕು. ಅವುಗಳ ವಿಲೇವಾರಿ ಬಗ್ಗೆ ಲೆಕ್ಕದಲ್ಲಿ ಏನನ್ನೂ ತಿಳಿಸಿಲ್ಲದಿದ್ದರೆ, ಅವುಗಳಿಂದ ಯಾವುದೇ ಹಣ ಬಂದಿಲ್ಲ ಎಂದು ಪರಿಗಣಿಸಬೇಕು.

5. ಸಾಹುಕಾರನೊಬ್ಬ ಆಸ್ತಿಯನ್ನು ತೆಗೆದುಕೊಂಡಾಗ :

ಸಾಹುಕಾರನೊಬ್ಬ ಸಂಸ್ಥೆಯ ಆಸ್ತಿಯನ್ನು ತೆಗೆದುಕೊಂಡರೆ ಯಾವುದೇ ದಾಖಲೆ ಮಾಡುವ ಅಗತ್ಯವಿಲ್ಲ. ಆದರೆ ಅವನಿಗೆ ಪಾವತಿ ಮಾಡುವ ಸಮಯದಲ್ಲಿ ಆಸ್ತಿಯನ್ನು ತೆಗೆದುಕೊಂಡ ಬೆಲೆಯನ್ನು ಅವನಿಗೆ ನೀಡಬೇಕಾಗಿರುವ ಹಣದಿಂದ ಕಳೆದು ಉಳಿದ ಹಣವನ್ನು ಮಾತ್ರ ಪಾವತಿ ಮಾಡಬೇಕು.

6. ಪಾಲುದಾರನ ಹೆಂಡತಿಯಿಂದ ಮತ್ತು ಸಂಬಂಧಿಕರಿಂದ ಪಡೆದ ಸಾಲ :

ಅದನ್ನು ಒಂದು ಹೊರಗಿನ ಹೊಣೆಗಾರಿಕೆ ಎಂದು ಪರಿಗಣಿಸಿ ವಿಲೇವಾರಿ ಖಾತೆಗೆ ವರ್ಗಾಯಿಸಬೇಕು ಮತ್ತು ಅದನ್ನು ಸಂಸ್ಥೆಯು ಪಾವತಿ ಮಾಡಬೇಕು.

7. ಬಂಡವಾಳ ಖಾತೆಯಲ್ಲಿನ ಕೊರತೆ :

ಎಲ್ಲಾ ಹೊಂದಾಣಿಕೆಗಳನ್ನು ಮಾಡಿದ ನಂತರ ಪಾಲುದಾರನ ಖಾತೆ ಖರ್ಚಿನ ಶಿಲ್ಕನ್ನು ತೋರಿಸಿದರೆ ಅದನ್ನು ಕೊರತೆ ಎನ್ನಬಹುದು. ಅದನ್ನು ಸಂಬಂಧಿಸಿದ ಪಾಲುದಾರ ನಗದು ತರುವುದರ ಮೂಲಕ ಸರಿದೂಗಿಸಬೇಕು.

8. ಅಢಾವೆ ಪತ್ರಿಕೆಯಲ್ಲಿ ನಗದು ಮತ್ತು ಬ್ಯಾಂಕು ಶಿಲ್ಕುಗಳು ಎರಡು ಇದ್ದರೆ :

ನಗದನ್ನು ಬ್ಯಾಂಕಿಗೆ ಜಮಾ ಮಾಡಿದೆ ಎಂದು ಪರಿಗಣಿಸಿ ಬ್ಯಾಂಕು ಖಾತೆಯ ಖರ್ಚಿನ ಭಾಗದಲ್ಲಿ ಬರೆಯಬೇಕು ಮತ್ತು ಎಲ್ಲಾ ನಗದು ವ್ಯವಹಾರಗಳನ್ನು ಬ್ಯಾಂಕ್ ಖಾತೆ ಮೂಲಕ ಮಾಡಬೇಕು.

ಅಥವಾ

ಬ್ಯಾಂಕಿನಲ್ಲಿದ್ದ ಹಣವನ್ನು ಹಿಂತೆಗಿದಿದೆ ಎಂದ ಪರಿಗಣಿಸಿ ನಗದು ಖಾತೆಯ ಖರ್ಚಿನ ಭಾಗದಲ್ಲಿ ಬರೆಯಬೇಕು ಮತ್ತು ಎಲ್ಲಾ ನಗದು ವ್ಯವಹಾರಗಳನ್ನು ನಗದು ಖಾತೆಯ ಮೂಲಕ ಮಾಡಬೇಕು.

9. ದಾಖಲೆ ಆಗಿರುವ ಹೊಣೆಗಾರಿಕೆಗಳ ಪಾವತಿ :

ದಾಖಲೆ ಆಗಿರುವ ಹೊಣೆಗಾರಿಕೆಗಳಿಗೆ ಸಂಬಂಧಿಸಿದಂತೆ ಅವುಗಳ ಪಾವತಿ ವಿವರಗಳನ್ನು ಲೆಕ್ಕದಲ್ಲಿ ನಿರ್ದಿಷ್ಟವಾಗಿ ತಿಳಿಸಿರದಿದ್ದರೆ, ಅವುಗಳ ಪುಸ್ತಕದ ಬೆಲೆಯನ್ನು ಪಾವತಿ ಮಾಡಿದೆ ಎಂದು ಭಾವಿಸಬೇಕು.

ನಿದರ್ಶನ 1.

ಪಲ್ಲವಿ ಮತ್ತು ತನ್ವಿ ಸಮನಾಗಿ ಲಾಭ-ನಷ್ಟ ಹಂಚಿಕೊಳ್ಳುವ ಪಾಲುಗಾರರಾಗಿದ್ದಾರೆ. ದಿನಾಂಕ: 31–3–2014 ರಂದು ಅವರು ತಮ್ಮ ಸಂಸ್ಥೆಯನ್ನು ವಿಸರ್ಜಿಸಲು ನಿರ್ಧರಿಸುತ್ತಾರೆ. ಅವರ ಅಢಾವೆ ಪತ್ರಿಕೆ ಈ ಕೆಳಗಿನಂತಿದೆ :

ದಿನಾಂಕ 31–3–2014 ರ ಅಢಾವೆ ಪತ್ರಿಕೆ

ಜವಾಬ್ದಾರಿಗಳು	₹	₹	ಆಸ್ತಿಗಳು	₹	₹
ಸಾಹುಕಾರರು		50,000	ಬ್ಯಾಂಕಿನಲ್ಲಿ ನಗದು		15,000
ಕೊಡತಕ್ಕ ಹುಂಡಿಗಳು		10,000	ಬರತಕ್ಕ ಹುಂಡಿಗಳು		10,000
ಪಲ್ಲವಿ ಸಾಲ		25,000	ಸಾಲಗಾರರು	45,000	
ಮೀಸಲು ನಿಧಿ		15,000	–ಕಾಯ್ದಿಟ್ಟ ಕರಡು ನಿಧಿ	3,000	42,000
ಬಂಡವಾಳ:			ಸರಕು		30,000
ಪಲ್ಲವಿ		60,000	ಹೂಡಿಕೆಗಳು		10,000
ತನ್ವಿ		80,000	ಪೀಠೋಪಕರಣಗಳು		15,000
			ಯಂತ್ರೋಪಕರಣಗಳು		25,000
			ಕಟ್ಟಡಗಳು		63,000
			ಮೋಟಾರ್ ಕಾರು		18,000
			ಲಾಭ-ನಷ್ಟ ಖಾತೆ		12,000
		2,40,000			2,40,000

a) ಆಸ್ತಿ ವಿಲೇವಾರಿ ವಿವರ ಈ ಕೆಳಗಿನಂತಿದೆ :
ದಾಸ್ತಾನು ₹ 25,000, ಹೂಡಿಕೆಗಳು ₹ 14,000
ಸಾಲಗಾರರು ₹ 43,000, ಪೀಠೋಪಕರಣಗಳು ₹ 13,000
ಬರತಕ್ಕ ಹುಂಡಿಗಳು ₹ 9,000, ಯಂತ್ರಗಳು ₹ 24,000
ಮೋಟಾರು ಕಾರು ₹ 15,000, ಕಟ್ಟಡ ₹ 60,000

b) ಸಾಹುಕಾರರು ಮತ್ತು ಕೊಡತಕ್ಕ ಹುಂಡಿಗಳನ್ನು ಶೇಕಡ 5ರ ಸೋಡಿಯಂತೆ ಪಾವತಿ ಮಾಡಲಾಯಿತು.

c) ವಿಲೇವಾರಿ ವೆಚ್ಚ ₹ 4,000.

ತಯಾರಿಸಿ :

i) ವಿಲೇವಾರಿ ಖಾತೆ.

ii) ಪಾಲುದಾರರ ಬಂಡವಾಳಖಾತೆಗಳು

iii) ಬ್ಯಾಂಕಿನ ಖಾತೆ

ನಿರೂಪಣೆ :

ಖರ್ಚು **ವಿಲೇವಾರಿ ಖಾತೆ** ಜಮಾ

ವಿವರಗಳು		₹	ವಿವರಗಳು		₹
ಬರಬೇಕಾದ ಹುಂಡಿಗಳ ಖಾತೆಗೆ		10,000	ಕಾಯ್ದಿಟ್ಟ ಕರಡು ನಿಧಿ ಖಾತೆಯಿಂದ		3,000
ಸಾಲಗಳ ಖಾತೆಗೆ		45,000	ಕೊಡಬೇಕಾದ ಹುಂಡಿಗಳ ಖಾತೆಯಿಂದ		10,000
ಸರಕುಗಳ ಖಾತೆಗೆ		30,000	ಸಾಹುಕಾರರ ಖಾತೆಯಿಂದ		50,000
ಹೂಡಿಕೆಗಳ ಖಾತೆಗೆ		10,000	ಬ್ಯಾಂಕು ಖಾತೆಯಿಂದ		
ಪೀಠೋಪಕರಣಗಳ ಖಾತೆಗೆ		15,000	ಸರಕುಗಳು	25,000	
ಯಂತ್ರಗಳ ಖಾತೆಗೆ		25,000	ಸಾಲಗಾರರು	43,000	
ಕಟ್ಟಡಗಳ ಖಾತೆಗೆ		63,000	ಬರಬೇಕಾದ ಹುಂಡಿಗಳು	9,000	
ಮೋಟಾರು ಕಾರು ಖಾತೆಗೆ		18,000	ಮೋಟಾರು ಕಾರು	15,000	
ಬ್ಯಾಂಕು ಖಾತೆಗೆ			ಹೂಡಿಕೆಗಳು	14,000	
ಸಾಹುಕಾರರು	47,500		ಪೀಠೋಪಕರಣ	13,000	
ಕೊಡಬೇಕಾದ ಹುಂಡಿಗಳು	9,500	57,000	ಯಂತ್ರೋಪಕರಣ	24,000	
ಬ್ಯಾಂಕು ಖಾತೆಗೆ		4,000	ಕಟ್ಟಡಗಳು	60,000	2,03,000
(ವಿಸರ್ಜನಾ ವೆಚ್ಚ)			ನಷ್ಟ–ಪಾಲುದಾರರ		
			ಖಾತೆಗೆ ವರ್ಗಾವಣೆಯಾದದ್ದು		
			ಪಲ್ಲವಿ	5,500	
			ತನ್ವಿ	5,500	11,000
		2,77,000			**2,77,000**

ಖರ್ಚು ಪಾಲುದಾರರ ಬಂಡವಾಳ ಖಾತೆಗಳು ಜಮಾ

ವಿವರಗಳು	ಪಲ್ಲವಿ ₹	ತನ್ವಿ ₹	ವಿವರಗಳು	ಪಲ್ಲವಿ ₹	ತನ್ವಿ ₹
ಲಾಭ-ನಷ್ಟದ ಖಾತೆಗೆ	6,000	6,000	ಆರಂಭದ ಶಿಲ್ಕು	60,000	80,000
ವಿಲೇವಾರಿ ಖಾತೆಗೆ (ನಷ್ಟ)	5,500	5,500	ಮೀಸಲು ನಿಧಿ ಖಾತೆಯಿಂದ	7,500	7,500
ಬ್ಯಾಂಕು ಖಾತೆಗೆ	56,000	76,000			
	67,500	**87,500**		**67,500**	**87,500**

ಖರ್ಚು ಬ್ಯಾಂಕು ಖಾತೆ ಜಮಾ

ವಿವರಗಳು	₹	ವಿವರಗಳು	₹
ಆರಂಭದ ಶಿಲ್ಕು	15,000	ವಿಲೇವಾರಿ ಖಾತೆಯಿಂದ (ಹೊಣೆಗಾರಿಕೆಗಳ ಪಾವತಿ)	57,000
ವಿಲೇವಾರಿ ಖಾತೆಗೆ (ಆಸ್ತಿಗಳ ಮಾರಾಟ)	2,03,000	ವಿಲೇವಾರಿ ಖಾತೆಯಿಂದ (ವಿಸರ್ಜನಾ ವೆಚ್ಚ ಪಾವತಿಸಿದ್ದು)	4,000
		ಪಲ್ಲವಿಯ ಸಾಲದ ಖಾತೆಯಿಂದ	25,000
		ಪಲ್ಲವಿಯ ಬಂಡವಾಳ ಖಾತೆಯಿಂದ	56,000
		ತನ್ವಿ ಬಂಡವಾಳ ಖಾತೆಯಿಂದ	76,000
	2,18,000		**2,18,000**

ನಿದರ್ಶನ 2.

ಆನಂದ್, ಚೆಂದು ಮತ್ತು ವಿಜಯ್ ಎಂಬ ಪಾಲುಗಾರರು ಲಾಭ ಮತ್ತು ನಷ್ಟವನ್ನು 2 : 2 : 1 ರ ಪ್ರಮಾಣದಂತೆ ಹಂಚಿಕೊಳ್ಳುತ್ತಿದ್ದರು. ದಿನಾಂಕ : 31-3-2014 ರಂದು ಅವರ ಅಢಾವೆ ಪತ್ರಿಕೆ ಈ ಕೆಳಗಿನಂತಿದೆ.

ದಿನಾಂಕ 31-3-2014 ರ ಅಢಾವೆ ಪತ್ರಿಕೆ

ಜವಾಬ್ದಾರಿಗಳು	₹	₹	ಆಸ್ತಿಗಳು	₹	₹
ಸಾಹುಕಾರರು		15,000	ಕೈಯಲ್ಲಿನ ನಗದು		1,000
ಆನಂದನ ಸಾಲ		5,000	ಬ್ಯಾಂಕಿನಲ್ಲಿನ ನಗದು		20,000
ಕೊಡತಕ್ಕ ಹುಂಡಿಗಳು		10,000	ಸಾಲಗಾರರು	26,000	
ಬ್ಯಾಂಕ್ ಸಾಲ		8,000	-ಕಾಯ್ದಿಟ್ಟ ಕರಡು ನಿಧಿ	1,000	25,000
ಮೀಸಲು ನಿಧಿ		12,000	ಬರತಕ್ಕ ಹುಂಡಿಗಳು		5,000
ಲಾಭ-ನಷ್ಟದ ಖಾತೆ		10,000	ಹೂಡಿಕೆಗಳು		18,000
ಬಂಡವಾಳಗಳು:			ಯಂತ್ರೋಪಕರಣ		25,000
ಆನಂದ		20,000	ಪೀಠೋಪಕರಣ		16,000
ಚೆಂದು		20,000			
ವಿಜಯ್		10,000			
		1,10,000			**1,10,000**

ಮೇಲಿನ ದಿನಾಂಕದಂದು ಸಂಸ್ಥೆ ಈ ಕೆಳಗಿನ ಷರತ್ತುಗಳೊಂದಿಗೆ ವಿಸರ್ಜನೆಯಾಯಿತು.

a) ಆಸ್ತಿಗಳಿಂದ ಗಳಿಸಿದ್ದು :
   ಸಾಲಗಾರರು ₹ 24,000, ಬರತಕ್ಕ ಹುಂಡಿಗಳು ₹ 4,000
   ಹೂಡಿಕೆಗಳು ₹ 15,000, ಯಂತ್ರೋಪಕರಣ ₹ 22,000

b) ಚೆಂದು ರವರು ₹ 10,000 ಕ್ಕೆ ಪೀಠೋಪಕರಣವನ್ನು ತೆಗೆದುಕೊಂಡರು.

c) ಸಾಹುಕಾರರು ಮತ್ತು ಕೊಡತಕ್ಕ ಹುಂಡಿಯನ್ನು ಶೇ. 5 ರಂತೆ ಸೋಡಿಯ ಪ್ರಕಾರ ಪಾವತಿಸಿದೆ.

d) ಬ್ಯಾಂಕಿನ ಸಾಲ ಮರುಪಾವತಿಯಾಗಿದೆ.

e) ದಾಖಲಾಗದ ಹೂಡಿಕೆಯಿಂದ ಗಳಿಸಿದ್ದು ₹ 4,000.

f) ವಿಸರ್ಜನೆ ವೆಚ್ಚ ₹ 2,250.

ತಯಾರಿಸಿ :

i) ವಿಲೇವಾರಿ ಖಾತೆ

ii) ಪಾಲುಗಾರರ ಬಂಡವಾಳ ಖಾತೆಗಳು.

iii) ಬ್ಯಾಂಕ್ ಖಾತೆ

ನಿರೂಪಣೆ :

ಖರ್ಚು **ವಿಲೇವಾರಿ ಖಾತೆ** ಜಮಾ

ವಿವರಗಳು		₹	ವಿವರಗಳು		₹
ಸಾಲಗಾರರ ಖಾತೆಗೆ		26,000	ಕಾಯ್ದಿಟ್ಟ ಕರಡು ನಿಧಿ ಖಾತೆಯಿಂದ		1,000
ಬರಬೇಕಾದ ಹುಂಡಿಗಳ ಖಾತೆಗೆ		5,000	ಸಾಹುಕಾರರ ಖಾತೆಯಿಂದ		15,000
ಹೂಡಿಕೆಗಳ ಖಾತೆಗೆ		18,000	ಕೊಡಬೇಕಾದ ಹುಂಡಿಗಳ ಖಾತೆಯಿಂದ		10,000
ಯಂತ್ರಗಳ ಖಾತೆಗೆ		25,000	ಬ್ಯಾಂಕು ಸಾಲದ ಖಾತೆಯಿಂದ		8,000
ಪೀಠೋಪಕರಣಗಳ ಖಾತೆಗೆ		16,000	ಬ್ಯಾಂಕು ಖಾತೆಯಿಂದ:		
ಬ್ಯಾಂಕು ಖಾತೆಗೆ:			ಸಾಲಗಾರರು	24,000	
ಕೊಡಬೇಕಾದ ಹುಂಡಿಗಳು	9,500		ಬರಬೇಕಾದ ಹುಂಡಿಗಳು	4,000	
ಸಾಹುಕಾರರು	14,250		ಹೂಡಿಕೆಗಳು	15,000	
ಬ್ಯಾಂಕು ಸಾಲ	8,000	31,750	ಯಂತ್ರಗಳು	22,000	
ಬ್ಯಾಂಕು ಖಾತೆಗೆ		2,250	ದಾಖಲೆಯಾಗಿಲ್ಲದ		
(ವೆಚ್ಚ ನೀಡಿದ್ದು)			ಹೂಡಿಕೆಗಳು	4,000	69,000
			ಚೆಂದು ಬಂಡವಾಳ		
			ಖಾತೆಯಿಂದ		10,000
			(ಪೀಠೋಪಕರಣ ತೆಗೆದು		
			ಕೊಂಡಿದ್ದು)		
			ನಷ್ಟ–ಪಾಲುದಾರರ ಖಾತೆಗೆ		
			ವರ್ಗಾವಣೆ ಮಾಡಿದ್ದು:		
			ಆನಂದ್	4,400	
			ಚೆಂದು	4,400	
			ವಿಜಯ್	2,200	11,000
		1,24,000			**1,24,000**

ಖರ್ಚು **ಪಾಲುದಾರರ ಬಂಡವಾಳ ಖಾತೆಗಳು** ಜಮಾ

ವಿವರಗಳು	ಆನಂದ್ ₹	ಚೆಂದು ₹	ವಿಜಯ್ ₹	ವಿವರಗಳು	ಆನಂದ್ ₹	ಚೆಂದು ₹	ವಿಜಯ್ ₹
ವಿಲೇವಾರಿ ಖಾತೆಗೆ (ಪೀಠೋಪಕರಣ ತೆಗೆದುಕೊಂಡಿದ್ದು)	-	10,000	-	ಆರಂಭದ ಶಿಲ್ಕು	20,000	20,000	10,000
				ಮೀಸಲು ನಿಧಿ ಖಾತೆಯಿಂದ	4,800	4,800	2,400
				ಲಾಭ-ನಷ್ಟ ಖಾತೆಯಿಂದ	4,000	4,000	2,000
ವಿಲೇವಾರಿ ಖಾತೆಗೆ (ನಷ್ಟ)	4,400	4,400	2,200				
ಬ್ಯಾಂಕು ಖಾತೆಗೆ	24,400	14,400	12,200				
	28,800	**28,800**	**14,400**		**28,800**	**28,800**	**14,400**

ಖರ್ಚು **ಬ್ಯಾಂಕು ಖಾತೆ** ಜಮಾ

ವಿವರಗಳು	₹	ವಿವರಗಳು	₹
ಆರಂಭದ ಶಿಲ್ಕು	20,000	ವಿಲೇವಾರಿ ಖಾತೆಯಿಂದ (Liabilities paid)	31,750
ನಗದು ಖಾತೆಗೆ	1,000		
ವಿಲೇವಾರಿ ಖಾತೆಗೆ (ಆಸ್ತಿಗಳು ಮಾರಾಟ)	69,000	ವಿಲೇವಾರಿ ಖಾತೆಯಿಂದ (Expenses Paid)	2,250
		ಆನಂದನ ಸಾಲದ ಖಾತೆಯಿಂದ	5,000
		ಆನಂದನ ಬಂಡವಾಳ ಖಾತೆಯಿಂದ	24,400
		ಚೆಂದು ಬಂಡವಾಳ ಖಾತೆಯಿಂದ	14,400
		ವಿಜಯ್ ಬಂಡವಾಳ ಖಾತೆಯಿಂದ	12,200
	90,000		**90,000**

ನಿದರ್ಶನ 3.

ಅನಿತಾ ಮತ್ತು ಸುನಿತಾ ಪಾಲುಗಾರರಾಗಿದ್ದು ಲಾಭ – ನಷ್ಟವನ್ನು ಸಮನಾಗಿ ಹಂಚಿಕೊಳ್ಳುತ್ತಿದ್ದರು. ಅವರ ಅಢಾವೆ ಪತ್ರಿಕೆ ದಿನಾಂಕ : 31–3–2014 ರಂದು ಈ ಕೆಳಗಿನಂತೆ ಇದೆ:

ದಿನಾಂಕ 31–3–2014 ರ ಅಢಾವೆ ಪತ್ರಿಕೆ

ಹೊಣೆಗಾರಿಕೆಗಳು	₹	₹	ಆಸ್ತಿಗಳು	₹	₹
ಕೊಡತಕ್ಕ ಹುಂಡಿಗಳು		6,000	ಬ್ಯಾಂಕಿನಲ್ಲಿ ನಗದು		10,000
ಧನಿಗಳು		20,000	ಬರತಕ್ಕ ಹುಂಡಿಗಳು		4,000
ಅನಿತಾಳ ಸಾಲ		5,000	ಋಣಿಗಳು	28,000	
ವನಿತಾಳ ಸಾಲ		5,000	–ಕಾಯ್ದಿರಿಸಿದ ನಿಧಿ	2,000	26,000
ಸಂಚಿತ ನಿಧಿ		30,000	ಸರಕು		40,000
ಬಂಡವಾಳಗಳು :			ಹೂಡಿಕೆಗಳು		12,000
ಅನಿತಾ	50,000		ಪೀಠೋಪಕರಣ		14,000
ಸುನಿತಾ	50,000		ಯಂತ್ರಗಳು		20,000
			ಕಟ್ಟಡಗಳು		40,000
		1,66,000			**1,66,000**